# ಯೋಜನಾ

ಸೆಪ್ಟೆಂಬರ್ 2023 ಅಭಿವೃದ್ಧಿ ಮಾಸಪತ್ರಿಕೆ ₹ 22

# ಆಡಳಿತ ಮತ್ತು ಸುಧಾರಣೆ



ವಿಶೇಷ ಲೇಖನ
ಉತ್ತರದಾಯಿತ್ವ ಮತ್ತು ಹಣಕಾಸು ಆಡಳಿತ
ಗಿರೀಶ್ ಚಂದ್ರ ಮುರ್ಮು

ಪ್ರಧಾನ ಲೇಖನ
ಅಧಿಕಾರಿ ವರ್ಗದ ನಿರೂಪಣೆ
ಶ್ರೀನಿವಾಸ ಕಾಟಿಕಿಥಲ

ಕೇಂದ್ರ ಪ್ರಜ್ಞೆ
ಗ್ರಾಹಕರ ಮತ್ತು ವ್ಯಾಪಾರಗಳ ಹಿತ ರಕ್ಷಣೆ
ರವನೀತ್ ಕೌರ್

Scanned with ACE Scanner

ಸೆಪ್ಟೆಂಬರ್ 2023

ಸಂಚಿಕೆ-2
Issue-2

ಸಂಪುಟ-39
Volume-39

# ಯೋಜನಾ
## YOJANA Kannada

ಮುಖ್ಯ ಸಂಪಾದಕರು
**ಮನೋಗ್ಯಾನ್ ರಾಣಿಪಾಲ್**

ಹಿರಿಯ ಸಂಪಾದಕ
**ಯಶವಂತ್ ಶಹನಾಯಿ**

ನಮ್ಮ ಪ್ರತಿನಿಧಿಗಳು
ಅಹಮದಾಬಾದ್ : ಸುಮನ್‌ಬೆನ್ ಎ. ಮಚ್ಚರ್,
ಬೆಂಗಳೂರು : ಯಶವಂತ್ ಶಹನಾಯಿ
ಭುವನೇಶ್ವರ : ಇತಿಶ್ರೀ ಸಿಂಗ್ ರಾಥೂರ್
ಚೆನ್ನೈ : ಸಂಜಯ್ ಘೋಷ್
ಗುವಾಹತಿ : ಮಾರೂಫ್ ಆಲಂ
ಹೈದರಾಬಾದ್ : ಕೃಷ್ಣ ವಂದನಾ ಪಿ
ಜಲಂಧರ್ : ಗಗನ್‌ದೀಪ್ ಕೌರ್ ದೇವಗನ್
ಕೋಲ್ಕತ್ತಾ: ಸುಮಿತಾ ಚಕ್ರವರ್ತಿ
ಮುಂಬಯಿ : ಸಂಗೀತಾ ಗೋಡ್ಬೋಲೆ
ತಿರುವನಂತಪುರಂ : ಸುಧಾ ಎಸ್. ನಂಬೂದ್ರಿ

ಜಂಟಿ ನಿರ್ದೇಶಕರು (ಮುದ್ರಣ)
**ಡಿ.ಕೆ.ಸಿ. ಹೃದಯ್‌ನಾಥ್**

ಮುಖಪುಟ ವಿನ್ಯಾಸ
**ಬಿಂದೂ ವರ್ಮಾ**

ಯೋಜನೆಯ ಸಂದೇಶವನ್ನು ಎಲ್ಲ ಜನರಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ. ಚಿತ್ರಗಳು ಸಾಂದರ್ಭಿಕ.**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : kannada-yojana@gov.in
www.publicationsdivision.nic.in

## ಈ ಸಂಚಿಕೆಯಲ್ಲಿ..........

**ಸಂಪಾದಕೀಯ** 2

**ಅಧಿಕಾರಿ ವರ್ಗದ ನಿರೂಪಣೆ** 3
* ಶ್ರೀನಿವಾಸ ಕಾಟಿಕಿಥಲ

**ಉತ್ತರದಾಯಿತ್ವ ಮತ್ತು ಹಣಕಾಸು ಆಡಳಿತ** 8
* ಗಿರೀಶ್ ಚಂದ್ರ ಮುರ್ಮು

**ಗ್ರಾಹಕರ ಮತ್ತು ವ್ಯಾಪಾರಗಳ ಹಿತ ರಕ್ಷಣೆ** 13
* ರವನೀತ್ ಕೌರ್

**ಸಂಸದೀಯ ಸಮಿತಿ; ಪಾತ್ರ–ವ್ಯಾಪ್ತಿ ಬಲವರ್ಧನೆ** 18
* ಅಲಾಯ ಪುರೇವಾಲ್ ** ಎಂ.ಆರ್. ಮಾಧವನ್

**ಸಾಂವೈಧಾನಿಕ ಸಂಸ್ಥೆಗಳ ಪಾತ್ರ** 23
* ಪ್ರೊ. ಜೆ. ಎಸ್. ಬಾಜಪೇಯಿ ** ಡಾ.ರಾಘವ್ ಪಾಂಡೆ

**ಆದಿತ್ಯ ಎಲ್–1 ಉಡಾವಣೆ** 25

**ಚಂದ್ರನ ಮೇಲ್ಮೈ ಮೇಲೆ ನವಿರಾಗಿ ಇಳಿದ ವಿಕ್ರಂ** 26

**ಚಂದ್ರನ ಮೇಲೆ ಭಾರತದ ಛಾಪು** 27

**ಇಸ್ರೋಗೆ ಪ್ರಧಾನ ಮಂತ್ರಿಗಳ ಭೇಟಿ** 28

**ಮಹಿಳಾ ಸಬಲೀಕರಣ: ಸುಧಾರಣಾ ಕ್ರಮಗಳು** 29
* ರೇಖಾ ಶರ್ಮಾ

**ಆಡಳಿತಾತ್ಮಕ ಸುಧಾರಣೆ** 33
* ವಿ ಶ್ರೀನಿವಾಸ್

**ನೇರ ತೆರಿಗೆ ಸುಧಾರಣೆ** 37
* ಕಮಲೇಶ್ ಚಂದ್ರ ವರ್ಷಣಿ

**ಗ್ರಾಹಕ ಸಂರಕ್ಷಣಾ ಕಾಯಿದೆ – 2019** 41

**ಭಾರತೀಯ ಕಾನೂನು ಆಯೋಗ** 43

**ನಿಮಗಿದು ತಿಳಿದಿದೆಯೇ?** 45

**ಭಾರತ ಸಂವಿಧಾನದ ಶ್ರೇಷ್ಠತೆ ಮತ್ತು ವೈಶಿಷ್ಟ್ಯತೆ** 47
* ಡಾ. ಆರ್.ಶಂಕರಪ್ಪ

**ಮನದ ಮಾತು** 50

**ನ್ಯಾಯ ಬಂಧು** 52

**ಯೋಜನಾ ಚಂದಾ ವಿವರ**
ಒಂದು ವರ್ಷಕ್ಕೆ 230.00

**ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಮ್ಮ ಬೆಂಗಳೂರು ವಿಳಾಸಕ್ಕೆ ಕಳಿಸಬಹುದಾಗಿದೆ.**


ಆನ್‌ಲೈನ್ ಮೂಲಕ ಚಂದಾದಾರರಾಗಲು ಸಂಪರ್ಕಿಸಬೇಕಾದ ವೆಬ್‌ಸೈಟ್
*Log on to*
**http://publicationsdivision.nic.in/,**
*in collaboration with* **bharatkosh.gov.in**

ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು **PUBLICATIONS DIVISION, MINISTRY OF I & B, GOVERNMENT OF INDIA** ಹೆಸರಿನಲ್ಲಿ **CHENNAI** ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ಬೆಂಗಳೂರು ವಿಳಾಸಕ್ಕೆ ಕಳುಹಿಸಬೇಕು.

@ DPD_India @publicationsdivision @dpd_india

Scanned with ACE Scanner

## ಸಂಪಾದಕೀಯ




ಆಡಳಿತ, ದೇಶವನ್ನು ಸಾಮರಸ್ಯ ಮತ್ತು ಸಮೃದ್ಧಿಯತ್ತ ಕೊಂಡೊಯ್ಯುವ ಚಾಲಕ ಕಲೆಯಾಗಿದೆ. ವೈವಿಧ್ಯಮಯ ಪರಂಪರೆ ಹೊಂದಿರುವ ಭಾರತದಲ್ಲಿ ಆಡಳಿತದ ಯಾನ ಸವಾಲು ಹಾಗೂ ಸದವಕಾಶ ಎರಡನ್ನೂ ಕಂಡಿದೆ. ಕಾಲಾನುಕ್ರಮದಲ್ಲಿ ಆಡಳಿತದ ಚಿತ್ರಣ, ಅಭಿವೃದ್ಧಿಯನ್ನು ತ್ವರಿತಗೊಳಿಸಲು ಹಾಗೂ ಜನಜೀವನ ಉತ್ತಮ ಪಡಿಸುವ ನಿಟ್ಟಿನಲ್ಲಿ ಆಡಳಿತವನ್ನು ಪುನರ್ ವ್ಯಾಖ್ಯಾನಿಸುವ ಸುಧಾರಣೆಗಳ ಸರಣಿಗೆ ಸಾಕ್ಷಿಯಾಗಿದೆ.

ಸುಧಾರಣೆ, ಅಭಿವೃದ್ಧಿ ಹೊಂದುತ್ತಿರುವ ಸಮಾಜಕ್ಕೆ ಅನಿವಾರ್ಯ ಕ್ರಮವಾಗಿದೆ. ಅದು ಸಾಮಾಜಿಕವಾಗಿ ಬಂದಂತಹ ಬೇಡಿಕೆಯಾಗಿರಬಹುದು ಅಥವಾ ಬದಲಾದ ಜಾಗತಿಕ ನಿಯಮಗಳ ಅನುಸಾರವಾಗಿರಬಹುದು; ಬೆಳೆಯುತ್ತಿರುವ ಮತ್ತು ನವಯುಗದ ಸಮಾಜದ ಆಯಾಮ ಎದುರಿಸುತ್ತಿರುವ ಸವಾಲು ಮತ್ತು ಅವಕಾಶ ಸಾಕಾರಕ್ಕೆ ಬದಲಾವಣೆ ಅತಿ ಅಗತ್ಯ. ಚುನಾವಣಾ ಪದ್ಧತಿಯಿಂದ ಸಾಮಾಜಿಕ ನೀತಿವರೆಗೆ, ಆರ್ಥಿಕ ನಿಯಂತ್ರಣದಿಂದ ಹಿಡಿದು ಪರಿಸರ ಸಂರಕ್ಷಣೆಯವರೆಗೆ – ಹೀಗೆ ಅದರ ವ್ಯಾಪ್ತಿ ವ್ಯಾಪಕವಾಗಿದೆ. ಭಾರತ, ಪ್ರಜೆಗಳು ಮತ್ತು ಸರ್ಕಾರಗಳನ್ನು ಹತ್ತಿರಕ್ಕೆ ತಂದಿದ್ದು, ವಿದ್ಯುನ್ಮಾನ – ಆಡಳಿತ ಮಾದರಿಯ ನಾಗರಿಕ ಪ್ರತಿಕ್ರಿಯಾತ್ಮಕ ಕ್ರಮಗಳ ಮೂಲಕ ರೂಪಾಂತರದ ಸುಧಾರಣೆಗಳನ್ನು ಅನುಷ್ಠಾನಗೊಳಿಸಿದೆ. ಪ್ರಸ್ತುತ ಡಿಜಿಟಲ್ ಕಾಲಮಾನ, ನಾಗರಿಕರ ಹಕ್ಕು ಮತ್ತು ಅಗತ್ಯ ರಕ್ಷಣೆ ಒದಗಿಸುವ ಜೊತೆಗೆ ಪಾರದರ್ಶಕ ಮತ್ತು ಮುಕ್ತ ಸರ್ಕಾರಿ ಪ್ರಕ್ರಿಯೆ ಖಾತರಿಪಡಿಸಿದೆ.

ಆರ್ಥಿಕ ಸುಧಾರಣೆಗಳು ಭಾರತವನ್ನು ಜಾಗತಿಕ ವೇದಿಕೆಯತ್ತ ಮುನ್ನುಗ್ಗಿಸಿವೆ. 1990ರ ದಶಕದಲ್ಲಿ ಕೈಗೊಂಡ ಉದಾರೀಕರಣ ನೀತಿ ವಿದೇಶಿ ಬಂಡವಾಳ ಹೂಡಿಕೆಗೆ ಬಾಗಿಲು ತೆರೆಯಿತು; ಆರ್ಥಿಕ ಬೆಳವಣಿಗೆಗೆ ಮತ್ತು ಆವಿಷ್ಕಾರಗಳಿಗೆ ಒತ್ತಾಸೆ ನೀಡಿತು. 2017ರಲ್ಲಿ ಕೈಗೊಳ್ಳಲಾದ ಅತ್ಯಂತ ಪ್ರಮುಖವಾದ ಸುಧಾರಣೆ ಎಂದರೆ, ಜಿಎಸ್‌ಟಿ ಸರಕು ಮತ್ತು ಮಾರಾಟ ತೆರಿಗೆ. ಇದು ಸಂಕೀರ್ಣಮಯ ಪರೋಕ್ಷ ತೆರಿಗೆಗಳ ಜಾಲವನ್ನು ಬದಲಿಸಿ, ನಿರೀಕ್ಷಿತ ತೆರಿಗೆ ವ್ಯವಸ್ಥೆ ರೂಪಿಸಿತು; ಸುಲಭ ವ್ಯಾಪಾರದ ಪರಿಸರ ಕಲ್ಪಿಸಿತು. ಉತ್ತರದಾಯಿತ್ವ ಪ್ರಮುಖ ವಿಚಾರವಾಗಿದ್ದು ವಿವಿಧ ಸಂಸ್ಥೆಗಳ ಮೂಲಕ ಅದನ್ನು ಬಲಪಡಿಸುವ ಕ್ರಮಗಳು ಜಾರಿಯಲ್ಲಿವೆ. ಪ್ರಜಾಸತ್ತಾತ್ಮಕ ಮತ್ತು ಉತ್ತರದಾಯಿತ್ವದ ಆಡಳಿತ ವ್ಯವಸ್ಥೆಯಲ್ಲಿ ಚುನಾವಣಾ ಆಯೋಗ, ಕಂಪ್ಟ್ರೋಲರ್ ಆ್ಯಂಡ್ ಆಡಿಟರ್ ಜನರಲ್, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮೊದಲಾದ ಸಂವೈಧಾನಿಕ ಸಂಸ್ಥೆಗಳ ಪಾತ್ರ ಮಹತ್ತರವಾಗಿದೆ. ಇ ಆಡಳಿತದಿಂದಾಗಿ ಆಡಳಿತಾತ್ಮಕ ಪ್ರಕ್ರಿಯೆಗಳು ಸರಾಗಗೊಂಡಿವೆ. ಅಡೆತಡೆ ನಿವಾರಣೆಯಾಗಿದ್ದು, ದಕ್ಷ ಸೇವಾ ನೀಡಿಕೆ ಸಾಧ್ಯವಾಗಿದೆ. ಡಿಜಿಟಲ್ ವೇದಿಕೆಗಳು ನಾಗರಿಕರು ಮತ್ತು ಸರ್ಕಾರಗಳ ನಡುವಿನ ಸೇತುವೆಯಾಗಿ ಅಂತರವನ್ನು ನಿವಾರಿಸಿದ್ದು, ನೇರ ಪ್ರತಿಕ್ರಿಯೆ ಹಾಗೂ ತಕ್ಷಣದ ಅಭಿಪ್ರಾಯ ಸಂವಹನಕ್ಕೆ ಅವಕಾಶ ಕಲ್ಪಿಸಿವೆ.

ಆರ್ಥಿಕವಾಗಿ ಎಲ್ಲರನ್ನು ಒಳಗೊಳ್ಳಲು ಹಾಗೂ ಬ್ಯಾಂಕಿಂಗ್ ಮತ್ತು ವಿಮೆ ಸೌಲಭ್ಯ ಎಲ್ಲರಿಗೂ ಲಭ್ಯವಾಗುವಂತೆ ಮಾಡಲು ಸಮಾಜ ಕಲ್ಯಾಣ ಕ್ಷೇತ್ರದಲ್ಲಿ ಪ್ರಧಾನಮಂತ್ರಿ ಜನ್‌ಧನ್ ಯೋಜನಾ (ಪಿಎಂಜೆಡಿವೈ) ಆರಂಭಿಸಲಾಯಿತು. ಸ್ವಚ್ಛತೆ, ಶುಚಿ ಮತ್ತು ಶುದ್ಧೀಕರಣವನ್ನೇ ಪ್ರಮುಖವಾಗಿಟ್ಟುಕೊಂಡು ತರಲಾದ ಮತ್ತೊಂದು ಮುಂಚೂಣಿ ಕಾರ್ಯಕ್ರಮ ಸ್ವಚ್ಛ ಭಾರತ ಅಭಿಯಾನ ಭಾರತವನ್ನು ಬಯಲು ಶೌಚ ಮುಕ್ತ ದೇಶವನ್ನಾಗಿ ಮಾರ್ಪಡಿಸುವ ಅಭಿಯಾನವಾಗಿದೆ. ಇತ್ತೀಚಿಗಿನ ದತ್ತಾಂಶ ರಕ್ಷಣಾ ಕಾಯ್ದೆ, ವ್ಯಕ್ತಿಯ ಖಾಸಗಿ ಮತ್ತು ವೈಯಕ್ತಿಕ ದತ್ತಾಂಶಗಳಿಗೆ ಸಂರಕ್ಷಣೆ ಒದಗಿಸುವ ಉದ್ದೇಶ ಹೊಂದಿದೆ. ದತ್ತಾಂಶ ನಿರ್ವಹಣೆ, ಅನುಮತಿ ನಿರ್ವಹಣೆ ಮತ್ತು ಪಾರದರ್ಶಕತೆ ವಿಚಾರದಲ್ಲಿ ಕಠಿಣ ಗುಣಮಟ್ಟದ ಆದ್ಯತೆ ನೀಡಲಾಗಿದ್ದು ಬಳಕೆದಾರರು ತಮ್ಮ ಮಾಹಿತಿ ಮೇಲೆ ಹೊಂದಿರುವ ನಿಯಂತ್ರಣವನ್ನು ಹೆಚ್ಚಿಸಿದೆ. ಇದು ನಾಗರಿಕರ ಹಕ್ಕು ಬಲಗೊಳಿಸುತ್ತದೆ; ಡಿಜಿಟಲ್ ಪ್ರತಿಕ್ರಿಯೆಗಳ ವಿಶ್ವಾಸ ವರ್ಧಿಸುತ್ತದೆ; ಇದು ಜಾಗತಿಕ ದತ್ತಾಂಶ ರಕ್ಷಣಾ ನಿಯಮಗಳಿಗೆ ಸಮನಾಗಿ ಭಾರತಕ್ಕೆ ಆಧುನಿಕ ಮತ್ತು ಖಾಸಗಿತನ ಕಾಳಜಿಯ ಸ್ಥಾನಮಾನ ಒದಗಿಸಿದೆ. ಕರ್ತವ್ಯ ಕಾಲದ ಭಾರತದ ಆಡಳಿತ ಸುಧಾರಣೆಯು ಭವ್ಯ ಭವಿತವ್ಯಕ್ಕಾಗಿ ಇರುವ ಒಗ್ಗೂಡಿದ ಪ್ರಯತ್ನಗಳ ಪ್ರತೀಕವಾಗಿದೆ. ಪ್ರಜೆಗಳು ಕರ್ತವ್ಯ ಮತ್ತು ಪ್ರಗತಿಯ ತತ್ವಗಳಿಂದ ನಿರ್ದೇಶಿತರಾಗಿ, ತಮ್ಮ ಜವಾಬ್ದಾರಿಗಳನ್ನು ಅಪ್ಪಿ ಉತ್ಸುಕತೆಯಿಂದ ಮುನ್ನಡೆಯುವುದೇ ಪಥ ಸಂಚಲನದ ಭರವಸೆಯ ದಾರಿದೀಪವಾಗಿದೆ. ವಿವಿಧ ಸಂಸ್ಥೆಗಳು ಮತ್ತು ಸಾಂವೈಧಾನಿಕ ಅಂಗಗಳು ಪಾರದರ್ಶತೆ, ಒಳಗೊಳ್ಳುವಿಕೆ ಮತ್ತು ಉತ್ತರದಾಯಿತ್ವ ಸರ್ಕಾರ/ ಆಡಳಿತಕ್ಕಾಗಿ ಇಂತಹ ಮಾರ್ಗ ಕಲ್ಪಿಸುತ್ತಿವೆ. ಭಾರತ ನಾಗರಿಕರ ಭಾಗವಹಿಸುವಿಕೆ ಮತ್ತು ಉತ್ತಮ ಆಡಳಿತದ ಮೂಲಕ, ಸಮಾಜ ಸಮೃದ್ಧಿಗೊಳ್ಳುವ ರೂಪಾಂತರದ ಕಥನ ಬರೆಯಲು ಕಾತುರವಾಗಿದೆ. ಯೋಜನಾದ ಪ್ರಸ್ತುತ ಸಂಚಿಕೆ, ಆಡಳಿತದ ವಿವಿಧ ಉಪಕ್ರಮ, ಕುರಿತಾಗಿ ಸ್ಥೂಲ ನೋಟ ಒದಗಿಸಲು ಪ್ರಯತ್ನಿಸಿದೆ.



Scanned with ACE Scanner

# ಅಧಿಕಾರಿ ವರ್ಗದ ನಿರೂಪಣೆ

* ಶ್ರೀನಿವಾಸ ಕಾಟಿಕಿಥಲ



ಸಂಕೀರ್ಣವಾದ ಪ್ರಜಾಸತ್ತಾತ್ಮಕ, ರಾಜಕೀಯ ಮತ್ತು ಮಹತ್ವಾಕಾಂಕ್ಷೆಯ ಜನಸಮೂಹಗಳಿರುವ (ಈಗ ಹೆಚ್ಚುತ್ತಿರುವ ವಿವಿಧ ಅಭಿಪ್ರಾಯ/ಧ್ವನಿಗಳ ಸಂಯೋಜನೆಗಳಿಂದ) ವಿಶಾಲವಾದ ವೈವಿಧ್ಯಮಯ ಸಮಾಜವನ್ನು ನಿರ್ವಹಿಸಲು ನಾಗರಿಕ ಸೇವಕ, ಸಲ್ಲಿಸುವ ಸೇವೆಗಳ ವಿಧಾನ ಮತ್ತು ನಾಗರಿಕ ಸೇವೆಯ ಕುರಿತಾಗಿ ಮರುಕಲ್ಪನೆಯ ಅಗತ್ಯವಿದೆ. ಮಿಷನ್ ಕರ್ಮಯೋಗಿಯು ಹೊಸದಾಗಿ ಅಧಿಕಾರಿ ವರ್ಗವನ್ನು ನಿರ್ಮಿಸಲು ಪ್ರಯತ್ನಿಸುವುದಿಲ್ಲ. ಮಿಷನ್ ಕರ್ಮಯೋಗಿಯ ಮೂಲಕ, ನಿಯಮ ಬದ್ಧನಾಗಿರುವ 'ಅಧಿಕಾರಿ'ಯು'ಆಳುವವನಿಂದ ಸೇವೆಮಾಡುವ ಪಾತ್ರ'ವಾಗಿ ಪರಿವರ್ತಿತವಾಗಿ ಸಹಾನುಭೂತಿಯುಳ್ಳ ನಾಗರಿಕ ಸೇವಕನಾಗಿ ರೂಪಾಂತರಗೊಳ್ಳುವ ನಿರೀಕ್ಷೆಯಿದೆ. ಹೀಗಾಗಿ, ಭಾಗಿದಾರಿ/ಭಾಗಿಯಾಗುವ ಮನೋಭಾವದ ಮೇಲೆ ಸರ್ಕಾರವು ಒತ್ತು ನೀಡಿದೆ. ಇದರ ಮೂಲಕ ನಾಗರಿಕರಿಗೆ ಸರ್ಕಾರಿ ಪ್ರಕ್ರಿಯೆಗಳ ಮೇಲಿರುವ ಅಪನಂಬಿಕೆಯನ್ನು ಹೋಗಲಾಡಿಸಿ ನಾವಿನ್ಯತೆ ಮತ್ತು ನಾಗರಿಕರಿಗೆ ಮೊದಲ ಆದ್ಯತೆ ಎನ್ನುವ ಸಂಕೇತವನ್ನು ಜನರಿಗೆ ತಲುಪಿಸುತ್ತದೆ. ಸಾಂಪ್ರದಾಯಿಕವಾದ ನಿಯಮಕ್ಕೆ ಬದ್ಧನಾಗಿರುವ 'ಅಧಿಕಾರಿ'ಯಿಂದ ಪಾತ್ರವಹಿಸುವುದೇ ಮುಖ್ಯವಾಗಿರುವ 'ನಾಗರಿಕ ಸೇವಕ'ನಾಗಿ ರೂಪಾಂತರಗೊಳ್ಳುವುದು ಸಾರ್ವಜನಿಕ ಕಲ್ಯಾಣದ ದೃಷ್ಟಿಯಿಂದ ಉತ್ತಮವಾದ ದೀರ್ಘಾವಧಿಯ ಅತ್ಯಗತ್ಯ ಸುಧಾರಣೆಯಾಗಿದೆ.

ಪ್ರಜಾಪ್ರಭುತ್ವ ಸರ್ಕಾರದಲ್ಲಿ ನಾಗರಿಕ ಸೇವೆಯು ಒಂದು ಪ್ರಮುಖ ಅಂಗವಾಗಿದೆ. ನೀತಿ ನಿರೂಪಣೆಯಲ್ಲಿ ರಾಜಕೀಯ ಕಾರ್ಯನಿರ್ವಾಹಕರಿಗೆ ನೆರವಾಗುವುದು, ಅವುಗಳನ್ನು ವಿವಿಧ ಕಲ್ಯಾಣ ಕಾರ್ಯಕ್ರಮಗಳ ಮೂಲಕ ಅನುಷ್ಠಾನಗೊಳಿಸುವುದು, ವಿವಿಧ ಸೇವೆಗಳ ಮೂಲಕ ವ್ಯವಸ್ಥೆಯನ್ನು ನಿರ್ವಹಿಸುವುದು ಅದರ ಜವಾಬ್ದಾರಿಯಾಗಿರುತ್ತದೆ. ತನ್ನ ಯಶಸ್ವಿ ಕೆಲಸಗಳ ಮೂಲಕ ಇದು ಕಾರ್ಯಾಂಗ ಮತ್ತು ಶಾಸಕಾಂಗ ನೀತಿಗೆ ಸಾರ್ವಜನಿಕ ಬೆಂಬಲವನ್ನು ಸೃಷ್ಟಿಸುತ್ತದೆ. ಅದರೊಂದಿಗೆ, ತನ್ನ ವೈಫಲ್ಯಗಳ ಮೂಲಕ ಸ್ವತಃ (ಮತ್ತು ಚುನಾಯಿತ ಸರ್ಕಾರಗಳ) ಸಂಸತ್ತಿನ ಕಾರ್ಯಕಲಾಪಗಳ ಸಾಧನಗಳಿಗೆ ಜವಾಬ್ದಾರವಾಗಿರುತ್ತದೆ.


ತನ್ನ ಅಸಂಖ್ಯಾತ ಕ್ರಿಯೆಗಳ ಮೂಲಕ ನಾಗರಿಕ ಸೇವೆ, ಕಾರ್ಯನಿರ್ವಾಹಕರಿಗೆ ಸಹಾಯ ಮಾಡುತ್ತದೆ; ಲೆಕ್ಕಪರಿಶೋಧನೆಯ ಪ್ರಕ್ರಿಯೆಗಳ ಮೂಲಕ, ಶಾಸಕಾಂಗಕ್ಕೆ ಸಹಾಯ ಮಾಡುತ್ತದೆ; ಸರ್ಕಾರದ ವಿವಿಧ ಅಂಗಗಳಿಗೆ, ನ್ಯಾಯಾಂಗಕ್ಕೆ ಕೂಡ ಸಹಾಯ ಮಾಡುತ್ತದೆ. ಸಾರ್ವಜನಿಕ ಚಟುವಟಿಕೆ ಅಥವಾ ಆಡಳಿತದ ಪ್ರತಿಯೊಂದು ರೂಪದಲ್ಲೂ ಅಧಿಕಾರಿ ವರ್ಗ ಕುರಿತಾದ ಸಾಂಪ್ರದಾಯಿಕ ದೃಷ್ಟಿಕೋನವು ಕಾರ್ಯನಿರ್ವಾಹಕ ಕ್ಷೇತ್ರಕ್ಕೆ ಸೇವೆ ಸಲ್ಲಿಸುವ ಜನರಿಗೆ ಸೀಮಿತವಾಗಿದೆ. ಆದ್ದರಿಂದಲೇ ಈ ವಿಶ್ಲೇಷಣೆಯು ಜನಪ್ರಿಯ ವ್ಯಾಖ್ಯಾನಕ್ಕೆ ಸೀಮಿತವಾಗಿದೆ.

18 ನೇ ಶತಮಾನದಲ್ಲಿ ಜಾಕ್ವೆಸ್ ಗೌರ್ನೆ ಫ್ರಾನ್ಸ್‌ನಲ್ಲಿ 'ಅಧಿಕಾರಶಾಹಿ' ಪದವನ್ನು ಸೃಷ್ಟಿಸಿದರು. ಇದರ ಯುರೋಪಿಯನ್ ರೂಪವು ಫ್ರೆಡ್ರಿಕ್ ದಿ

* ನಿರ್ದೇಶಕರು, ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಆಡಳಿತ ಅಕಾಡಮಿ, ಮಸ್ಸೂರಿ. ಇಮೇಲ್: director-lbsnaa@gov.in



Scanned with ACE Scanner




ಗ್ರೇಟ್ಸ್ ಕಾಲದಲ್ಲಿ ವಿಕಸನಗೊಂಡಿತು. ಮ್ಯಾಕ್ಸ್ ವೆಬರ್ ವಿವರಿಸಿದ ಗುಣಲಕ್ಷಣಗಳನ್ನು ಅದು ಒಳಗೊಂಡಿತು. ಆದ್ದರಿಂದ ಇಂದಿನ ಆಧುನಿಕ ಕಾಲದಲ್ಲಿ ಔಪಚಾರಿಕ, ನಿರಾಕಾರ, ನಿಯಮಕ್ಕೆ ಬದ್ಧವಾದ ಮತ್ತು ಕ್ರಮಾನುಗತವಾದದ್ದು ಎನ್ನುವ ಆರೋಪ ಅದರ ಬಗ್ಗೆ ಕೇಳಿಬರುತ್ತದೆ. ಭಾರತದ ನಾಗರಿಕ ಸೇವೆಯು ಇವುಗಳಿಂದ ಮತ್ತು 1854 ರ ನಾರ್ತ್‌ಕೋಟ್–ಟ್ರೆವೆಲಿಯನ್ ವರದಿಯ ಆಲೋಚನೆಗಳಿಂದ ಪ್ರಭಾವಿತವಾಗಿದೆ. ಇದನ್ನು 1858 ರಲ್ಲಿ ರಾಣಿ ಜಾರಿಗೆ ತಂದರು. ಅಂದಿನಿಂದ ಮುಕ್ತ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಅರ್ಹತಾ ತತ್ವದ ಆಧಾರದ ಮೇಲೆ ಆಯೋಜಿಸಲು ಆರಂಭಿಸಲಾಯಿತು.

ಸ್ವತಂತ್ರ ಭಾರತದ ಸಂವಿಧಾನದ ಭಾಗ XIV ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್ (ಕೇಂದ್ರ ಲೋಕ ಸೇವಾ ಆಯೋಗ) ಮತ್ತು ರಾಜ್ಯ ಆಯೋಗಗಳನ್ನು ರಚಿಸುವ ಮೂಲಕ ಸಮರ್ಥವಾದ 'ಸಾರ್ವಜನಿಕ ಸೇವೆಗಳನ್ನು' ಒದಗಿಸುತ್ತದೆ. ಜೊತೆಗೆ ವೃತ್ತಿಪರತೆಯನ್ನು ಬೆಂಬಲಿಸುತ್ತದೆ. ಈ ಯೋಜನೆ ಅಡಿಯಲ್ಲಿ ಭಾರತೀಯ 'ಅಧಿಕಾರಿ'ಯು ಕಾರ್ಯಾಂಗದ ಸೃಷ್ಟಿಯಾಗಿದ್ದು ಶಿಸ್ತು, ನಿಯಂತ್ರಣ ಮತ್ತು ಸಂಪೂರ್ಣ ಮೇಲ್ವಿಚಾರಣೆಗೆ ಒಳಪಡುತ್ತಾನೆ/ಳೆ. ಪ್ರಪಂಚದ ಇತರ ಭಾಗಗಳಲ್ಲಿನ ಅಧಿಕಾರಿಗಳಿಗೆ ಹೋಲಿಸಿದರೆ ಇವರು ಹೆಚ್ಚು 'ಅವಕಾಶ' ಹೊಂದಿದ್ದಾರೆ (ಉದಾಹರಣೆಗೆ, ಅಮೆರಿಕಾದಲ್ಲಿನ ಹ್ಯಾಚ್ ಆಕ್ಟ್ ಹೆಚ್ಚು ಕಠಿಣ ನಿರ್ಬಂಧಗಳನ್ನು ವಿಧಿಸುತ್ತದೆ). ಅವರು ಹಲವು ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ. ಪಾತ್ರ ಸಂಪೂರ್ಣ ಅನುಷ್ಠಾನ ಸ್ವರೂಪದ್ದಾಗಿರಲಿ ಅಥವಾ ಅವುಗಳ ಸ್ವರೂಪ ಮತ್ತು



Scanned with ACE Scanner

कार्मिक एवं प्रशिक्षण विभाग
DEPARTMENT OF PERSONNEL & TRAINING

# ಕರ್ಮಯೋಗಿ

## ಮಾರ್ಗದರ್ಶಿ ಸೂತ್ರಗಳು 2023


- ನಾಗರಿಕ ಸೇವೆಗಳನ್ನು ಭವಿಷ್ಯದ ಜ್ಞಾನ, ಕೌಶಲ್ಯಗಳೊಂದಿಗೆ ಸನ್ನದ್ಧರಾಗಿಸುವುದು. ಜನ್ ಭಾಗೀದಾರಿಯನ್ನು ಮುಖ್ಯವಾಗಿರಿಸಿಕೊಂಡು ರಾಷ್ಟ್ರೀಯ ಆದ್ಯತೆಗಳಿಗನುಸಾರವಾಗಿ ಸೇವೆಯನ್ನು ಒದಗಿಸುವ ಮನೋಭಾವ ಬೆಳೆಸುವುದು.
- ನಾಗರಿಕ ಸೇವಾ ತರಬೇತಿ ಸಂಸ್ಥೆಗಳನ್ನು ನಾಗರಿಕ ಸೇವಾ ಸಾಮರ್ಥ್ಯ ವರ್ಧನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಕ್ರಿಯ ಅಂಗವಾಗಿಸುವುದು
- iGOT ಕರ್ಮಯೋಗಿ ವೇದಿಕೆಯು ಆನ್‌ಲೈನ್ ಸಾಮರ್ಥ್ಯ ನಿರ್ಮಾಣ ಮಧ್ಯಸ್ಥಿಕೆಗಳು ಸರ್ಕಾರದಲ್ಲಿ ಆಳುವಿಕೆಯಿಂದ ಮಾನವ ಸಂಪನ್ಮೂಲ ನಿರ್ವಹಣೆ ಪಾತ್ರವಾಗಿ ಬದಲಾಗುವ ಒಟ್ಟಾರೆ ಉದ್ದೇಶವನ್ನು ಸಾಧಿಸುವುದು.

ವ್ಯಾಪ್ತಿಯು ನಿಸ್ಸಂದಿಗ್ಧವಾಗಿದ್ದು ಕೆಲವು ಪೂರ್ಣಪ್ರಮಾಣದಲ್ಲಿ ನಿರ್ವಾಹಕ ಇಲ್ಲವೇ ಅರೆ ನ್ಯಾಯಾಂಗ ಸ್ವರೂಪದ್ದಾಗಿರುತ್ತದೆ. ರಾಜಕೀಯ ಕಾರ್ಯನಿರ್ವಾಹಕರಿಗೆ ಸಹಾಯ ಮಾಡುವಾಗ ಅವರು ಅರೆ ರಾಜಕೀಯ ಪಾತ್ರವನ್ನು ಕೂಡ ನಿರ್ವಹಿಸಬೇಕಾಗುತ್ತದೆ. ಅಧಿಕಾರಿ ವರ್ಗದ ಕಾರ್ಯಗಳು 'ನಿಯಮ ಬದ್ಧ'ವಾಗಿ ನಡೆಯುತ್ತವೆ. ಅದರಲ್ಲಿ ಮಾಡಬಹುದಾದ ಮತ್ತು ಮಾಡಬಾರದ ತತ್ವಗಳು ಉತ್ತಮ ಬಗೆಯಲ್ಲಿ ಸ್ಥಾಪಿತವಾಗಿವೆ. ಈ ವ್ಯವಸ್ಥೆಯಲ್ಲಿ ನಾಗರಿಕರು ಅಥವಾ ಭಾಗಿದಾರರೊಂದಿಗಿನ ಬಾಂಧವ್ಯ ಸುಗಮವಾಗಿರುತ್ತದೆ ಎನ್ನುವ ನಿರೀಕ್ಷೆಯಿರುತ್ತದೆ. ಆದರೆ ಅನುಭವವು ಆಗಾಗ್ಗೆ ಇದಕ್ಕೆ ತದ್ವಿರುದ್ಧವಾಗಿರುತ್ತದೆ. ಸೇವೆಗಳನ್ನು ಒದಗಿಸುವ ಗುಣಮಟ್ಟ, ಸಮಯ ಮತ್ತು ವಿಧಾನದ ಬಗ್ಗೆ ನಾಗರಿಕರ ತೃಪ್ತಿಮಟ್ಟ ಕಡಿಮೆ ಇದೆ. ಇಂತಹ ಸಂಕೀರ್ಣ ಅಧಿಕಾರಿವರ್ಗ ವ್ಯವಸ್ಥೆಗೆ ಹೊಂದುವಂತೆ ನಾಗರಿಕ ಸೇವಕನ ಸಾಮರ್ಥ್ಯ ವರ್ಧನೆ ಮಾಡುವುದು ಪ್ರಯಾಸದ ಕೆಲಸವಾಗಿದೆ. 'ಅಧಿಕಾರಿಯನ್ನು ನಿರ್ಮಿಸುವ' ಈ ಕಾರ್ಯವು ಹಲವಾರು ಸವಾಲುಗಳು ಮತ್ತು ತೊಂದರೆಗಳನ್ನು ಒಳಗೊಂಡಿದೆ.

'ಸರಿಯಾದ ಕೆಲಸಕ್ಕೆ ಸರಿಯಾದ ವ್ಯಕ್ತಿ' ಎನ್ನುವುದು ಸವಕಲು ಮಾತು. ಇದನ್ನು ಹೇಳುವುದು ಸುಲಭ, ಮಾಡುವುದು ಕಷ್ಟಸಾಧ್ಯ. ಸಂಕೀರ್ಣವಾದ ಪ್ರಜಾಸತ್ತಾತ್ಮಕ ರಾಜಕೀಯ ಮತ್ತು ಮಹತ್ವಾಕಾಂಕ್ಷೆಯ ಜನಸಮೂಹಗಳಿರುವ (ಈಗ ಹೆಚ್ಚುತ್ತಿರುವ ವಿವಿಧ ಧ್ವನಿಗಳ ಸಂಯೋಜನೆಗಳಿಂದ) ವಿಶಾಲವಾದ ವೈವಿಧ್ಯಮಯ ಸಮಾಜವನ್ನು ನಿರ್ವಹಿಸಲು ನಾಗರಿಕ ಸೇವಕ, ಸಲ್ಲಿಸಲಾಗುವ ಸೇವೆಗಳ ವಿಧಾನ ಮತ್ತು ನಾಗರಿಕ ಸೇವೆಯ ಕುರಿತಾಗಿ ಮರುಕಲ್ಪನೆಯ ಅಗತ್ಯವಿದೆ. ಈ ಎಲ್ಲ ಅಂಶಗಳನ್ನು ಹೊಸಹಾದಿ ತೆರೆಯಲಿರುವ ಮಿಷನ್ ಕರ್ಮಯೋಗಿ ಕಾರ್ಯಕ್ರಮದಲ್ಲಿ ಗಮನದಲ್ಲಿರಿಸಿಕೊಳ್ಳಲಾಗಿದೆ. ಈ ಕಾರ್ಯಕ್ರಮವು ಅಧಿಕಾರಿವರ್ಗವನ್ನು ಹೊಸದಾಗಿ ನಿರ್ಮಿಸುವುದಿಲ್ಲ. ಇದೊಂದು ಪ್ರಯೋಗವಾಗಿದ್ದು, ನಾಗರಿಕಸೇವಾ ಸ್ವರೂಪದ ವೈವಿಧ್ಯತೆ, ಸಂಕೀರ್ಣತೆಯನ್ನು ಒಪ್ಪಿಕೊಂಡು, ನಾಗರಿಕರನ್ನು ಒಳಗೊಂಡ



Scanned with ACE Scanner




ವ್ಯವಸ್ಥೆಯಲ್ಲಿ ನಾಗರಿಕ ಸೇವಕರ ಸಾಮರ್ಥ್ಯ ವರ್ಧನೆಯ ಮೂಲಕ ಅವರ ನಡವಳಿಕೆ, ವರ್ತನೆಗಳು ಮತ್ತು ಸಾಮರ್ಥ್ಯಗಳನ್ನು ಬದಲಿಸುವ ಮೂಲಕ ಹೆಚ್ಚು ಫಲಪ್ರದವಾಗಲು ಪ್ರಯತ್ನಿಸುತ್ತದೆ. ಅಸ್ತಿತ್ವದಲ್ಲಿರುವ ನಾಗರಿಕ ಸೇವೆಯ ಅಳವಡಿಕೆಯಲ್ಲಿ, ಕಾರ್ಯಕ್ರಮದ ಧ್ಯೇಯವು (ಅ) ವ್ಯಕ್ತಿಯ ನಡವಳಿಕೆ, ಕ್ರಿಯಾತ್ಮಕ ಜ್ಞಾನ ಮತ್ತು ಸಂಬಂಧಪಟ್ಟ ಕ್ಷೇತ್ರ ಈ ಮೂರು ಆಯಾಮದ ಕೌಶಲ್ಯಗಳ ಮೇಲೆ ಒತ್ತು ನೀಡುವ ಮೂಲಕ ಸಾಮರ್ಥ್ಯ ಅಭಿವೃದ್ಧಿಗೆ ಪ್ರಯತ್ನ; (ಆ) ನಾಗರಿಕ ಸೇವೆಯನ್ನು ನಿರಂತರವಾಗಿ ಉನ್ನತೀಕರಣಗೊಳಿಸುವ ಮೂಲಕ ಕೌಶಲ್ಯಾಭಿವೃದ್ಧಿಗೊಳಿಸುವುದು; (ಇ) ಆಳುವಿಕೆಯಿಂದ ಪಾತ್ರ ನಿರ್ವಹಿಸುವಿಕೆಗೆ ಬದಲಾವಣೆ ಮಾಡುವ ಮೂಲಕ ಗುಣಮಟ್ಟದ ಸೇವೆಗಳ ನೀಡಿಕೆ. ಈ ಮೂರು ಬದಲಾವಣೆಗಳು ಮೂಲಭೂತವಾಗಿದ್ದು ದೀರ್ಘಾವಧಿಯ ಪರಿಣಾಮಗಳನ್ನು ಹೊಂದಿವೆ. ಮಿಷನ್ ಕರ್ಮಯೋಗಿಯ ಮೂಲಕ, ನಿಯಮ ಬದ್ಧನಾಗಿರುವ 'ಅಧಿಕಾರಿ'ಯು 'ಆಳುವವನಿಂದ ಸೇವೆಮಾಡುವ ಪಾತ್ರ'ವಾಗಿ ಪರಿವರ್ತಿತವಾಗಿ ಸಹಾನುಭೂತಿಯುಳ್ಳ ನಾಗರಿಕ ಸೇವಕನಾಗಿ ರೂಪಾಂತರಗೊಳ್ಳುವ ನಿರೀಕ್ಷೆಯಿದೆ. ಇದನ್ನು ಹೇಳುವುದು ಸುಲಭ. ವಿಶಾಲವಾದ ಭೌಗೋಳಿಕ ಪ್ರದೇಶದಲ್ಲಿ ವೈವಿಧ್ಯಮಯ ಸಾಂಸ್ಥಿಕ ಸಂಸ್ಕೃತಿಗಳು, ವೈವಿಧ್ಯಮಯ ಸಾಮಾಜಿಕ ಸಂದರ್ಭಗಳಲ್ಲಿ ಹಲವಾರು ಬಗೆಯ ಪುನರಾವರ್ತನೆಗಳ ನಡುವೆ ಕಾರ್ಯನಿರ್ವಹಿಸುವ ಅಧಿಕಾರಿ ವರ್ಗ ಅದೇ ಬಗೆಯ ಸೇವೆಯನ್ನು ವೈಯುಕ್ತಿಕ ಮಟ್ಟದಲ್ಲಿ ಹೇಗೆ ಸಮನ್ವಯಗೊಳಿಸಲು ಸಾಧ್ಯ?

'ಆಳುವಿಕೆ' ಯಿಂದ 'ಪಾತ್ರ'ದ ಕಡೆಗಿನ ಈ ಬದಲಾವಣೆ ಸವಾಲಿನದು. ಈ ಆಕರ್ಷಕ ಪ್ರಕ್ರಿಯೆಯು ಸ್ವಾತಂತ್ರ್ಯದ ತಾಜಾ ಗಾಳಿಯನ್ನು ಹೊತ್ತುತರುವುದರೊಂದಿಗೆ ಪ್ರತಿ ನಾಗರಿಕರ ಬೇಡಿಕೆಗೂ ಸ್ಪಂದಿಸುವ ಸ್ವಾಯತ್ತತೆಯನ್ನು ಹೊಂದಿದೆ. ಈ ವಿಘಟನೆಯ ಪ್ರಕ್ರಿಯೆಯು ವಿತರಣಾ ಮಟ್ಟದಲ್ಲಿ ಸಮಾನ ಪ್ರತಿಕ್ರಿಯೆಯನ್ನು ಹುಟ್ಟು-ಹಾಕುವುದರೊಂದಿಗೆ ಶ್ರೇಣೀಕರಣವನ್ನು ದುರ್ಬಲಗೊಳಿಸುತ್ತದೆ.

* ಇದು ಮೊದಲಿಗೆ ಪಿರಮಿಡ್ ಆಕೃತಿ ಮಾದರಿಯಲ್ಲಿ ದುರ್ಬಲಗೊಳಿಸುತ್ತದೆ. ಮೇಲಿನ ಸ್ಥಾನದಲ್ಲಿರುವವರ ಮೇಲುಸ್ತುವಾರಿ, ಮೇಲ್ವಿಚಾರಣೆ, ಮಾರ್ಗದರ್ಶನದಿಂದ ದೂರಸರಿದು ತಳಮಟ್ಟದಲ್ಲಿನ ವಿತರಣಾ ವ್ಯವಸ್ಥೆಯ ಕಡೆಗೆ ಹೊಣೆಗಾರಿಕೆಯಿಂದ ಹೆಜ್ಜೆ ಹಾಕುವ ಮೂಲಕ ಬದಲಾವಣೆಗೆ ಮುಂದಾಗುವುದು. ಬಹುತ್ವವನ್ನು ಹೊಂದಿರುವ ನಮ್ಮ ದೇಶದಲ್ಲಿ ಎಲ್ಲ ಹಂತದ ಸಾಮರ್ಥ್ಯಗಳನ್ನು ಬಲಪಡಿಸಲು ಪರಿಣಾಮಕಾರಿ ಅಧಿಕಾರ ರಚನೆಗಳು ಬೇಕು. ಆದ್ದರಿಂದ ಪ್ರತಿಯೊಬ್ಬ ನಾಗರಿಕ ಸೇವಕನ ಸಾಮರ್ಥ್ಯ ಸೃಷ್ಟಿಗೆ ಒತ್ತು ನೀಡಲಾಗುತ್ತದೆ. ಇಲ್ಲಿಯವರೆಗೆ 'ತರಬೇತಿ ಪಡೆದಿಲ್ಲದ' (ನಾಗರಿಕ ಸೇವೆಯ ವಿಷಯದಲ್ಲಿ ನಿರಂತರ ತರಬೇತಿ ಪಡೆದಿಲ್ಲದ) ಹೆಚ್ಚಿನ ಸಂಖ್ಯೆಯಲ್ಲಿ ಇರುವವರನ್ನು ಆಜೀವ ಕಲಿಕಾರ್ಥಿಗಳನ್ನಾಗಿ ಪರಿವರ್ತಿಸುವುದು ಹೇಗೆ?

*ಈ ಪ್ರಕ್ರಿಯೆಯ ಎರಡನೇ ಪರಿಣಾಮ – ಕಾರ್ಯನಿರ್ವಹಿಸುತ್ತಿರುವ ನಾಗರಿಕ ಸೇವಕರಿಂದ ಪಡೆದ ನಿರಂತರ ಒಳನೋಟಗಳ ಆಧಾರದ ಮೇಲೆ ಅವರಲ್ಲಿ ಜೀವಮಾನದ ಕಲಿಕೆಯ ಚೈತನ್ಯವನ್ನು ತುಂಬುತ್ತದೆ. ಲಕ್ಷಾಂತರ ಸಂಖ್ಯೆಯಲ್ಲಿರುವ ನಾಗರಿಕ ಸೇವಕರು ಅಜೀವ ಕಲಿಕಾರ್ಥಿಗಳಾಗಿ ಹೇಗೆ ರೂಪಾಂತರಗೊಳ್ಳುತ್ತಾರೆ? 'ಯಾವುದೇ ಸಮಯದಲ್ಲಿ–ಯಾವುದೇ ಸ್ಥಳದಲ್ಲಿ–ಯಾವುದೇ ಸಾಧನ' ಡಿಜಿಟಲ್ ಕಲಿಕಾ ಪರಿಸರ ವ್ಯವಸ್ಥೆ ಮೂಲಕ ಅವರಿಗೆ ಅಗತ್ಯವಾದ ವಿಷಯಗಳನ್ನು ತಲುಪಿಸುವ ಅವಕಾಶ ಕಲ್ಪಿಸಲಾಗಿದೆ. ಆದರಿದು ಹೇಳಿದಷ್ಟು ಸುಲಭವಲ್ಲದ ಕೆಲಸ. ಡಿಜಿಟಲ್ ತಂತ್ರಜ್ಞಾನಗಳು ಅಸ್ತಿತ್ವದಲ್ಲಿದ್ದು ವ್ಯಕ್ತಿಗಳಿಗೆ 'ಉದ್ದೇಶಿತ' ವಿತರಣೆಯನ್ನು ಸಕ್ರಿಯಗೊಳಿಸುವ ಅಲ್ಗಾರಿದಮ್‌ಗಳು ಬಳಕೆಯಲ್ಲಿವೆ ಎಂಬುದರಲ್ಲಿ ಸಂದೇಹವಿಲ್ಲ. ಇದಕ್ಕೆ ಹಲವಾರು ಉದಾಹರಣೆಗಳನ್ನು ಇ–ಕಾಮರ್ಸ್ ಪೋರ್ಟಲ್‌ಗಳಲ್ಲಿ ಕಾಣಬಹುದು. ಹೀಗಿದ್ದೂ, ನಮ್ಮಂತಹ ಅಧಿಕಾರಿ ವರ್ಗ ಇರುವ ಪರಿಸರ ವ್ಯವಸ್ಥೆಯಲ್ಲಿ ನಾವು ವ್ಯಕ್ತಿಗಳ ಅವಶ್ಯಕತೆಗಳನ್ನು ಹೇಗೆ ಗುರುತಿಸುತ್ತೇವೆ?

*ಈ ಪ್ರಕ್ರಿಯೆಯ ಮೂರನೇ ಪರಿಣಾಮ – ಪ್ರತಿಯೊಂದು ಕೆಲಸದ ಮಟ್ಟ, ಕಾರ್ಯದ ಮಟ್ಟ ಮತ್ತು ಕಾರ್ಯ ಮಟ್ಟದ ಕೌಶಲ್ಯದ ಗುರುತಿಸುವಿಕೆಯು ಎಫ್‌ಆರ್‌ಎಸಿ ಎಂಬ ವಿಘಟನೆಯ ಮಾದರಿಯಿಂದ ನಿರೂಪಿಸಲ್ಪಟ್ಟಿದೆ. ಇದು ಅಧಿಕಾರಿ ವರ್ಗ ಸ್ವರೂಪದ ವಿವಿಧ ಹಂತಗಳ ಕ್ರಿಯೆಗಳ ಮ್ಯಾಪಿಂಗ್. ಈ ಚೌಕಟ್ಟಿನ



Scanned with ACE Scanner

ಮೂಲಮಾದರಿಯು ಮಿಷನ್‌ನ ಪ್ರಾರಂಭದ ನಂತರ ಸಿಬ್ಬಂದಿ ಮತ್ತು ತರಬೇತಿ ಇಲಾಖೆ ಮೂಲಕ ಇದನ್ನು ವಿನ್ಯಾಸಗೊಳಿಸಲಾಯಿತು ಮತ್ತು ಬಳಕೆಗೆ ಲಭ್ಯವಾಗಿಸಿತು. ಈ ಮಾದರಿಯು ಈಗ ವಿವಿಧ ಏಜೆನ್ಸಿಗಳು, ಸಚಿವಾಲಯಗಳು ಮತ್ತು ರಾಜ್ಯ ಸರ್ಕಾರದ ಘಟಕಗಳಿಗೆ ಅಳವಡಿಸಿಕೊಳ್ಳಲು ಲಭ್ಯವಿದೆ. ಜಾಗತಿಕ ಕೊವಿಡ್ ಸಾಂಕ್ರಾಮಿಕವು ಇದನ್ನು ಪರೀಕ್ಷಿಸುವ ಸವಾಲನ್ನು ತಂದೊಡ್ಡಿತು. ಭಾರತದಲ್ಲಿ, ಸಾವಿರಾರು ವೈದ್ಯರು, ವೈದ್ಯಕೀಯ ಮತ್ತು ಪ್ಯಾರಾ ಮೆಡಿಕಲ್ ಕೆಲಸಗಾರರು, ಪೊಲೀಸರು, ಯುವ ಸ್ವಯಂಸೇವಕರು, ಹೀಗೆ ಏಕಕಾಲದಲ್ಲಿ ಹಲವರಿಗೆ ತರಬೇತಿ ನೀಡುವ ತುರ್ತು ಎದುರಾದಾಗ ವ್ಯವಸ್ಥೆ ಇದಕ್ಕೆ iGOT (Integrated Government On-Line Training) ಮೂಲಕ ಪ್ರತಿಕ್ರಿಯಿಸಿತು. 2020 ರ ಏಪ್ರಿಲ್-ಮೇ ಅವಧಿಯಲ್ಲಿ 8-10 ವಾರಗಳಿಗಿಂತ ಕಡಿಮೆ ಅವಧಿಯಲ್ಲಿ ಪ್ರಮಾಣೀಕೃತ ಕೋರ್ಸ್‌ಗಳಲ್ಲಿ ಸುಮಾರು 1.5 ಮಿಲಿಯನ್ ನಾಗರಿಕ ಸೇವಕರಿಗೆ ಸಮಗ್ರ ಸರ್ಕಾರಿ ಆನ್‌ಲೈನ್ ತರಬೇತಿ ವೇದಿಕೆ ಮೂಲಕ ತರಬೇತಿ ನೀಡಲಾಯಿತು. ಇದು ಗಮನಾರ್ಹವಾದ ಸಾಧನೆಯಾದರೂ ಅದರ ಸಂಕೀರ್ಣತೆಯಲ್ಲಿ, ಇದು ಒಂದು ನಿರ್ದಿಷ್ಟ ಸಂಖ್ಯೆಯ ಪಾತ್ರಗಳನ್ನು ಒಳಗೊಂಡಿದ್ದು ಮಧ್ಯಮಗಾತ್ರದ್ದಾಗಿದೆ. ಮತ್ತೊಂದೆಡೆ, ಸರ್ಕಾರದಲ್ಲಿ ವಿವಿಧ ಆಯಾಮದ ವಿವಿಧ ಸಂಖ್ಯೆಯ ಕಾರ್ಯ ಇರುತ್ತದೆ. ಪ್ರತಿ ಸಚಿವಾಲಯ, ಇಲಾಖೆ ಮತ್ತು ಸಂಸ್ಥೆಯು ಆಂತರಿಕ ಪರೀಕ್ಷೆಯ ಪ್ರಕ್ರಿಯೆಯನ್ನು ಸ್ವತಃ ಕೈಗೊಂಡು ಅದರ ಪಾತ್ರ ಮತ್ತು ಕಾರ್ಯಗಳನ್ನು ಸಿದ್ಧಪಡಿಸುವುದು ಭವಿಷ್ಯದ ಸವಾಲಾಗಿದೆ. ಎಫ್‌ಆರ್‌ಎಸಿಗಳು ಅಧಿಕಾರಿ ವರ್ಗದ ಹೊಂದಾಣಿಕೆಯ ಭಾಗವಾಗಿದ್ದು ಅವರನ್ನು ಕ್ರಿಯಾತ್ಮಕವಾಗಿಸಿ, ಸಂಪರ್ಕಿಸುವ ಅಂಗಾಂಶವಾಗಿದೆ. ಸಂಕೀರ್ಣ ಪ್ರಕ್ರಿಯೆಗಳನ್ನು ಗುರುತಿಸಿಕೊಂಡ ಬಳಿಕ ಯಾರು 'ಕಲಿಕಾ' ವಸ್ತುವನ್ನು ರೂಪುಗೊಳಿಸುತ್ತಾರೆ ಎನ್ನುವುದು ಮುಂದಿನ ಸಂದಿಗ್ಧ ಪ್ರಶ್ನೆಯಾಗಿದೆ.

*ಈ ಪ್ರಕ್ರಿಯೆಯ ನಾಲ್ಕನೇ ಪರಿಣಾಮ – ಕಲಿಕಾ ವಸ್ತುವಿನಲ್ಲಿ ಸೂಕ್ತವಾದದ್ದನ್ನು ಆಯ್ಕೆ ಮಾಡುವ ಮತ್ತು ಸೃಷ್ಟಿಸುವುದು ಪರಿಣಿತ ಕೆಲಸ. ವಸ್ತು ಇಲ್ಲಿ ಯಾವಾಗಲೂ ಮುಖ್ಯವಾದದ್ದು. ಕಲಿಯುವವರ ಬೇಡಿಕೆಗೆ ತಕ್ಷಣವೇ ಸ್ಪಂದಿಸುವಂತಹ ಸಕ್ರಿಯ ವಾತಾವರಣವನ್ನು (ವಿತರಣಾ ಮಟ್ಟದಲ್ಲಿ ಹೊಣೆಗಾರಿಕೆಯಿಂದ ಉತ್ತಮ ಸೇವೆ ನೀಡುವಂತೆ ನಾಗರಿಕರ ಒತ್ತಡವಿರುತ್ತದೆ) ಪ್ರತಿಕ್ರಿಯೆ ಹಾಗೂ ಬೇಡಿಕೆಗೆ ಅನುಗುಣವಾಗಿ ರೂಪಿಸುವುದು. 'ಕಂಟೆಂಟ್ ಮಾರ್ಕೆಟ್ ಪ್ಲೇಸ್' ಸೃಷ್ಟಿಸಲಾಗಿದೆ. ಇದರಲ್ಲಿ ಆರ್ಥಿಕ ವಲಯಕ್ಕೆ ಸೇರಿದವರು ಸೃಷ್ಟಿಕರ್ತರಾಗಿರುತ್ತಾರೆ. ಸಾರ್ವಜನಿಕ ವಲಯದ ಸಂಸ್ಥೆಗಳು, ಖಾಸಗಿ ವಲಯದ ಜ್ಞಾನದ ಘಟಕಗಳು, ಶಿಕ್ಷಣ ತಜ್ಞರು ಹಾಗೂ ಈ ಪರಿಸರ ವಲಯದಲ್ಲಿರುವವರು ಇದರ ಭಾಗವಾಗಿರುತ್ತಾರೆ. ಇಲ್ಲಿ ಕೆಲಸದ ಸ್ಥಳದ (ವಿಷಯ ಪೂರೈಕೆದಾರರು ತಿಳಿಸಿರುವ ಸಾಮರ್ಥ್ಯಗಳನ್ನು ಹೊಂದಿರುವವರು) ಮೇಲೆ ಬೀರುವ ಪ್ರಭಾವವನ್ನು ಮೌಲ್ಯಮಾಪನ ಮಾಡುವ ಮೂಲಕ ರೂಪಿಸಲಾದ ಪ್ರತಿಯೊಂದು ವಿಷಯಕ್ಕೂ ಪರಿಣಾಮ ಮಾಪನ ಇಂಪ್ಯಾಕ್ಟ್ ಸ್ಕೋರ್ ಕೂಡ ನೀಡಲಾಗಿದೆ. ಇದು ಭವಿಷ್ಯದ ಗ್ರಾಹಕರಿಗೆ ನೆರವು ನೀಡುತ್ತದೆ. ವ್ಯವಸ್ಥಾಪಕರು ಅವರಿಗೆ ನೀಡಿರುವ ಕಲಿಕೆಯ ಸಂಪನ್ಮೂಲಗಳಲ್ಲಿ ತಮಗೆ ಬೇಕಾದ್ದನ್ನು ಆಯ್ಕೆ ಮಾಡಿಕೊಳ್ಳಬಹುದು. ವಿಷಯದ ಇಂಪ್ಯಾಕ್ಟ್ ಸ್ಕೋರ್ ಅನ್ನು ಉಪಯುಕ್ತತೆ, ಸಮಕಾಲೀನತೆ, ಬಳಕೆಯ ಸುಲಭತೆ, ಜನಪ್ರಿಯತೆ ಇತ್ಯಾದಿಗಳ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ಮಾರುಕಟ್ಟೆಯನ್ನು ಈ ರೀತಿಯಲ್ಲಿ ರೂಪಿಸಲಾಗಿದೆ: ಪರಿವರ್ತನೆಯ ಬೇಡಿಕೆಯ ಮುಂದಿನ ಹಂತ ಈ ರೀತಿ ಇದೆ: 'ಸಾಮರ್ಥ್ಯ ನಿರ್ಮಾಣ'ದಲ್ಲಿ ಸ್ಥಳೀಯ ಮಾರುಕಟ್ಟೆಗಳು ಸ್ಥಳೀಯ ಅಗತ್ಯಗಳಿಗೆ ಪ್ರತಿಕ್ರಿಯಿಸುವಾಗ ವಿಷಯಕ್ಕೆ ಹೇಗೆ ಸ್ಪಂದಿಸುತ್ತವೆ? ಈ ಭಿನ್ನ ಬಗೆಯ ಪ್ರಕ್ರಿಯೆಗಳನ್ನು ಹೇಗೆ ಸಮನ್ವಯದಿಂದ ಒಳಗೊಳ್ಳುತ್ತವೆ?

*ಈ ಪ್ರಕ್ರಿಯೆಯ ಐದನೇ ಪರಿಣಾಮ – ಕ್ರಿಯೆಯು ನಾಗರಿಕ ಮಟ್ಟದಲ್ಲಿ ಸಂಭವಿಸಬಹುದಾದರೂ, ಎಲ್ಲಾ ಸೂಕ್ಷ್ಮ ಕ್ರಿಯೆಗಳು ರಾಷ್ಟ್ರೀಯವಾಗಿ ಒಮ್ಮುಖವಾಗಿರಬೇಕು ಎನ್ನುವುದು ಸಂಸ್ಥೆಯ ಕಾರ್ಯಸೂಚಿಯಾಗಿದೆ. ಸಚಿವಾಲಯಗಳ ವಾರ್ಷಿಕ ಸಾಮರ್ಥ್ಯ ನಿರ್ಮಾಣ ಯೋಜನೆಗಳು ಮತ್ತು ರಾಷ್ಟ್ರೀಯ ನಿರ್ದೇಶನದೊಂದಿಗೆ ಅವುಗಳನ್ನು ಅಂತಿಮವಾಗಿ ಜೋಡಿಸಲಾಗುತ್ತದೆ. ಈ ಜೋಡಣೆಯು ಮಿಷನ್ ಕಾರ್ಯಕ್ರಮದ ಸ್ವರೂಪದಿಂದ ಪ್ರಭಾವಿತವಾಗಿದೆ. ಸಾಮರ್ಥ್ಯ ನಿರ್ಮಾಣ ಆಯೋಗಕ್ಕೆ ವಿಮರ್ಶಾತ್ಮಕ ಸಲಹೆ ನೀಡಲು ಚಿಂತಕರ ಮಂಡಳಿ ಮತ್ತು ಡಿಜಿಟಲ್ ಕಲಿಕೆಯ ಪರಿಸರ ವ್ಯವಸ್ಥೆಯನ್ನು ನಿರ್ವಹಿಸಲು ತಾಂತ್ರಿಕ ಸಂಸ್ಥೆಯನ್ನು ಮಿಷನ್ ಒಳಗೊಂಡಿದ್ದು ಇದಕ್ಕೆ ಈಗ ಕರ್ಮಯೋಗಿ ಭಾರತ್ ಎಂದು ಹೆಸರಿಸಲಾಗಿದೆ.'

* ಈ ಪ್ರಕ್ರಿಯೆಯ ಆರನೇ ಭಾಗ ಪ್ರಧಾನಮಂತ್ರಿ ನೇತೃತ್ವದ ಮಾನವ ಸಂಪನ್ಮೂಲ ಮಂಡಳಿ. ಇದಕ್ಕೆ ಸಂಪುಟ ಸಚಿವಾಲಯ ಇಲಾಖೆಯು ನೆರವು ನೀಡುತ್ತದೆ. ಸಾಂಪ್ರದಾಯಿಕವಾದ ನಿಯಮ ಬದ್ಧವಾದ 'ಅಧಿಕಾರಿ ವರ್ಗ'ವು ಪಾತ್ರ ಪ್ರಧಾನವಾದ 'ನಾಗರಿಕ ಸೇವಕ'ನಾಗಿ ರೂಪಾಂತರಗೊಳ್ಳುವುದು ಸಾರ್ವಜನಿಕ ಕಲ್ಯಾಣದ ದೃಷ್ಟಿಯಿಂದ ಉತ್ತಮವಾದ ಅಗತ್ಯವಾದ ಸುಧಾರಣೆಯಾಗಿದೆ. ಯಾವುದೇ ಕಿರುಕುಳವಿಲ್ಲದೆ ಸಾರ್ವಜನಿಕರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ಸರ್ಕಾರಿ ಆಡಳಿತವು ಆಧುನಿಕ ಸಮಾಜಗಳ ಹೆಗ್ಗುರುತಾಗಿದೆ. ಪ್ರಜಾಪ್ರಭುತ್ವದಲ್ಲಿ ಜನಸಂಖ್ಯೆಯ ಬಹುಪಾಲು ಸರ್ಕಾರಿ ಸೇವೆಗಳನ್ನೇ ಅವಲಂಬಿಸಿದೆ. ತಳಮಟ್ಟದಲ್ಲಿ ಮಾಡುವ ಸುಧಾರಣೆಗಳು ಅಗಾಧ ಪರಿಣಾಮವನ್ನು ಬೀರುತ್ತವೆ. ಆದ್ದರಿಂದ ಸರ್ಕಾರವು ಭಾಗೀದಾರಿಗೆ ಹೆಚ್ಚಿನ ಒತ್ತು ನೀಡುತ್ತಿದೆ. ಇದರಿಂದ ನಾಗರಿಕರಿಗೆ ಸರ್ಕಾರದ ಮೇಲಿನ ನಂಬಿಕೆಯನ್ನು ಹೆಚ್ಚಿಸುವುದರೊಂದಿಗೆ ಹೊಸತನ ಮತ್ತು ಪರಿಣಾಮಕಾರಿ ವಿತರಣೆಯ ಮೂಲಕ ನಾಗರಿಕರೇ ಸರ್ಕಾರದ ಪ್ರಥಮ ಆದ್ಯತೆ ಎನ್ನುವ ಸಂಕೇತವನ್ನು ನೀಡುತ್ತಿದೆ. ಇದನ್ನೇ ಇನ್ನೊಂದು ಬಗೆಯಲ್ಲಿ ಹೇಳುವುದಾದರೆ 'ಆಳುವಿಕೆಯ ದೃಷ್ಟಿಕೋನ'ಕ್ಕೆ ಬದಲಾಗಿ ಪಾತ್ರಾಧರಿತ ಕೆಲಸಕ್ಕೆ ಆದ್ಯತೆ ನೀಡುವುದು. 'ನಾಗರಿಕ ಸೇವೆಗಳ ಸಾಮರ್ಥ್ಯ ನಿರ್ಮಾಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮ'ದಡಿಯಲ್ಲಿ ನಾಗರಿಕ ಸೇವಕರ ಚೈತನ್ಯವನ್ನು ಮರುರೂಪಿಸಲಾಗಿದೆ. ಸಮೃದ್ಧಿಯತ್ತ ಹೆಜ್ಜೆ ಹಾಕುತ್ತಿರುವ ಈ ಅಮೃತಕಾಲದಲ್ಲಿ ಸ್ವತಂತ್ರ ಭಾರತದ ಈ ಪಯಣವೇ 'ಕರ್ಮಯೋಗಿ'. ಇನ್ನು ಮುಂದೆ ನಾಗರಿಕ ಸೇವಕನೆಂದರೆ ಕೇವಲ ಆಳುವವನಲ್ಲ. ಬದಲಿಗೆ ಕ್ರಿಯಾತ್ಮಕನಾದ ಸಹಾನುಭೂತಿಯುಳ್ಳ ಸಮರ್ಥನಾದ ವ್ಯಕ್ತಿ.



Scanned with ACE Scanner


# ಉತ್ತರದಾಯಿತ್ವ ಮತ್ತು ಹಣಕಾಸು ಆಡಳಿತ

* ಗಿರೀಶ್ ಚಂದ್ರ ಮುರ್ಮು

**ದೇಶದ ಸಾರ್ವಜನಿಕ ಹಣಕಾಸು ನಿರ್ವಹಣಾ ಕ್ಷೇತ್ರದಲ್ಲಿ ಭಾರತದ ಮಹಾಲೇಖಪಾಲರು ಮತ್ತು ನಿಯಂತ್ರಕ (ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್-ಸಿಎಜಿ-ಮಹಾಲೆಕ್ಕಪರಿಶೋಧನಾ ಸಂಸ್ಥೆ) ಸಂಸ್ಥೆಯು ಮಹತ್ವದ ಪಾತ್ರ ವಹಿಸುತ್ತಾ ಬಂದಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಣಕಾಸು ನಿರ್ವಹಣೆಯ ಲೆಕ್ಕಪತ್ರಗಳನ್ನು ಯಾವ ರೀತಿ ನಿರ್ವಹಿಸಬೇಕು ಎಂಬುದರ ಕುರಿತು ಸಿಎಜಿ ಸರ್ಕಾರಕ್ಕೆ ಆಗಾಗ್ಗೆ ಅಥವಾ ವಾರ್ಷಿಕ ಆಧಾರದಲ್ಲಿ ಸಲಹೆ ನೀಡುತ್ತದೆ. ಉದಾರೀಕರಣ ಮತ್ತು ಸ್ವಾಯತ್ತೆಯ ಉತ್ತುಂಗ ಯುಗದಲ್ಲಿ, ಅಧಿಕಾರಿ ವರ್ಗದ ಕಾರ್ಯ ನಿರ್ವಹಣೆಯಲ್ಲಿ ವಿಶ್ವಾಸ ಮೂಡಿಸಲು ಮತ್ತು ಕಾಪಾಡಲು ಮತ್ತು ಅವರ ಕಾರ್ಯ ನಿರ್ವಹಣೆಯಲ್ಲಿ ಉತ್ತಮ ಪಾರದರ್ಶಕತೆ ಮತ್ತು ಹೊಣೆಗಾರಿಕೆ (ಉತ್ತರದಾಯಿತ್ವ) ತರಲು ನೀತಿ ನಿರೂಪಕರು ಮತ್ತು ಇಡೀ ಸಮಾಜವು ರಾಷ್ಟ್ರದ ಲೆಕ್ಕಪರಿಶೋಧಕರಿಂದ ಕೆಲವು ನಿರೀಕ್ಷೆಗಳನ್ನು ಹೊಂದಿದೆ. ಸಿಎಜಿ ಸಂಸ್ಥೆಯು ಭಾರತದಲ್ಲಿ ತೆರಿಗೆ ಪಾವತಿದಾರರು ಮತ್ತು ಭಾರತೀಯ ಉದ್ಯಮಗಳಲ್ಲಿ ಹಣ ತೊಡಗಿಸಿರುವ ಹೂಡಿಕೆದಾರರ ನಂಬಿಕೆ ಮತ್ತು ವಿಶ್ವಾಸವನ್ನು ಎತ್ತಿಹಿಡಿಯುತ್ತದೆ; ಸದೃಢವಾದ ಆರ್ಥಿಕ ಆಡಳಿತ ಸ್ಥಾಪಿಸುವ ಗುರಿಯತ್ತ ರಚನಾತ್ಮಕವಾಗಿ ಕೊಡುಗೆ ನೀಡುವುದನ್ನು ಮುಂದುವರೆಸಿದೆ.**

ಭಾರತದ ಸಾರ್ವಜನಿಕ ಆಡಳಿತ ವಿಷಯವು ಪ್ರಾಚೀನ ಇತಿಹಾಸದಲ್ಲಿ ಬೇರೂರಿದೆ, ಇದು 4ನೇ ಶತಮಾನದ ಕ್ರಿಸ್ತಪೂರ್ವ ಯುಗಕ್ಕಿಂತ ಹಿಂದಿನದು. ಕೌಟಿಲ್ಯ ಬರೆದ ಅರ್ಥಶಾಸ್ತ್ರ (ಅಂದರೆ ಭೌತಿಕ ಲಾಭ ವಿಜ್ಞಾನ)ವೇ ಸಾರ್ವಜನಿಕ ಆಡಳಿತದ ಬಗ್ಗೆ ಇರುವ ಇಡೀ ವಿಶ್ವದ ಅತ್ಯಂತ ಪುರಾತನ ಲಿಖಿತ ಪಠ್ಯವಾಗಿದೆ. ಈ ಗ್ರಂಥವು ರಾಜಕೀಯ, ರಾಜ್ಯ ಕಾರ್ಯ ಮತ್ತು ಆಡಳಿತದ ವಿಷಯಗಳನ್ನು ಹೇಳುತ್ತದೆ. ಹಣಕಾಸು ವ್ಯವಸ್ಥೆಗಳ ಹೊಣೆಗಾರಿಕೆಯು ವ್ಯವಹಾರದ ನಿಯಮಗಳು, ಸಂಬಂಧಿತ ಪೂರ್ವನಿದರ್ಶನಗಳು, ಸಂದರ್ಭಗಳು ಮತ್ತು ಲೆಕ್ಕಾಚಾರಗಳಿಗೆ ಅನುಗುಣವಾಗಿ ಲೆಕ್ಕ ಪತ್ರಗಳ ಸಂಪೂರ್ಣ ಲೆಕ್ಕಪರಿಶೋಧನೆಯ ವ್ಯವಸ್ಥೆಯಾಗಿ ಉಲ್ಲೇಖಿತವಾಗಿದೆ.

ಭಾರತದ ಮಹಾಲೇಖಪಾಲರ (ಸಿಎಜಿ) ಸಂಸ್ಥೆ 1860ರಲ್ಲಿ ಅಸ್ತಿತ್ವಕ್ಕೆ ಬಂತು, ನಂತರ 1950ರಲ್ಲಿ ಸಾಂವೈಧಾನಿಕ ಸ್ಥಾನಮಾನ ಪಡೆಯಿತು. ಸಂಸತ್ತು ಮಾಡುವ



ಖರ್ಚು ವೆಚ್ಚ, ಗಳಿಸುವ ಆದಾಯದ ಮೇಲೆ ನಿಗಾ ಇಡುವಂತೆ ಸಂವಿಧಾನ ಶಿಲ್ಪಿಗಳು ಸಿಎಜಿಗೆ ಪ್ರಮುಖ ಪಾತ್ರ ಕಲ್ಪಿಸಿದರು ಅಥವಾ ಜವಾಬ್ದಾರಿ ವಹಿಸಿದರು. ಸಿಎಜಿ ಪ್ರಾಧಿಕಾರದ ಒಂದು ವಿಶಿಷ್ಟ ಸ್ಥಾನಮಾನ ಹೊಂದಿದೆ. ಅದು ಸರ್ಕಾರದ ಲೆಕ್ಕ ಪತ್ರಗಳನ್ನು ಸಲ್ಲಿಸುವ ರೂಪ ಅಥವಾ ಕಾರ್ಯವಿಧಾನವನ್ನು ಸೂಚಿಸುತ್ತದೆ, ಸರ್ಕಾರದ ಎಲ್ಲಾ ಸ್ವೀಕೃತಿಗಳು ಮತ್ತು ವೆಚ್ಚಗಳ ಲೆಕ್ಕಪರಿಶೋಧನೆಗಳನ್ನು ನಡೆಸುತ್ತದೆ.

ಸಂವಿಧಾನವು ಶಾಸಕಾಂಗ ಮತ್ತು ಕಾರ್ಯಾಂಗದಿಂದ ಸಿಎಜಿಗೆ ಸ್ವಾತಂತ್ರ್ಯ ಖಾತ್ರಿಪಡಿಸಿದೆ. ಲೆಕ್ಕಪತ್ರಗಳ ವಿವಾದ ಅಥವಾ ಸಮಸ್ಯೆಗಳ ಆಯ್ಕೆ, ಲೆಕ್ಕಪತ್ರಗಳ

* ಭಾರತದ ಮಹಾಲೇಖಪಾಲರು ಮತ್ತು ನಿಯಂತ್ರಕರು. ಇಮೇಲ್ : cagoffice@cag.gov.in




Scanned with ACE Scanner

ನಡವಳಿಕೆ ಮತ್ತು ವರದಿ ಮಾಡುವ ವಿಧಾನ ಮತ್ತು ಸಿಎಜಿ ಕಚೇರಿಯ ಸಂಘಟನೆ ಮತ್ತು ನಿರ್ವಹಣೆ ಸೇರಿದಂತೆ ಅದರ ಕಾರ್ಯಗಳ ನಿರ್ವಹಣೆಯಲ್ಲಿ ಸಿಎಜಿ ಸಂಪೂರ್ಣ ವಿವೇಚನೆ ಅಥವಾ ಸ್ವಾಯತ್ತೆ ಹೊಂದಿದೆ. ಸಿಎಜಿ ಸಂಸ್ಥೆಯ ವ್ಯವಹಾರವನ್ನು ಭಾರತೀಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ (ಐಎ&ಎಡಿ)ಯ ಮೂಲಕ ನಡೆಸಲಾಗುತ್ತದೆ. ಸಿಎಜಿ ಮತ್ತು ಐಎ&ಎಡಿ ಈ ಎರಡು ಸಂಸ್ಥೆಗಳು ಒಟ್ಟಾಗಿ, ಭಾರತದ ಸರ್ವೋಚ್ಚ ಲೆಕ್ಕ ಪರಿಶೋಧನಾ ಸಂಸ್ಥೆ (ಎಸ್‌ಎಐ)ಯನ್ನು ರೂಪಿಸುತ್ತದೆ. ಎಸ್‌ಎಐ ಸಂಸ್ಥೆಯು ದೇಶ ಮತ್ತು ವಿದೇಶಗಳಲ್ಲಿ 137 ಕ್ಷೇತ್ರ ಕಚೇರಿಗಳನ್ನು ಹೊಂದಿರುವ 41,700 ನೌಕರ ಬಲವಿರುವ ಪ್ರಬಲ ಮತ್ತು ಪ್ರತಿಷ್ಠಿತ ಸಂಸ್ಥೆಯಾಗಿದೆ.

ದೇಶದ ಸಾರ್ವಜನಿಕ ಹಣಕಾಸು ನಿರ್ವಹಣಾ ಕ್ಷೇತ್ರದಲ್ಲಿ ಸಿಎಜಿ ಪ್ರಮುಖ ಪಾತ್ರ ವಹಿಸುತ್ತದೆ. ಶಾಸಕಾಂಗವು ಸಾರ್ವಜನಿಕ ಹಣಕಾಸಿನ ಸಂಗ್ರಹಣೆ ಮತ್ತು ಬಳಕೆಯ ಅಧಿಕಾರ ಹೊಂದಿವೆ. ಬಜೆಟ್ ಹಂಚಿಕೆಗಳಿಗೆ ಅನುಗುಣವಾಗಿ ನೀಡಲಾಗುವ ಹಣದ ಮೊತ್ತವನ್ನು ಕಾರ್ಯಾಂಗ ವೆಚ್ಚಮಾಡುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಲೆಕ್ಕ ಪತ್ರಗಳನ್ನು ಯಾವ ರೀತಿ ನಿರ್ವಹಿಸಬೇಕು ಎಂಬುದರ ಕುರಿತು ಸಿಎಜಿ ಸರ್ಕಾರಕ್ಕೆ ಸಲಹೆ ನೀಡುತ್ತದೆ. ಕೇಂದ್ರ ಸರ್ಕಾರಕ್ಕೆ, ಕಂಪ್ಟ್ರೋಲರ್ ಜನರಲ್ ಆಫ್ ಅಕೌಂಟ್ಸ್' ಲೆಕ್ಕಪತ್ರಗಳನ್ನು ಸಿದ್ಧಪಡಿಸಿದರೆ, ರಾಜ್ಯ ಸರ್ಕಾರಗಳ ಲೆಕ್ಕಪತ್ರಗಳ ನಿರ್ವಹಣೆ ಜವಾಬ್ದಾರಿಯನ್ನು ಸಿಎಜಿಗೆ ವಹಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಲೆಕ್ಕಪತ್ರಗಳು ಸಿಎಜಿ ಲೆಕ್ಕ ಪರಿಶೋಧನೆ (ಆಡಿಟ್)ಗೆ ಒಳಪಟ್ಟಿರುತ್ತವೆ. ಸಿಎಜಿಯು ಲೆಕ್ಕಪರಿಶೋಧನೆ ನಡೆಸಿದ ಲೆಕ್ಕ ಪತ್ರಗಳನ್ನು ಆಡಿಟ್ ವರದಿಯೊಂದಿಗೆ ಭಾರತದ ರಾಷ್ಟ್ರಪತಿ, ರಾಜ್ಯಗಳ ಗವರ್ನರ್‌ಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಡಳಿತಾಧಿಕಾರಿಗಳಿಗೆ ಸಲ್ಲಿಸುತ್ತಾರೆ. ಅಲ್ಲಿಂದ ಈ ಆಡಿಟ್ ವರದಿಗಳು ಅಂತಿಮವಾಗಿ ಸಂಸತ್ತು, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಶಾಸಕಾಂಗ ಸಭೆಗಳಿಗೆ ಬರುತ್ತವೆ.

ಹಣಕಾಸು ಆಡಳಿತದಲ್ಲಿ ಹೊಣೆಗಾರಿಕೆಯನ್ನು ಮೂರು ಹಂತಗಳಲ್ಲಿ ಜಾರಿಗೊಳಿಸಲಾಗಿದೆ: 1. ಕಾರ್ಯನಿರ್ವಹಣಾ ಸಚಿವಾಲಯಗಳು



ಮತ್ತು ಇಲಾಖೆಗಳು ಆಂತರಿಕ ಲೆಕ್ಕಪರಿಶೋಧನಾ ಕಾರ್ಯವಿಧಾನಗಳನ್ನು ಹೊಂದಿವೆ. 2. ಸಿಎಜಿಯ ಬಾಹ್ಯ ಲೆಕ್ಕಪರಿಶೋಧನೆಗಳು ಮತ್ತು 3. ಶಾಸಕಾಂಗ (ಶಾಸನಸಭೆ ಅಥವಾ ವಿಧಾನಸಭೆ) ಸಮಿತಿಗಳಿಂದ ವಿಷಯಗಳ ಸ್ವತಂತ್ರ ಪರೀಕ್ಷೆ. ಸಾರ್ವಜನಿಕ ಸಂಪನ್ಮೂಲಗಳ ಮೇಲೆ ಸಕಾಲಿಕ, ಸ್ವತಂತ್ರ ಮತ್ತು ವಿಶ್ವಾಸಾರ್ಹ ಭರವಸೆ ಮೂಡಿಸುವ ಮೂಲಕ ಹಣಕಾಸು ವ್ಯವಸ್ಥೆಯಲ್ಲಿ ಪಾರದರ್ಶಕತೆ ಮತ್ತು ಉತ್ತಮ ಆಡಳಿತ ಉತ್ತೇಜಿಸುವಲ್ಲಿ ಸಿಎಜಿ ಸಂಸ್ಥೆಯು ಬಲವಾದ ಆಧಾರಸ್ತಂಭವಾಗಿದೆ. ಸಿಎಜಿಯು ರಾಷ್ಟ್ರವ್ಯಾಪಿ ಲೆಕ್ಕಪತ್ರಗಳ ನಿರ್ವಹಣೆ ಅಧಿಕಾರ ಹೊಂದಿದ್ದು, ಒಕ್ಕೂಟ ವ್ಯವಸ್ಥೆಯ ಎಲ್ಲಾ 3 ಹಂತಗಳನ್ನು ಒಳಗೊಂಡಿದೆ: ಕೇಂದ್ರ ಸರ್ಕಾರ, ರಾಜ್ಯಗಳು/ಕೇಂದ್ರಾಡಳಿತ ಪ್ರದೇಶ ಸರ್ಕಾರಗಳು ಮತ್ತು ಸ್ಥಳೀಯ ಸಂಸ್ಥೆಗಳು. ಹೀಗಾಗಿ, ಕೊನೆಯ ಮೈಲಿವರೆಗೆ ಲೆಕ್ಕಪತ್ರಗಳ ನಿರ್ವಹಣೆಯ ಹೊಣೆಗಾರಿಕೆ ಜಾರಿಗೊಳಿಸಲಾಗಿದೆ ಎಂಬುದನ್ನು ಖಚಿತಪಡಿಸುತ್ತದೆ. ಲೆಕ್ಕಪರಿಶೋಧನಾ ನ್ಯಾಯವ್ಯಾಪ್ತಿಯು ಲಗತ್ತಿಸಲಾದ ಮತ್ತು ಅಧೀನ ಕಚೇರಿಗಳು, ಸ್ವಾಯತ್ತ ಸಂಸ್ಥೆಗಳು, ಶಾಸನಬದ್ಧ ಇಲಾಖೆ(ಸಂಸ್ಥೆ)ಗಳು ಮತ್ತು ಸಾರ್ವಜನಿಕ ವಲಯದ ಉದ್ಯಮ (ಪಿಎಸ್‌ಯು) ಗಳನ್ನು ಒಳಗೊಂಡಿದೆ.

ಶಾಸನಸಭೆ ಅಥವಾ ವಿಧಾನಸಭೆಯ ಸಮಿತಿಗಳು ಹೊಣೆಗಾರಿಕೆ ಖಚಿತಪಡಿಸಿಕೊಳ್ಳಲು ಮತ್ತು ಉತ್ತಮ ಆಡಳಿತ ಉತ್ತೇಜಿಸುವ ಪ್ರಬಲ ಸಾಧನಗಳಾಗಿವೆ. ಸಂಸತ್ತು/ರಾಜ್ಯ ವಿಧಾನಸಭೆಗಳಿಗೆ ಪ್ರಸ್ತುತಪಡಿಸುವ ಸಿಎಜಿ ಲೆಕ್ಕಪತ್ರ ವರದಿಗಳನ್ನು ಶಾಸಕಾಂಗ ಅಥವಾ ಶಾಸನಸಭೆ ಸಮಿತಿಗಳು ಸಂಪೂರ್ಣ ಪರೀಕ್ಷೆ ಅಥವಾ ಪರಿಶೀಲನೆಗಾಗಿ ಆಯ್ಕೆ ಮಾಡುತ್ತವೆ. ಸಿಎಜಿ ಸಂಸ್ಥೆಯು ಶಾಸಕಾಂಗ ಸಮಿತಿಗಳಿಗೆ ಒಬ್ಬ ಸ್ನೇಹಿತನಾಗಿ, ತತ್ವಜ್ಞಾನಿಯಾಗಿ ಮತ್ತು ಮಾರ್ಗದರ್ಶಿಯಾಗಿ ಕಾರ್ಯ ನಿರ್ವಹಿಸುತ್ತದೆ, ಗಮನ ನೀಡಬೇಕಾದ ವಿಷಯಗಳನ್ನು ಸೂಚಿಸುತ್ತದೆ ಮತ್ತು ಕಾಳಜಿ ಇರುವ ಸಮಸ್ಯೆಗಳನ್ನು ಎತ್ತಿ ತೋರಿಸುತ್ತದೆ.

ಶಾಸನಸಭೆ ಸಮಿತಿಗಳು ಸಿಎಜಿಯ ಆಡಿಟ್ ಅವಲೋಕನಗಳ ಆಳವಾದ ಪರಿಶೀಲನೆ ನಡೆಸುತ್ತವೆ, ವರದಿಗಳಲ್ಲಿ ಸೂಚಿಸಲಾದ ಅಕ್ರಮಗಳ ಬಗ್ಗೆ ತಮ್ಮ ಕ್ರಮಗಳನ್ನು ವಿವರಿಸಲು ಸಚಿವಾಲಯಗಳು ಮತ್ತು ಇಲಾಖೆಗಳ ಅಧಿಕಾರಿ ವರ್ಗ ಅಥವಾ ಕಾರ್ಯ ನಿರ್ವಾಹಕರಿಗೆ ಕರೆ ನೀಡುತ್ತವೆ. ಸಚಿವಾಲಯಗಳು/ಇಲಾಖೆಗಳ ಕಾರ್ಯ ನಿರ್ವಾಹಕರು ಸಿಎಜಿಯ ಅವಲೋಕನಗಳು ಮತ್ತು ಶಿಫಾರಸುಗಳ ಮೇಲೆ ತೆಗೆದುಕೊಂಡ ಕ್ರಮಗಳನ್ನು ತಿಳಿಸುವ ಶಾಸಕಾಂಗ ಸಮಿತಿಗಳಿಗೆ ಕ್ರಮ ಜರುಗಿಸಿದ ಟಿಪ್ಪಣಿ(ಮಾಹಿತಿ)ಗಳನ್ನು ಒದಗಿಸುವ ಅಗತ್ಯವಿದೆ. ಈ ಕ್ರಮ ಜರುಗಿಸಿದ ಟಿಪ್ಪಣಿಗಳನ್ನು ಸಮಿತಿಗಳಿಗೆ ಸಲ್ಲಿಸುವ ಮೊದಲು ಸಿಎಜಿ ಪರಿಶೀಲಿಸುತ್ತದೆ. ಈ ರೀತಿ, ಹಣಕಾಸು ಆಡಳಿತದಲ್ಲಿ ಹೊಣೆಗಾರಿಕೆಯ




Scanned with ACE Scanner

ಆವರ್ತನದಲ್ಲಿ ಸಿಎಜಿ ನಿರ್ಣಾಯಕ ಪಾತ್ರ ವಹಿಸುತ್ತದೆ.

ಸಿಎಜಿಯಿಂದ ನಡೆಯುವ ಲೆಕ್ಕಪತ್ರ ಪರಿಶೀಲನೆ (ಆಡಿಟ್) ಮೂರು ವಿಧವಾಗಿದೆ: ಘಟಕದ ಹಣಕಾಸು ಹೇಳಿಕೆಗಳ ನಿಖರತೆ ಮತ್ತು ಸಮರ್ಪಕತೆ ಖಚಿತಪಡಿಸಿಕೊಳ್ಳಲು ಹಣಕಾಸಿನ ದೃಢೀಕರಣ ಆಡಿಟ್; ಅನ್ವಯವಾಗುವ ನಿಯಮಗಳು, ನಿಬಂಧನೆಗಳು ಮತ್ತು ಕಾರ್ಯವಿಧಾನಗಳ ಅನುಸರಣೆ ಪರಿಶೀಲಿಸಲು ಅನುಸರಣೆ ಆಡಿಟ್. ಸಂಸ್ಥೆಯೊಳಗಿನ ವ್ಯವಸ್ಥೆಗಳು ಆರ್ಥಿಕತೆ, ದಕ್ಷತೆ ಮತ್ತು ಪರಿಣಾಮಕಾರಿತ್ವದೊಂದಿಗೆ ಕಾರ್ಯ ನಿರ್ವಹಿಸುತ್ತವೆಯೇ ಎಂಬುದನ್ನು ನಿರ್ಣಯಿಸಲು ಕಾರ್ಯಕ್ಷಮತೆಯ ಲೆಕ್ಕ ಪರಿಶೋಧನೆ. ಲೆಕ್ಕ ಪರಿಶೋಧನೆಗೆ ಸಂಬಂಧಿಸಿದ ವಿಷಯವನ್ನು ಲೆಕ್ಕಪರಿಶೋಧಕ ಘಟಕ ಮತ್ತು ಅದು ಕಾರ್ಯ ನಿರ್ವಹಿಸುವ ಪರಿಸರದ ಸಂಪೂರ್ಣ ತಿಳಿವಳಿಕೆ ಒಳಗೊಂಡಿರುವ ಅಪಾಯ ಅಥವಾ ಗಂಡಾಂತರಗಳ ಮೌಲ್ಯಮಾಪನದ ನಿಖರವಾದ ಪ್ರಕ್ರಿಯೆಯ ಮೂಲಕ ಆಯ್ಕೆ ಮಾಡಲಾಗುತ್ತದೆ. ಸಚಿವಾಲಯಗಳು ಮತ್ತು ಇಲಾಖೆಗಳ ಆಂತರಿಕ ಲೆಕ್ಕ ಪರಿಶೋಧನಾ ವರದಿಗಳು, ವಿಶ್ಲೇಷಣಾ ಸಾಧನಗಳನ್ನು ಬಳಸಿಕೊಂಡು ರಸೀದಿ ಹಂತದ ಮಾಹಿತಿ ವಿಶ್ಲೇಷಣೆ, ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಅನುಸರಣೆ ಮತ್ತು ಕಾರ್ಯಕ್ಷಮತೆ ಆಡಿಟ್ ಮೂಲಕ ಆಳವಾದ ಪರೀಕ್ಷೆ ನಡೆಸಿ ಸಂಭಾವ್ಯ ಸಮಸ್ಯೆಗಳನ್ನು ಗುರುತಿಸಲು ಹಣಕಾಸು ಲೆಕ್ಕ ಪರಿಶೋಧನೆಗಳು ಉಪಯುಕ್ತ ಮಾಹಿತಿಗಳಾಗಿವೆ.

ಲೆಕ್ಕಪತ್ರಗಳ ಪರಿಶೀಲನಾ ಅವಲೋಕನಗಳನ್ನು ಪರಿಶೀಲನೆಗೆ ಒಳಗಾದ ಆಡಳಿತ ಮಂಡಳಿ ಅಥವಾ ಸಂಸ್ಥೆಗಳಿಗೆ ತಿಳಿಸಲಾಗುತ್ತದೆ. ಪರಿಶೋಧನಾ ವರದಿಗಳು, ಶಾಸನಬದ್ಧ ಸಂಸ್ಥೆಗಳು ಅಥವಾ ಪ್ರಾಧಿಕಾರಗಳ ಲೆಕ್ಕಪತ್ರಗಳ ಪ್ರತ್ಯೇಕ ವರದಿ ಇತ್ಯಾದಿ ರೂಪದಲ್ಲಿ ಸಲ್ಲಿಸಲಾಗುತ್ತದೆ. ಇದು ನ್ಯೂನತೆಗಳನ್ನು ಸರಿಪಡಿಸಲು ಮತ್ತು ಸಮರ್ಪಕ ಕ್ರಮಗಳನ್ನು ತೆಗೆದುಕೊಳ್ಳಲು ಆಡಳಿತ ಮಂಡಳಿಗೆ ಅವಕಾಶ ಒದಗಿಸುತ್ತದೆ. ಗಮನಾರ್ಹವಾದ ಆಡಿಟ್ ಅವಲೋಕನಗಳನ್ನು ಸಿಎಜಿಯ ಲೆಕ್ಕಪರಿಶೋಧನಾ ವರದಿಗಳ ಮೂಲಕ




ಸಂಸತ್ತು ಮತ್ತು ರಾಜ್ಯ ಶಾಸನ ಸಭೆಗಳಿಗೆ ವರದಿ ಮಾಡಲಾಗುತ್ತದೆ. ಇವುಗಳಲ್ಲಿ ಕೇಂದ್ರ ಸರ್ಕಾರದ ಧನ ವಿನಿಯೋಗ ಮತ್ತು ಹಣಕಾಸು ಲೆಕ್ಕಪತ್ರಗಳ ಮೇಲಿನ ಆಡಿಟ್ ವರದಿಗಳು, ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಗಳು, ಸರ್ಕಾರಿ ಪಿಎಸ್‌ಯು ಗಳ ಕಾರ್ಯ ನಿರ್ವಹಣೆಯ ಸಾಮಾನ್ಯ ಉದ್ದೇಶದ ಹಣಕಾಸು ವರದಿಗಳು, ಅನುಸರಣೆ ಮತ್ತು ಕಾರ್ಯಕ್ಷಮತೆ ಲೆಕ್ಕ ಪರಿಶೋಧನಾ ವರದಿಗಳು ಸೇರಿವೆ. ಬಜೆಟ್ ನಿರ್ವಹಣೆಯ ಮೇಲಿನ ಆಡಿಟ್ ಅವಲೋಕನಗಳ ಜತೆಗೆ, ಸಿಎಜಿಯ ಆಡಿಟ್ ವರದಿಗಳು ಪ್ರಮುಖ ಸೂಚ್ಯಂಕಗಳ ಬೃಹತ್ ಆರ್ಥಿಕತೆಯ ವಿಶ್ಲೇಷಣೆ, ವಿತ್ತೀಯ ಕೊರತೆ/ಮಿಗತೆ, ಸರ್ಕಾರದ ಹಣಕಾಸು ವಿಶ್ಲೇಷಣೆ, ಹಿಂದಿನ ವರ್ಷಕ್ಕೆ ಹೋಲಿಸಿದರೆ ಪ್ರಮುಖ ಆರ್ಥಿಕತೆಯಲ್ಲಿನ ನಿರ್ಣಾಯಕ ಬದಲಾವಣೆಗಳು, ಪ್ರವೃತ್ತಿಗಳು ಸೇರಿದಂತೆ ಒಟ್ಟಾರೆ ಹಣಕಾಸಿನ ಸ್ಥಿತಿಗತಿಯ ಮಾಹಿತಿ ಒಳಗೊಂಡಿರುತ್ತವೆ. ಹಣಕಾಸಿನ ಸುಸ್ಥಿರತೆ, ಸಾಲದ ವಿವರ ಮತ್ತು ಪ್ರಮುಖ ಸಾರ್ವಜನಿಕ ಖಾತೆ ವಹಿವಾಟುಗಳು ಇದರಲ್ಲಿ ಸೇರಿವೆ. ಈ ವಿಶ್ಲೇಷಣೆಗಳು ರಾಜ್ಯದ ಆರ್ಥಿಕ ಸ್ಥಿತಿಯ ಕುರಿತು ಸರ್ಕಾರಕ್ಕೆ ಮೌಲ್ಯಯುತ ಒಳನೋಟಗಳನ್ನು ಒದಗಿಸುತ್ತವೆ.

ಹಣಕಾಸಿನ ಸಮರ್ಥನೀಯತೆ ಮತ್ತು ಸಾಲ ನಿರ್ವಹಣೆಯಂತಹ ಪ್ರಮುಖ ಕ್ಷೇತ್ರಗಳಲ್ಲಿ ಉತ್ತಮ ನಿರ್ಧಾರಗಳನ್ನು ಕೈಗೊಳ್ಳಲು ಅನುಕೂಲವಾಗುತ್ತದೆ. ಹೆಚ್ಚುವರಿಯಾಗಿ, ವರದಿಗಳು ಪ್ರಾಯೋಗಿಕ, ರಚನಾತ್ಮಕ ಮತ್ತು ಅನುಷ್ಠಾನಗೊಳಿಸಬಹುದಾದ ಕ್ರಮ-ಆಧರಿತ ಶಿಫಾರಸುಗಳನ್ನು ಒಳಗೊಂಡಿರುತ್ತವೆ, ಅದು ಹಣಕಾಸಿನ ಹೊಣೆಗಾರಿಕೆ ಮತ್ತು ವಿವೇಕ ಹೆಚ್ಚಿಸುವ ಗುರಿ ಹೊಂದಿದೆ.

ನೀತಿ ಬದಲಾವಣೆಗಳು, ವಿನ್ಯಾಸ ಸುಧಾರಣೆಗಳು, ತಿದ್ದುಪಡಿಗಳು, ಬಲಪಡಿಸುವ ವ್ಯವಸ್ಥೆಗಳು ಇತ್ಯಾದಿಗಳ ಮೂಲಕ ನಡೆಯುವ ಲೆಕ್ಕಪತ್ರ ಪರಿಶೋಧನೆಯ ಪ್ರಯತ್ನ ಉತ್ತಮ ಆಡಳಿತಕ್ಕೆ ಉತ್ತೇಜನ ನೀಡುತ್ತದೆ. ಉದಾಹರಣೆಗೆ, ತೆರಿಗೆ ಆಡಳಿತದಲ್ಲಿ ಕೆಲವು ಲೋಪಗಳು/ಕಡಿತಗಳು ಇದ್ದಲ್ಲಿ ಅದು ಸರ್ಕಾರದ ಸ್ವೀಕೃತಿ(ಆದಾಯ)ಯ ಸಂಭಾವ್ಯ ನಷ್ಟಕ್ಕೆ ಕಾರಣವಾಗಬಹುದು. ಲೆಕ್ಕಪರಿಶೋಧನಾ ವರದಿಗಳು ಲೋಪಗಳನ್ನು ಸರಿಪಡಿಸುವ ಕ್ರಮಕ್ಕೆ ಅನುವು ಮಾಡಿಕೊಡುತ್ತವೆ. ತೆರಿಗೆ ಸ್ವೀಕೃತಿ ಮೇಲಿನ ಲೆಕ್ಕ ಪರಿಶೋಧನಾ ವರದಿಗಳು ತೆರಿಗೆಗಳ ಗಣನೆ–ಮೌಲ್ಯಮಾಪನದ



Scanned with ACE Scanner

ನಿರ್ದೇಶನಗಳನ್ನು ಒಳಗೊಂಡಿರುತ್ತವೆ, ಸ್ವೀಕಾರಾರ್ಹಗಳನ್ನು ವಸೂಲಿ ಮಾಡದಿರುವುದು ಮತ್ತು ಸಂಬಂಧಿತ ಪಾರ್ಟಿಗಳಿಂದ ವಸೂಲಾತಿಗೆ ಅಗತ್ಯವಾದ ಕ್ರಮಗಳು ಇದರಲ್ಲಿ ಸೇರಿವೆ. 2021–22ರ ಸ್ವೀಕೃತಿಗಳ ಲೆಕ್ಕ ಪರಿಶೋಧನೆಯ ಆಧಾರದ ಮೇಲೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 25,571 ಕೋಟಿ ರೂ. ವಸೂಲಿ ಮಾಡಬೇಕಿದೆ ಎಂದು ಒಪ್ಪಿಕೊಂಡಿವೆ. ಲೆಕ್ಕ ಪರಿಶೋಧನೆಯ ಮೂಲಕ ಸೂಚಿಸಲಾದ ತೆರಿಗೆಗಳ ಮೌಲ್ಯಮಾಪನದ ದೋಷಗಳನ್ನು ಸರಿಪಡಿಸಲು ಆದಾಯ ತೆರಿಗೆ ಇಲಾಖೆಯು ಕಳೆದ 3 ವರ್ಷಗಳಲ್ಲಿ 415 ಕೋಟಿ ರೂ. ವಸೂಲಿ ಮಾಡಿದೆ.

ಸಿಎಜಿ ಲೆಕ್ಕಪತ್ರ ಪರಿಶೋಧನೆಯು ಚಾಲ್ತಿಯಲ್ಲಿರುವ ಅಥವಾ ಅಸ್ತಿತ್ವದಲ್ಲಿರುವ ಕಾನೂನುಗಳಿಗೆ ಅನುಸಾರವಾಗಿ ಸಾರ್ವಜನಿಕ ಹಣದ ಸಮರ್ಪಕ ಬಳಕೆಯನ್ನು ಖಾತ್ರಿಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಉದಾಹರಣೆಗೆ, ಆದಾಯ ತೆರಿಗೆ ಇಲಾಖೆಯಲ್ಲಿ ಶೋಧ ಮತ್ತು ಮುಟ್ಟುಗೋಲು ಆಸ್ತಿಗಳ ಮೌಲ್ಯಮಾಪನದ ಲೆಕ್ಕಪತ್ರ ಪರಿಶೋಧನೆ ಸಮಯದಲ್ಲಿ, ಲೆಕ್ಕ ಪರಿಶೋಧನೆಯು ಆದಾಯ ತೆರಿಗೆ ಕಾಯ್ದೆಯ ನಿಬಂಧನೆಗಳ ಅನುಪಸ್ಥಿತಿ, ಆದಾಯ ತೆರಿಗೆ ನಿಬಂಧನೆಗಳನ್ನು ಅನುಸರಿಸದಿರುವುದು, ಶೋಧ ಮೌಲ್ಯಮಾಪನಗಳನ್ನು ಕೇಂದ್ರೀಕರಿಸದಿರುವುದು, ದಂಡ ವಿಧಿಸುವಿಕೆ, ಇತ್ಯಾದಿ ಸಮಸ್ಯೆಗಳನ್ನು ಪರಿಹರಿಸಲು ಕೇಂದ್ರ ಸರ್ಕಾರವು, ಆದಾಯ ತೆರಿಗೆ ಕಾಯಿದೆಯಲ್ಲಿ ತಿದ್ದುಪಡಿಗಳನ್ನು ಮಾಡಿತು. ಕಾಯಿದೆಯಲ್ಲಿ ಹೊಸ ಸೆಕ್ಷನ್ 79A ಅಳವಡಿಕೆಯೊಂದಿಗೆ, ಶೋಧನಾ ಕಾರ್ಯಾಚರಣೆಯ ಪರಿಣಾಮವಾಗಿ, ಬಹಿರಂಗಪಡಿಸದ ಆದಾಯದ ಮೇಲೆ ಯಾವುದೇ ನಷ್ಟವನ್ನು ಮೌಲ್ಯಮಾಪನ ಮಾಡಲು ಅನುಮತಿಸುವುದಿಲ್ಲ. ಸೆಕ್ಷನ್ 149ರಲ್ಲಿನ ಉಪ–ವಿಭಾಗ (1A) ವು ತಪ್ಪಿಸಿಕೊಂಡ ಹಿಂದಿನ ಅವಧಿಯ ಯಾವುದೇ ತೆರಿಗೆ ವಿಧಿಸಬಹುದಾದ ಆದಾಯ ಮೌಲ್ಯಮಾಪನವನ್ನು ಈಗ ಕಾಯಿದೆಯ ಅಡಿ ಮೌಲ್ಯಮಾಪನ ಮಾಡಬಹುದು.

ಅಂತೆಯೇ, ಸಿಎಜಿ ಸಂಸ್ಥೆಯು ಸರ್ಕಾರಿ ಕಂಪನಿಗಳ ಲೆಕ್ಕ ಪರಿಶೋಧನೆ ನಡೆಸುತ್ತದೆ, ಇದರಲ್ಲಿ ವರ್ಗೀಕರಣ ದೋಷಗಳು, ತಪ್ಪು ಹೇಳಿಕೆಗಳು, ಹಣಕಾಸು ಹೇಳಿಕೆಗಳಲ್ಲಿನ ತಿದ್ದುಪಡಿಯ ಅಗತ್ಯವಿರುವ ಅಕ್ರಮಗಳು ಮತ್ತು ಕಾರ್ಪೊರೇಟ್ ಆಡಳಿತದ ಸಮಸ್ಯೆಗಳನ್ನು ಎತ್ತಿ ತೋರಿಸಿದೆ. 2021–22ರ ಅವಧಿಯಲ್ಲಿ, 1,351 ಕಂಪನಿಗಳು ಮತ್ತು ನಿಗಮಗಳ ಲೆಕ್ಕ ಪರಿಶೋಧನೆ ನಡೆಸಿದ ಸಿಎಜಿ, 49,089.53 ಕೋಟಿ ರೂ. ಮೌಲ್ಯದ ಲೆಕ್ಕಪತ್ರಗಳಿಗೆ ತಿದ್ದುಪಡಿ, 13,694.18 ಕೋಟಿ ರೂ. ಮೌಲ್ಯದ ಲಾಭ ಮತ್ತು ನಷ್ಟದಲ್ಲಿ ಬದಲಾವಣೆ ಮತ್ತು 1,07,340.76 ಕೋಟಿ ರೂ. ಮೌಲ್ಯದ ಆಸ್ತಿ ಮತ್ತು ಹೊಣೆಗಾರಿಕೆಗಳಲ್ಲಿ ಬದಲಾವಣೆ ಹಾಗೂ 32,015.80 ಕೋಟಿ ರೂ. ಮೌಲ್ಯದ ವರ್ಗೀಕರಣ ತಪ್ಪುಗಳಿಗೆ ಬದಲಾವಣೆ ತರಬೇಕು ಎಂದು ಸೂಚಿಸಿದೆ. ಕೇಂದ್ರ ಮತ್ತು ರಾಜ್ಯಗಳ ಸಾರ್ವಜನಿಕ ವಲಯದ ಉದ್ದಿಮೆಗಳ(ಪಿಎಸ್‌ಇಗಳು) ಮೇಲಿನ ವಿವಿಧ ಆಡಿಟ್ ವರದಿಗಳಲ್ಲಿ ಮಾಡಲಾದ ಶಿಫಾರಸುಗಳು ಕಾರ್ಪೊರೇಟ್ ಆಡಳಿತವನ್ನು ಸುಧಾರಿಸಲು ಶಾಸನಬದ್ಧ ನಿಬಂಧನೆಗಳು, ನಿಯಮಗಳು ಮತ್ತು ಮಾರ್ಗಸೂಚಿಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರಗಳು ಮತ್ತು ಸಾರ್ವಜನಿಕ ವಲಯದ ಕಂಪನಿಗಳ ನಿರ್ವಹಣೆಯ ಅಗತ್ಯವನ್ನು ಸರ್ವಾನುಮತದಿಂದ ಒತ್ತಿ ಹೇಳುತ್ತವೆ.

ಭಾರತದಲ್ಲಿ ಸಾರ್ವಜನಿಕ ಹಣಕಾಸು ಆಡಳಿತವು ಹಲವು ವರ್ಷಗಳಲ್ಲಿ ಹಲವಾರು ಸುಧಾರಣೆಗಳನ್ನು ಕಂಡಿದೆ. ಡಿಜಿಟಲೀಕರಣದೊಂದಿಗೆ, ಸರ್ಕಾರಗಳು ಸಮಗ್ರ ಹಣಕಾಸು ನಿರ್ವಹಣಾ ವ್ಯವಸ್ಥೆ (ಐಎಫ್‌ಎಮ್‌ಎಸ್) ಯ ಕಡೆಗೆ ಸಾಗಿವೆ. ಇದು ಸಮಗ್ರ ಪಾವತಿ, ಸ್ವೀಕೃತಿ, ಲೆಕ್ಕಪತ್ರ ನಿರ್ವಹಣೆಯ ಮಾಹಿತಿ ವ್ಯವಸ್ಥೆಯಾಗಿದೆ. ಆದಾಯದ ಠೇವಣಿಗಳು, ಅನುಷ್ಠಾನ ಏಜೆನ್ಸಿಗಳಿಗೆ ಬಿಡುಗಡೆಯಾದ ಹಣ, ಸರ್ಕಾರಿ ಯೋಜನೆಗಳ ಫಲಾನುಭವಿಗಳಿಗೆ ಮಾಡಿದ ಪಾವತಿಗಳು ಇತ್ಯಾದಿ ಸೇರಿದಂತೆ ಎಲ್ಲಾ ವಹಿವಾಟುಗಳ ಗೋಚರತೆ ಹೆಚ್ಚಿಸುವ ಮೂಲಕ ಆರ್ಥಿಕ ಆಡಳಿತದಲ್ಲಿ ಇದು ಪಾರದರ್ಶಕತೆಯನ್ನು ಸಕ್ರಿಯಗೊಳಿಸಿದೆ, ಆ ಮೂಲಕ ಉತ್ತಮ ಮೇಲ್ವಿಚಾರಣೆಯನ್ನು ಸುಗಮಗೊಳಿಸುತ್ತದೆ. ತೆರಿಗೆ ರಿಟರ್ನ್ಸ್ ಮತ್ತು ಮೌಲ್ಯಮಾಪನಗಳ ಎಲೆಕ್ಟ್ರಾನಿಕ್ ಫೈಲಿಂಗ್, ಟೋಲ್ ಸಂಗ್ರಹ ವ್ಯವಸ್ಥೆ (ಫಾಸ್ಟ್ ಟ್ಯಾಗ್), ಭಾರತ್‌ಕೋಶ್, ನೇರ ನಗದು ವರ್ಗಾವಣೆಗಳು, ಇ–ನ್ಯಾಮ್, ಇತ್ಯಾದಿ ಇತರೆ ಆಡಳಿತ ಕಾರ್ಯವಿಧಾನಗಳ ಸ್ವಯಂಚಾಲಿತ ವ್ಯವಸ್ಥೆಯು ಸಾರ್ವಜನಿಕ ಹಣಕಾಸು ನಿರ್ವಹಣೆಯಲ್ಲಿ ಪಾರದರ್ಶಕತೆಯನ್ನು ಮತ್ತಷ್ಟು ಹೆಚ್ಚಿಸಿದೆ ಮತ್ತು ಉತ್ತಮ ಹೊಣೆಗಾರಿಕೆ ಕಾರ್ಯವಿಧಾನಗಳನ್ನು ಸಕ್ರಿಯಗೊಳಿಸಿದೆ.

ಸಿಎಜಿ ಸಂಸ್ಥೆಯು ಬದಲಾಗುತ್ತಿರುವ ಹಣಕಾಸು ನಿರ್ವಹಣಾ ಪರಿಸರ ವ್ಯವಸ್ಥೆಯೊಂದಿಗೆ ಸ್ಥಿರವಾದ ವೇಗ ಪಡೆದುಕೊಂಡಿದೆ. ಸರ್ಕಾರದ ಸಮಗ್ರ ಹಣಕಾಸು ನಿರ್ವಹಣಾ ವ್ಯವಸ್ಥೆ (ಐಎಫ್‌ಎಮ್‌ಎಸ್) ಯೊಂದಿಗೆ ಲೆಕ್ಕಪತ್ರ ತಂತ್ರಾಂಶವನ್ನು ಸಂಯೋಜಿಸುವ ಪ್ರಕ್ರಿಯೆ ಪ್ರಾರಂಭಿಸಲಾಗಿದೆ. ಇದು ಲೆಕ್ಕ ಪರಿಶೋಧಕ ಪ್ರಕ್ರಿಯೆಗಳ ದಕ್ಷತೆ ಸುಧಾರಿಸಲು ಮತ್ತು ಹೆಚ್ಚಿನ ಸಂಖ್ಯೆಯ ರಸೀದಿ ಮೌಲ್ಯೀಕರಣ ಮತ್ತು ಭರವಸೆ ಪರಿಶೀಲನೆಗಳನ್ನು ಕೈಗೊಳ್ಳಲು ಲೆಕ್ಕ ಪರಿಶೋಧಕ ಸಿಬ್ಬಂದಿಯನ್ನು ಮುಕ್ತಗೊಳಿಸಲು ಸಹಾಯ ಮಾಡಿದೆ, ಇದರಿಂದಾಗಿ ಲೆಕ್ಕಪತ್ರಗಳಲ್ಲಿ ನಿಖರತೆ ಹೆಚ್ಚಿಸಿದೆ. ಲೆಕ್ಕ ಪರಿಶೋಧನೆಯ ಭಾಗವಾಗಿ, ಲೆಕ್ಕ ಪರಿಶೋಧನೆಗೆ ದತ್ತಾಂಶ–ನೇತೃತ್ವದ ಕಾರ್ಯವಿಧಾನ ಅಳವಡಿಸಿಕೊಳ್ಳುವುದರಿಂದ ವೇಗದ ವಿತರಣೆಯನ್ನು ಸುಗಮಗೊಳಿಸಿದೆ. ಜತೆಗೆ, ಹಣಕಾಸು ಆಡಳಿತ ಬಲಪಡಿಸಲು ಆಡಿಟ್ ಫಲಿತಾಂಶಗಳ ಗುಣಮಟ್ಟವನ್ನು ಸುಧಾರಿಸಿದೆ. ಜಿಎಸ್‌ಟಿ ಆದಾಯಗಳ ಡಿಜಿಟಲ್ ಆಡಿಟ್‌ಗಳಾಗಿ ಸಾಂಸ್ಥಿಕ ಮಾರ್ಗಸೂಚಿಯನ್ನು ರೂಪಿಸಲಾಗಿದೆ. ಅಂತೆಯೇ, ಡೇಟಾ ಅನಾಲಿಟಿಕ್ಸ್ ಪರಿಕರಗಳ ಅನ್ವಯವು ದೊಡ್ಡ ಡೇಟಾ ಸೆಟ್‌ಗಳನ್ನು ವಿಶ್ಲೇಷಿಸುವಲ್ಲಿ ಸಹಾಯ ಮಾಡಿದೆ, ಇದು ಹೊರಗಿನವರನ್ನು ಗುರುತಿಸಲು ಮತ್ತು ಹಣಕಾಸಿನ ಆಡಳಿತದಲ್ಲಿ ಮಾತ್ರವಲ್ಲದೆ, ಒಟ್ಟಾರೆ ಆಡಳಿತ ಕಾರ್ಯವಿಧಾನಗಳಲ್ಲಿ ನಿಯಂತ್ರಣಗಳನ್ನು ಬಲಪಡಿಸಲು ಸಂಭಾವ್ಯ ಅಪಾಯಗಳನ್ನು ಗುರುತಿಸಲು ಸಹಾಯ ಮಾಡಿದೆ.

ಇದಲ್ಲದೆ, ಹಣಕಾಸು ಆಡಳಿತದಲ್ಲಿ ಸರ್ಕಾರ ತಂದಿರುವ ಸುಧಾರಣೆಗಳು ಇತ್ತೀಚಿನ ದಿನಗಳಲ್ಲಿ ಕಾರ್ಯಕ್ಷಮತೆಯ ಲೆಕ್ಕ ಪರಿಶೋಧನೆಗಾಗಿ ಪ್ರಮುಖ ಕೇಂದ್ರೀಕೃತ ಅಂಶಗಳಾಗಿವೆ. ಉದಾಹರಣೆಗೆ, ಸಿಎಜಿ ಸಂಸ್ಥೆಯು ಫಲಾನುಭವಿಗಳಿಗೆ ನೇರ

ನಗದು ವರ್ಗಾವಣೆ (ಡಿಬಿಟಿ) ವ್ಯವಸ್ಥೆಯ ಹಲವಾರು ಲೆಕ್ಕ ಪರಿಶೋಧನೆಗಳನ್ನು ನಡೆಸಿದೆ, ನಡೆಸುತ್ತಿದೆ ಮತ್ತು ವ್ಯವಸ್ಥೆಯ ಪರಿಣಾಮಕಾರಿತ್ವ ಮತ್ತು ದಕ್ಷತೆ ನಿರ್ಣಯಿಸಲು, ಸಮರ್ಪಕ ಗುರುತಿಸುವಿಕೆ, ಎಲ್ಲಾ ಉದ್ದೇಶಿತ ಫಲಾನುಭವಿಗಳ ವ್ಯಾಪ್ತಿ ಮತ್ತು ಸರಿಯಾದ ಮತ್ತು ಸಮಯೋಚಿತ ಪಾವತಿಗಳ ಮೇಲೆ ಗಮನ ಕೇಂದ್ರೀಕರಿಸಿದೆ. ಡಿಬಿಟಿಯ ಆಡಿಟ್‌ನಲ್ಲಿ ಮಾಡಿದ ಲೆಕ್ಕಪತ್ರ ಅವಲೋಕನಗಳು ಮತ್ತು ಶಿಫಾರಸುಗಳು ಅಧಿಕೃತ ಫಲಾನುಭವಿಗಳಿಗೆ ಸಕಾಲಿಕ ಪಾವತಿಗಳನ್ನು ಸಕ್ರಿಯಗೊಳಿಸಲು, ಕಳ್ಳತನ, ನಕಲಿ ಪಾವತಿಗಳು ಇತ್ಯಾದಿಗಳನ್ನು ತಡೆಗಟ್ಟಲು ಸರ್ಕಾರದ ಐಟಿ ವ್ಯವಸ್ಥೆಗಳಲ್ಲಿನ ನಿಯಂತ್ರಣಗಳನ್ನು ಬಲಪಡಿಸಲು ಸಹಾಯಕವಾಗುತ್ತವೆ.

ಹೆಚ್ಚುವರಿಯಾಗಿ, ಲೆಕ್ಕ ಪರಿಶೋಧನೆಗಾಗಿ ಆಯ್ಕೆ ಮಾಡಲಾದ ಎಲ್ಲಾ ಸರ್ಕಾರಿ ಯೋಜನೆಗಳಿಗೆ, ಹಣಕಾಸು ನಿರ್ವಹಣೆಯು ಒಂದು ಪ್ರಮುಖ ಕೇಂದ್ರೀಕೃತ ಅಂಶವಾಗಿದೆ. ಮನರೆಗಾ, ಪಿಎಂ ಆವಾಸ್ ಯೋಜನೆ, ಡಿಡಿಯುಜಿಜೆವೈ, ಸೌಭಾಗ್ಯ, ಎಐಬಿಪಿ ಮತ್ತು ಎನ್‌ಆರ್‌ಎಚ್‌ಎಂನಂತಹ ಸರ್ಕಾರಿ ಯೋಜನೆಗಳಲ್ಲಿನ ಹಣಕಾಸು ವ್ಯವಸ್ಥೆಗಳ ಲೆಕ್ಕಪರಿಶೋಧನೆಗಳನ್ನು ನಡೆಸಲಾಗಿದೆ, ಇದರಲ್ಲಿ ಅನುಷ್ಠಾನ ಸಂಸ್ಥೆಗಳಿಗೆ ಹಣ ಬಿಡುಗಡೆಗೆ ಸಂಬಂಧಿಸಿದ ವ್ಯವಸ್ಥಿತ ಸಮಸ್ಯೆಗಳು, ಖರ್ಚು ಮಾಡದ ಬಾಕಿ ಮೊತ್ತ, ಬಳಕೆಯ ಪ್ರಮಾಣಪತ್ರಗಳನ್ನು ಸಲ್ಲಿಸದಿರುವುದು ಮತ್ತು ಹಣಕಾಸಿನ ಅವ್ಯವಹಾರಗಳಾದ ನಿಧಿಯ ದುರ್ಬಳಕೆ, ನಿಧಿಗಳ ಸ್ಥಗಿತ, ಕಾಲ್ಪನಿಕ/ಮೋಸದ ಖರ್ಚು, ಮತ್ತು ಆದಾಯದ ಬಳಕೆ ಮಾಡದಿರುವುದನ್ನು ಎತ್ತಿ ತೋರಿಸಲಾಗಿದೆ. ಆಡಿಟ್ ಅವಲೋಕನಗಳು, ಪುರಾವೆ ಆಧರಿತ ಶಿಫಾರಸುಗಳೊಂದಿಗೆ ತಿದ್ದುಪಡಿಗಳು, ಅನುಷ್ಠಾನ ವಿನ್ಯಾಸದಲ್ಲಿನ ಬದಲಾವಣೆಗಳು ಮತ್ತು ಅತ್ಯಾಧುನಿಕ ಮಟ್ಟದಲ್ಲಿ ಅಡೆತಡೆಗಳನ್ನು ತೆಗೆದುಹಾಕುವ ಮೂಲಕ ಸಕಾರಾತ್ಮಕ ಬದಲಾವಣೆಯನ್ನು ತರುವಲ್ಲಿ ಸರ್ಕಾರಕ್ಕೆ ಒಳನೋಟಗಳನ್ನು ಒದಗಿಸಿವೆ.

ಅಸ್ತಿತ್ವದಲ್ಲಿರುವ ಅಸಮಾನತೆಗಳು, ಅನನ್ಯ ಮತ್ತು ವೈವಿಧ್ಯಮಯ ವ್ಯವಸ್ಥೆಗಳು, ಡಿಜಿಟಲ್ ವಿಭಜನೆ ಮತ್ತು ಸುಸ್ಥಿರತೆಯನ್ನು ಗಮನದಲ್ಲಿಟ್ಟುಕೊಂಡು ಇಂದಿನ ಜಗತ್ತಿನಲ್ಲಿ ಉದಯೋನ್ಮುಖ ಸವಾಲುಗಳನ್ನು ಸಮಗ್ರ ವಿಧಾನದೊಂದಿಗೆ ಪರಿಹರಿಸಬೇಕಾಗಿದೆ. ಉದಾರೀಕರಣ ಮತ್ತು ಹೆಚ್ಚಿದ ಸ್ವಾಯತ್ತೆಯ ಯುಗದಲ್ಲಿ, ಕಾರ್ಯ ನಿರ್ವಾಹಕರ ಅಥವಾ ಅಧಿಕಾರಿ ವರ್ಗದ ಕಾರ್ಯ ನಿರ್ವಹಣೆಯಲ್ಲಿ ವಿಶ್ವಾಸ ಮೂಡಿಸಲು ಮತ್ತು ನಂಬಿಕೆ ಕಾಪಾಡಲು, ಅವರ ಕಾರ್ಯ ನಿರ್ವಹಣೆಯಲ್ಲಿ ಉತ್ತಮ ಪಾರದರ್ಶಕತೆ ಮತ್ತು ಹೊಣೆಗಾರಿಕೆ ತರಲು ನೀತಿ ನಿರೂಪಕರು ಮತ್ತು ಸಮಾಜವು ರಾಷ್ಟ್ರದ ಲೆಕ್ಕ ಪರಿಶೋಧಕರಿಂದ ಕೆಲವು ನಿರೀಕ್ಷೆಗಳನ್ನು ಹೊಂದಿದೆ. ಸಿಎಜಿ ಸಂಸ್ಥೆಯು ಭಾರತದಲ್ಲಿ ತೆರಿಗೆ ಪಾವತಿದಾರರು ಮತ್ತು ಭಾರತೀಯ ಉದ್ಯಮಗಳಲ್ಲಿ ಹೂಡಿಕೆದಾರರ ನಂಬಿಕೆಯನ್ನು ಎತ್ತಿ ಹಿಡಿಯುತ್ತದೆ. ಸದೃಢವಾದ ಆರ್ಥಿಕ ಆಡಳಿತ ಸ್ಥಾಪಿಸುವ ಗುರಿಯತ್ತ ರಚನಾತ್ಮಕವಾಗಿ ಕೊಡುಗೆ ನೀಡುವುದನ್ನು ಮುಂದುವರೆಸಿದೆ.

ಸಾರ್ವಜನಿಕ ಹಣಕಾಸು ನಿರ್ವಹಣಾ ವ್ಯವಸ್ಥೆಗೆ ಮೌಲ್ಯ ಸೇರಿಸುವುದು ಎಸ್‌ಎಐ ಇಂಡಿಯಾದ ಪ್ರಮುಖ ಕಾರ್ಯತಂತ್ರದ ಗುರಿಗಳಲ್ಲಿ ಒಂದಾಗಿದೆ.

ರಾಜ್ಯ ಸರ್ಕಾರದ ಹಣಕಾಸು ವ್ಯವಸ್ಥೆಗಳೊಂದಿಗೆ ಎಸ್‌ಎಐ ಲೆಕ್ಕಪತ್ರ ಕಚೇರಿಗಳ ಏಕೀಕರಣ (ಸಂಯೋಜನೆ) ವು ಹಣಕಾಸಿನ ಮಾಹಿತಿ ಹರಿವುಗಳು ಮತ್ತು ದೊಡ್ಡ ಡೇಟಾಸೆಟ್‌ಗಳಿಗೆ ಪ್ರವೇಶ ಕಲ್ಪಿಸುತ್ತದೆ ಅಥವಾ ತೆರೆಯುತ್ತದೆ, ಇದು ಲೆಕ್ಕ ಪರಿಶೋಧನೆಯ ಕಾರ್ಯಗಳ ದಕ್ಷತೆ ಸುಧಾರಿಸುತ್ತದೆ ಮತ್ತು ಹತೋಟಿಗೆ ತರುತ್ತದೆ. 2023–2030ರ ಸಿಎಜಿ ಸಂಸ್ಥೆಯ ಕಾರ್ಯತಂತ್ರದ ಯೋಜನೆಯು ಲೆಕ್ಕಪತ್ರಗಳು ಮತ್ತು ಆಡಿಟ್ ವ್ಯಾಪ್ತಿ ನಡುವಿನ ಸಂಪರ್ಕ ಬಲಪಡಿಸುತ್ತದೆ. ಲೆಕ್ಕಪರಿಶೋಧಕ ಕಚೇರಿಗಳು ಸಾರ್ವಜನಿಕ ಹಣಕಾಸು ನಿರ್ವಹಣೆಯಲ್ಲಿ ಸಲಹೆಗಾರರಾಗಲು ಮತ್ತು ಸಾರ್ವಜನಿಕ ಹಣಕಾಸು ನಿರ್ವಹಣೆ (ಪಿಎಫ್‌ಎಂ)ಯ ಫಲಿತಾಂಶಗಳನ್ನು ಬೆಂಬಲಿಸಲು ಅನುವು ಮಾಡಿಕೊಡುವ ಗುರಿಯೊಂದಿಗೆ ನಿರ್ದಿಷ್ಟವಾಗಿ ಹಣಕಾಸಿನ ಮಾಹಿತಿ ವಿಶ್ಲೇಷಣೆಗಾಗಿ, ಡೇಟಾ ವಿಶ್ಲೇಷಣೆಗಾಗಿ ಸಾಮರ್ಥ್ಯಗಳನ್ನು ನಿರ್ಮಿಸುವ ಮೂಲಕ ಇದನ್ನು ಸಾಧಿಸಲಾಗುತ್ತದೆ.

ಸಾಂಸ್ಥಿಕ ಮೌಲ್ಯಗಳಲ್ಲಿನ ಮೂಲಭೂತ ನಂಬಿಕೆಗಳು, ವೃತ್ತಿಪರತೆ, ಸಾಮರ್ಥ್ಯ, ಸಾಮಾಜಿಕ ಅರಿವು ಮತ್ತು ಸಾರ್ವಜನಿಕ ಸಂಪನ್ಮೂಲಗಳ ಸಂಗ್ರಹಣೆ ಮತ್ತು ಬಳಕೆಯ ಬಗ್ಗೆ ವಿಶ್ವಾಸಾರ್ಹ ಭರವಸೆ ನೀಡುವ ಬದ್ಧತೆಯು ಭಾರತದ ಸಿಎಜಿಯ ಪ್ರತಿಷ್ಠಿತ ಸಂಸ್ಥೆಯ ದಕ್ಷ ಆಡಳಿತ ಪರಂಪರೆಯನ್ನು ಬೆಳಕಿನ ಕಿಂಡಿಯಾಗಿ ಬೆಂಬಲಿಸುವಲ್ಲಿ ಪ್ರಮುಖ ಅಂಶಗಳಾಗಿವೆ.


**ಯೋಜನಾ**

**ಅಕ್ಟೋಬರ್ 2023 ಸಂಚಿಕೆಯ ವಿಷಯ**


**ಮೂಲಭೂತ ಸೌಕರ್ಯ**




Scanned with ACE Scanner

# ಗ್ರಾಹಕರ ಮತ್ತು ವ್ಯಾಪಾರಗಳ ಹಿತ ರಕ್ಷಣೆ

* ರವನೀತ್ ಕೌರ್



**ವ್ಯಾಪಾರಗಳ ನಿರ್ವಹಣೆ ಮತ್ತು ಇತರರ ಜೊತೆಗಿನ ಸಂವಾದಗಳಿಗೆ ಒಂದು ಸೂಕ್ತ ರೂಪ ನೀಡುವಲ್ಲಿ ಸ್ಪರ್ಧೆಯು ಪ್ರಮುಖ ಪಾತ್ರ ವಹಿಸುತ್ತದೆ. ಇದು ವ್ಯಾಪಾರಗಳನ್ನು ಸ್ಥಿರವಾಗಿ ಬೆಳೆಸಲು, ಪ್ರಯೋಗಶೀಲಗೊಳಿಸಲು, ಮತ್ತು ಗ್ರಾಹಕರ ಅವಶ್ಯಕತೆಗಳನ್ನು ಪರಿಣಾಮಕಾರಿಯಾಗಿ ಪೂರೈಸಲು ಬೇಕಾದ ವಾತಾವರಣವನ್ನು ನಿರ್ಮಿಸುತ್ತದೆ. ಸ್ಪರ್ಧಾ ಕಾನೂನು ಆಯೋಗ – ಸಿ.ಸಿ.ಐ. ಜೊತೆಗೆ ಅದರ ಸಾಧನವಾಗಿ ಕೆಲಸ ಮಾಡುತ್ತಿರುವ ಸ್ಪರ್ಧಾ ಕಾಯಿದೆ, ಮಾರುಕಟ್ಟೆಗಳನ್ನು ನಿಯಂತ್ರಿಸುವ ಕಾರ್ಯದ ಜೊತೆಗೆ ನ್ಯಾಯಸಮ್ಮತ ಸ್ಪರ್ಧೆ ಮತ್ತು ವ್ಯಾಪಾರಗಳಿಗೆ ಬೇಕಾದ ವ್ಯವಹಾರದ ಗುಣಮಟ್ಟವನ್ನೂ ಒದಗಿಸುತ್ತದೆ. ಸ್ಪರ್ಧಾ ಕಾನೂನು, ಗ್ರಾಹಕ ಹಕ್ಕುಗಳಿಗೆ ನೇರವಾಗಿ ಸಂಬಂಧಪಡದಿದ್ದರೂ, ಸ್ಪರ್ಧಾ–ವಿರೋಧಿ ಶಕ್ತಿಗಳು ಮತ್ತು ಪ್ರಾಬಲ್ಯ ಸಾಧಿಸುವ ಶಕ್ತಿಗಳನ್ನು ಮಾರುಕಟ್ಟೆಯಿಂದ ದೂರ ಇಡುವ ಮೂಲಕ ಗ್ರಾಹಕರ ಹಿತಾಸಕ್ತಿಗಳಿಗೆ ಆದ್ಯತೆ ನೀಡುತ್ತದೆ.**

ಗ್ರಾಹಕರ ಮತ್ತು ವ್ಯಾಪಾರಗಳ ಹಿತಾಸಕ್ತಿಗಳನ್ನು ಪರಿಶೀಲಿಸಿದಾಗ ಅವು ವಿಷಮಗೊಂಡಂತೆ ಕಂಡರೂ, ಸ್ಪರ್ಧೆಯ ದೃಷ್ಟಿಯಿಂದ ಅವುಗಳನ್ನು ಕೂಲಂಕಷವಾಗಿ ಗಮನಿಸಿದಾಗ ಹೇಗಾಗಲೂ ಎರಡು ಹಿತಾಸಕ್ತಿಗಳು ಸಮಾನ ಹೊಣೆ ಹೊಂದಿವೆ ಎಂಬುದು ಸ್ಪಷ್ಟವಾಗುತ್ತದೆ. ಸ್ಪರ್ಧಾ ಕಾನೂನು, ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ವಾತಾವರಣವನ್ನು ಪೋಷಿಸುವ ಮತ್ತು ಸ್ಪರ್ಧಾ–ವಿರೋಧಿ ಶಕ್ತಿಗಳನ್ನು ತಡೆಗಟ್ಟುವ ಮೂಲಕ ಗ್ರಾಹಕರ ಮತ್ತು ವ್ಯಾಪಾರಗಳ ಹಿತಾಸಕ್ತಿಯನ್ನು ರಕ್ಷಿಸುವ ಉದ್ದೇಶ ಹೊಂದಿದೆ. ಇದು ನ್ಯಾಯಸಮ್ಮತ ಸ್ಪರ್ಧೆಯನ್ನು ಖಚಿತಪಡಿಸುವುದಲ್ಲದೇ, ಎಲ್ಲ ಮಾರುಕಟ್ಟೆ ಪಾಲುದಾರರಿಗೆ ಒಂದು ಘನತೆಯನ್ನು ಒದಗಿಸುವ ಮೂಲಕ ಪ್ರಯೋಗಶೀಲತೆಯನ್ನು ಮತ್ತು ದಕ್ಷತೆಯನ್ನು ಪ್ರೋತ್ಸಾಹಿಸುತ್ತದೆ. ಈ ಕಾನೂನನ್ನು, ಸ್ಪರ್ಧೆಯ ಪರಿಸ್ಥಿತಿಗಳನ್ನು ಮತ್ತು ಗ್ರಾಹಕರ ಕ್ಷೇಮವನ್ನು ರಕ್ಷಿಸುವ ನಿಯಂತ್ರಣ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿರುವ ಭಾರತೀಯ ಸ್ಪರ್ಧಾ ಆಯೋಗದ (ಸಿ.ಸಿ.ಐ.) ಮೂಲಕ ಜಾರಿಗೊಳಿಸಲಾಗಿದೆ.

ಅನಾರೋಗ್ಯಕರ ಸ್ಪರ್ಧೆಯನ್ನು ತಡೆಗಟ್ಟುವುದು, ಆರೋಗ್ಯಕರ ಸ್ಪರ್ಧೆಯನ್ನು ಉತ್ತೇಜಿಸುವುದು ಮತ್ತು ಸುಸ್ಥಿರಗೊಳಿಸುವುದು ಹಾಗೂ ಗ್ರಾಹಕರ ಹಿತಾಸಕ್ತಿಯನ್ನು ರಕ್ಷಿಸುವುದು ಸಿ.ಸಿ.ಐ.ನ ಕರ್ತವ್ಯಗಳಲ್ಲಿ ಸೇರಿವೆ. ಮಾರುಕಟ್ಟೆ ಶಕ್ತಿ ಮತ್ತು ಪ್ರಾಬಲ್ಯದ ದುರುಪಯೋಗದ ಮೇಲೆ ನಿಗಾ ಇಡುವುದು, ನ್ಯಾಯಸಮ್ಮತ ವ್ಯವಹಾರವನ್ನು ಉತ್ತೇಜಿಸುವುದು, ಮತ್ತು ಪಟ್ಟಭದ್ರ ಹಿತಾಸಕ್ತಿಗಳನ್ನು ಹಾಗೂ ಗ್ರಾಹಕರಿಗೆ ಮತ್ತು ಪ್ರಾಮಾಣಿಕ ವ್ಯಾಪಾರಗಳಿಗೆ ತೊಂದರೆ ಉಂಟು ಮಾಡುವಸಂಚಿನ ವ್ಯವಹಾರಗಳನ್ನು ತಡೆಯುವುದರ ಬಗ್ಗೆಯೇ ಈ ಕಾನೂನು ಗಮನ ಕೇಂದ್ರೀಕರಿಸಿದೆ.

ತೀವ್ರತರ ಸ್ಪರ್ಧೆಯ ವ್ಯವಸ್ಥೆಯು ವ್ಯಾಪಾರಗಳ ಬೆಳವಣಿಗೆಯನ್ನು ಬೆಂಬಲಿಸುತ್ತದೆ, ಉತ್ಪಾದಕತೆಯನ್ನು ಹೆಚ್ಚಿಸುತ್ತದೆ, ಮತ್ತು ದೇಸಿ ಕೈಗಾರಿಕೆಗಳ ಅಂತಾರಾಷ್ಟ್ರೀಯ ಸ್ಪರ್ಧಾತ್ಮಕತೆಯನ್ನು ವೃದ್ಧಿಸುತ್ತದೆ. ವಿಲೀನಗಳನ್ನು ಮತ್ತು ಸ್ವಾಧೀನತೆಗಳನ್ನು ನಿಯಂತ್ರಿಸುವಲ್ಲಿ ಮತ್ತು ಅವುಗಳಿಂದ ಸ್ಪರ್ಧೆಯ ಮೇಲೆ ಹಾಗೂ

* ಅಧ್ಯಕ್ಷರು, ಭಾರತೀಯ ಸ್ಪರ್ಧಾ ಆಯೋಗ (ಸಿ.ಸಿ.ಐ.) ಹೊಸದಿಲ್ಲಿ ಇಮೇಲ್: cci-chairman@nic.in




ಗ್ರಾಹಕರ ಮೇಲೆ ಯಾವುದೇ ರೀತಿಯ ಋಣಾತ್ಮಕ ಪರಿಣಾಮಗಳು ಉಂಟಾಗದಂತೆ ನೋಡಿಕೊಳ್ಳಲು ನೆರವಾಗುತ್ತದೆ.

ಸ್ಪರ್ಧಾ ಕಾನೂನು ಮತ್ತು ಗ್ರಾಹಕ ಕಾನೂನುಗಳು ಸಮಸ್ಯೆಯನ್ನು ವಿಭಿನ್ನ ದೃಷ್ಟಿಕೋನದಿಂದ ನೋಡುತ್ತವೆಯಾದರೂ, ಅವು ಎರಡೂ ಗ್ರಾಹಕರ ಕ್ಷೇಮವನ್ನು ಖಚಿತಪಡಿಸುತ್ತವೆ. ಬೆಲೆ ಏರಿಕೆ, ಕಡಿತಗೊಳಿಸಿದ ಉತ್ಪನ್ನ ಆಯ್ಕೆಗಳು, ಮತ್ತು ಪ್ರಯೋಗಶೀಲತೆಯನ್ನು ಹತ್ತಿಕ್ಕುವಂಥ ಗ್ರಾಹಕ-ವಿರೋಧಿ ಹಾಗೂ ಅನಾರೋಗ್ಯಕರ ಸ್ಪರ್ಧೆಯ ನಡೆಗಳನ್ನು ಪತ್ತೆ ಮಾಡುವ ಮತ್ತು ಅವುಗಳಿಗೆ ದಂಡ ವಿಧಿಸುವ ದಿಸೆಯಲ್ಲಿ ಈ ಕಾನೂನಿನ ಜಾರಿ ಪ್ರಮುಖ ಪಾತ್ರ ವಹಿಸುತ್ತದೆ.

ಸಿ.ಸಿ.ಐ. ಪ್ರತಿಪಾದಿಸುವ ಕ್ರಮಗಳು ಮತ್ತು ನೀತಿ ಶಿಫಾರಸುಗಳು ಸ್ಪರ್ಧಾ-ಪರ ನೀತಿಗಳನ್ನು ಮತ್ತಷ್ಟು ಉತ್ತೇಜಿಸುತ್ತವೆ ಮತ್ತು ಗ್ರಾಹಕರ ಹಿತಾಸಕ್ತಿಯನ್ನು ರಕ್ಷಿಸುತ್ತವೆ. ಸ್ಪರ್ಧಾತ್ಮಕ ಮಾರುಕಟ್ಟೆ ಸ್ಥಳವನ್ನು ಕಾಪಾಡುವುದರ ಮೂಲಕ ಈ ಕಾನೂನು, ವ್ಯಾಪಾರಗಳಿಗೆ ಮತ್ತು ಗ್ರಾಹಕರಿಗೆ ಇಬ್ಬರಿಗೂ ಪ್ರಯೋಜನಕಾರಿಯಾಗಿದ್ದು, ಭಾರತೀಯ ಅರ್ಥವ್ಯವಸ್ಥೆಯಲ್ಲಿ ದಕ್ಷತೆ, ಪ್ರಯೋಗಶೀಲತೆ, ಮತ್ತು ಬೆಳವಣಿಗೆಯನ್ನು ವೃದ್ಧಿಸುತ್ತದೆ.

ಸ್ಪರ್ಧಾ ನಿಯಂತ್ರಣವು ಮಾರುಕಟ್ಟೆಯ ಅಡಚಣೆ-ಗಳನ್ನು ನಿವಾರಿಸಿ, ಪ್ರಬಲ ಮಾರುಕಟ್ಟೆಯ ಶಕ್ತಿಗಳಿಂದ ಗ್ರಾಹಕರನ್ನು ರಕ್ಷಿಸುವುದರ ಜೊತೆಗೆ ವ್ಯಾಪಾರಗಳು ಬೆಳೆಯಲು ಪ್ರೋತ್ಸಾಹ ಮತ್ತು ಸ್ವಾತಂತ್ರ್ಯವನ್ನು ಒದಗಿಸುವುದರ ಮೂಲಕ ಆರ್ಥಿಕ ಅಭಿವೃದ್ಧಿಯನ್ನು ಪೋಷಿಸುತ್ತದೆ.

**ಮಾರುಕಟ್ಟೆ ಮತ್ತು ಅದರ ಸಾಧನಗಳಲ್ಲಿ ಸಿ.ಸಿ.ಐ.ನ ಪಾತ್ರ**

ಸ್ಪರ್ಧಾ ಕಾಯಿದೆ-2002ರಿಂದ ಜನ್ಮ ತಳೆದಿರುವ ಸಿ.ಸಿ.ಐ., 2003ರಲ್ಲಿ ಜಾರಿಯಾದಂದಿನಿಂದ ಭಾರತೀಯ ಆರ್ಥಿಕತೆಯಲ್ಲಿ ಆರೋಗ್ಯಕರ ಸ್ಪರ್ಧೆಯ ಪೂರಕ ವಾತಾವರಣ ನಿರ್ಮಿಸಲು ಶ್ರಮಿಸಿದೆ. ಕಾಯಿದೆಯ ಪ್ರಸ್ತಾವನೆಯಲ್ಲಿ ಅಳವಡಿಸಲಾಗಿರುವ ಮೂಲ ತತ್ವಗಳಿಗೆ ಸಿ.ಸಿ.ಐ. ಬದ್ಧವಾಗಿಯೇ ಉಳಿದಿದೆ. ಭಾರತೀಯ ಮಾರುಕಟ್ಟೆಗಳಲ್ಲಿ ಸ್ಪರ್ಧಾ ಪರಿಸ್ಥಿತಿಗಳ ಮೇಲೆ ಕಾವಲು ಇರಿಸಿರುವ ಒಂದು ತಜ್ಞ ಸಂಸ್ಥೆಯಾಗಿದೆ. ಸ್ಪರ್ಧೆಗೆ ತೊಂದರೆ ಉಂಟು ಮಾಡುವ ಪ್ರಯತ್ನಗಳನ್ನು ತಡೆಗಟ್ಟುವುದು, ಸ್ಪರ್ಧೆಯನ್ನು ಉತ್ತೇಜಿಸುವುದು ಮತ್ತು ಸುಸ್ಥಿರಗೊಳಿಸುವುದು, ಎಲ್ಲ ಪಾಲುದಾರರಿಗೆ ವ್ಯಾಪಾರದ ಸ್ವಾತಂತ್ರ್ಯ ಸಿಗುವಂತೆ ನೋಡಿಕೊಳ್ಳುವುದು, ಮತ್ತು ಗ್ರಾಹಕ ಹಿತಾಸಕ್ತಿ ಕಾಪಾಡುವುದು ಇವೇ ಮುಂತಾದವು ಸಿ.ಸಿ.ಐ.ನ ಕರ್ತವ್ಯಗಳಾಗಿವೆ. ಸ್ಪರ್ಧಾ ಕಾಯಿದೆಯ ಸಾಧನವಾಗಿ ಕೆಲಸ ಮಾಡುತ್ತಿರುವ ಸಿ.ಸಿ.ಐ., ಮಾರುಕಟ್ಟೆಗಳನ್ನು ನಿಯಂತ್ರಿಸುವುದಷ್ಟೇ ಅಲ್ಲದೆ ವ್ಯಾಪಾರಗಳಿಗೆ ನ್ಯಾಯಸಮ್ಮತ ಸ್ಪರ್ಧೆ ಮತ್ತು ಸಮಾನ ಅವಕಾಶಗಳು ಒದಗುವಂತೆ ನೋಡಿಕೊಳ್ಳುತ್ತಿದೆ. ಏಕಸ್ವಾಮ್ಯ ಮತ್ತು ನಿರ್ಬಂಧಿತ ವ್ಯಾಪಾರ ಅಭ್ಯಾಸಗಳ ಕಾಯಿದೆ-1969ಕ್ಕಿಂತ ಭಿನ್ನವಾಗಿರುವ ಈ ಆಧುನಿಕ ಸ್ಪರ್ಧಾ ಕಾಯಿದೆ-2002, ಭಾರತದಲ್ಲಿ ಸ್ಪರ್ಧೆಗೆ ತೊಂದರೆ ಉಂಟು ಮಾಡುವ ಮಾರುಕಟ್ಟೆಯ ಪ್ರಾಬಲ್ಯವನ್ನು ದುರುಪಯೋಗಪಡಿಸಿಕೊಳ್ಳುವ ಶಕ್ತಿಗಳ ಮೇಲೆ ಸದಾಕಾಲ ಗಮನ ಹರಿಸುತ್ತದೆ. ಸ್ಪರ್ಧಾ ಪ್ರಕ್ರಿಯೆಯನ್ನು ಸಂರಕ್ಷಿಸುವುದು ಹಾಗೂ ಪ್ರಬಲ ಉದ್ಯಮಗಳಿಂದ ಉಂಟಾಗುವ ಶೋಷಣೆಯನ್ನು ನಿರ್ಬಂಧಿಸಿ, ವ್ಯಾಪಾರ ಸ್ವಾತಂತ್ರ್ಯವನ್ನು ಖಚಿತಪಡಿಸುವುದು ಸಿ.ಸಿ.ಐ.ನ ಹೊಣೆಗಾರಿಕೆ ಆಗಿದೆ. ಸ್ಪರ್ಧಾ ಕಾನೂನುಗಳನ್ನು ಜಾರಿಗೊಳಿಸಲು, ನ್ಯಾಯಸಮ್ಮತ ಸ್ಪರ್ಧೆಯನ್ನು ಉತ್ತೇಜಿಸಲು, ಮತ್ತು ಗ್ರಾಹಕರ ಹಿತಾಸಕ್ತಿ ರಕ್ಷಿಸಲು ಸಿ.ಸಿ.ಐ. ನಾನಾ ಸಾಧನಗಳನ್ನು ಮತ್ತು ತಂತ್ರಗಳನ್ನು ಬಳಸುತ್ತದೆ. ಕೆಲವು ಪ್ರಮುಖ ಸಾಧನಗಳು ಈ ಮುಂದಿನಂತಿವೆ:

**ಪ್ರತಿಪಾದನೆ** : ವ್ಯಾಪಾರಗಳಲ್ಲಿ, ಗ್ರಾಹಕರಲ್ಲಿ, ಮತ್ತು ನೀತಿ ನಿರೂಪಕರಲ್ಲಿ ಸ್ಪರ್ಧೆಯ ತತ್ವಗಳನ್ನು ಉತ್ತೇಜಿಸಲು ಶೈಕ್ಷಣಿಕ ಹಾಗೂ ಜಾಗೃತಿ ಆಂದೋಲನಗಳನ್ನು ಕೈಗೊಳ್ಳುವುದು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಂಸ್ಥೆಗಳಿಗೆ ನೀತಿ ನಿರೂಪಣೆಯ ಶಿಫಾರಸು ಕಳಿಸುವುದು ಕೂಡ ಈ ಪ್ರತಿಪಾದನೆಯ ಪ್ರಯತ್ನಗಳಲ್ಲಿ ಒಂದಾಗಿದೆ. ಎಲ್ಲ ಪಾಲುದಾರರಿಗೆ ಉಪಯುಕ್ತವಾಗುವ ಪ್ರತಿಪಾದನೆಯ ಸಾಮಗ್ರಿಯನ್ನೂ ಸಿ.ಸಿ.ಐ. ಪ್ರಕಟಿಸುತ್ತದೆ. ಈ ಮುದ್ರಣ ಸಾಮಗ್ರಿಯು ವಿವರಣಾತ್ಮಕವಾಗಿದ್ದು, ಅರ್ಥ ಮಾಡಿಕೊಳ್ಳಲು ಸರಳವಾದ ಭಾಷೆಯಲ್ಲಿ ಇದೆ. ಈ ಪ್ರತಿಪಾದನಾ ಕೈಪಿಡಿಯು ಇಂಗ್ಲೀಷ್, ಹಿಂದಿ ಸೇರಿದಂತೆ 13 ಭಾಷೆಗಳಲ್ಲಿ ಪ್ರಕಟವಾಗಿದೆ. ಖರೀದಿ ಪ್ರಕ್ರಿಯೆಯ ಅಧಿಕಾರಿಗಳಲ್ಲಿ ಈ ಪ್ರತಿಪಾದನೆ ಮಾಡುವುದರಿಂದ ಸ್ಪರ್ಧಾತ್ಮಕ ಟೆಂಡರ್ ಪ್ರಕ್ರಿಯೆಗಳಿಗೆ ಒತ್ತು ನೀಡಿದಂತಾಗುತ್ತದೆ ಅಲ್ಲದೇ ಖರೀದಿದಾರರಿಗೆ ಹಣಕ್ಕೆ ತಕ್ಕ ಮೌಲ್ಯವನ್ನು ವೃದ್ಧಿಸಿದಂತಾಗುತ್ತದೆ. ಉದ್ಯಮಗಳಿಗೆ ಸ್ಪರ್ಧಾ ಪೂರಕ ಕಾರ್ಯಕ್ರಮಗಳಿಗೆ ವಿಶೇಷ ಒತ್ತು ನೀಡುವುದರಿಂದ ಸ್ಪರ್ಧಾ ಜಾರಿಗೆಯ ಖರ್ಚನ್ನು ಕಡಿಮೆ ಮಾಡಬಹುದು ಮತ್ತು ಸ್ಪರ್ಧಾ ಪೂರಕ ವ್ಯಾಪಾರಗಳನ್ನು ಹೆಚ್ಚಿಸಬಹುದು.

**ಸ್ಪರ್ಧಾ-ನಿಗ್ರಹ ಒಪ್ಪಂದಗಳ ಪತ್ತೆ** : ಕೂಟಗಳನ್ನು ರಚಿಸಿಕೊಳ್ಳುವುದು, ಬೆಲೆ-ನಿಗದಿ, ಹರಾಜು ಹೊಂದಾಣಿಕೆ, ಮಾರುಕಟ್ಟೆ ಹಂಚಿಕೆ ಯೋಜನೆಗಳು, ಮರುಮಾರಾಟ ಬೆಲೆ ನಿರ್ವಹಣೆ ಇವೇ ಮುಂತಾದ ಸ್ಪರ್ಧಾ





Scanned with ACE Scanner

ಕಾಯಿದೆ-2002ರ ಉಲ್ಲಂಘನೆಗಳನ್ನು ಒಳಗೊಳ್ಳುವ, ಸ್ಪರ್ಧಿಗಳ ನಡುವೆ ನಡೆಯುವ ಒಪ್ಪಂದಗಳ ಮೇಲೆ ನಿಗಾ ಇಡುವುದು ಮತ್ತು ತನಿಖೆ ನಡೆಸುವುದು. ಕೂಟ ರಚನೆ ಮತ್ತು ಹರಾಜು ಹೊಂದಾಣಿಕೆಯಂಥ ತಂತ್ರಗಳು ಗ್ರಾಹಕರಿಗಷ್ಟೇ ಅಲ್ಲ, ವ್ಯಾಪಾರಗಳ ಮೇಲೆಯೂ ಆಯ್ಕೆಯ ಭ್ರಮೆಯನ್ನು ಸೃಷ್ಟಿಸುವುದು, ಆ ಮೂಲಕ ವ್ಯಾಪಾರಗಳ ಚೌಕಾಶಿ ಶಕ್ತಿಯನ್ನು ಕುಂದಿಸಿ, ಅವುಗಳ ಉಸಿರುಗಟ್ಟುವಂತೆ ಮಾಡುವ ನಕಾರಾತ್ಮಕ ಪರಿಣಾಮ ಉಂಟು ಮಾಡುತ್ತವೆ.

**ಪ್ರಾಬಲ್ಯ ಮೌಲ್ಯಮಾಪನದ ದುರುಪಯೋಗ :** ಪ್ರಬಲ ಕಂಪನಿಗಳ/ಸಂಸ್ಥೆಗಳು ತಮ್ಮ ಸ್ಪರ್ಧಿಗಳಿಗೆ ಅಥವಾ ಹೊಸ ಸ್ಪರ್ಧಿಗಳಿಗೆ ತೊಂದರೆ ಮಾಡಲು ಮಾರುಕಟ್ಟೆಯನ್ನು ಹಾಳು ಮಾಡದಂತೆ ಅವುಗಳ ವರ್ತನೆಯನ್ನು ಪರಿಶೀಲಿಸವುದು.

**ಡಿಜಿಟಲ್ ಸಾಧನಗಳು ಮಾತು ಡೇಟಾ ವಿಶ್ಲೇಷಣೆ:** ಸಿ.ಸಿ.ಐ., ಡೇಟಾ ಸೆಟ್‌ಗಳನ್ನು ಸಂಸ್ಕರಿಸಲು, ಸಂಭವನೀಯ ಉಲ್ಲಂಘನೆಗಳನ್ನು ಗುರುತಿಸಲು, ಮತ್ತು ಸಾಕ್ಷ್ಯಾಧರಿತ ನಿರ್ಧಾರ ಕೈಗೊಳ್ಳುವುದನ್ನು ಬೆಂಬಲಿಸಲು ಅತ್ಯಾಧುನಿಕ ಡಿಜಿಟಲ್ ಸಾಧನಗಳನ್ನು ಮತ್ತು ಡೇಟಾ ವಿಶ್ಲೇಷಣೆಗಳನ್ನು ಕೂಡ ಬಳಸುತ್ತಿದೆ.

**ದಂಡಗಳು ಮತ್ತು ಶಿಕ್ಷೆಗಳು:** ಸ್ಪರ್ಧಾ ಕಾನೂನುಗಳನ್ನು ಉಲ್ಲಂಘಿಸಿ, ತಪ್ಪಿತಸ್ಥರೆಂದು ಕಂಡುಬರುವ ಉದ್ಯಮಗಳಿಗೆ ದಂಡ ವಿಧಿಸುವುದರಿಂದ ಉಲ್ಲಂಘನೆಗಳನ್ನು ತಡೆಗಟ್ಟಬಹುದು ಮತ್ತು ಅನುಸರಣೆಯನ್ನು ಹೆಚ್ಚಿಸಬಹುದು. ಪ್ರಾಬಲ್ಯದ ಸ್ಥಿತಿಯ ದುರುಪಯೋಗ ಕಂಡುಬಂದರೆ ಸಿ.ಸಿ.ಐ., ಹಿಂದಿನ ಮೂರು ಹಣಕಾಸು ವರ್ಷಗಳ ವಹಿವಾಟಿನ ಶೇ. 10ರವರೆಗಿನ ಮೊತ್ತದಷ್ಟು ದಂಡ ವಿಧಿಸಬಹುದು.

ಕೂಟದ ಸಂಚುಗಳಿಗೆ ಸಿ.ಸಿ.ಐ., ಲಾಭದ ಮೂರು ಪಟ್ಟು ಅಥವಾ ಒಪ್ಪಂದ ಜಾರಿಯಲ್ಲಿದ್ದ ಪ್ರತಿ ವರ್ಷದ ವಹಿವಾಟಿನ ಶೇ. 10, ಯಾವುದು ಗರಿಷ್ಠವೋ ಆ ಮೊತ್ತವನ್ನು ವಿಧಿಸಬಹುದು. ಸಿ.ಸಿ.ಐ.ನಿಂದ ಉದ್ಯಮದ ಅಧಿಕಾರಿಗಳು ಕೂಡ ದಂಡನೆಗೆ ಒಳಗಾಗಬಹುದು. ಸಂಬಂಧಪಟ್ಟ ಅಧಿಕಾರಿಯ ಮೂರು ಹಣಕಾಸು ವರ್ಷಗಳ ಆದಾಯದ (ಭಾರತದ ತೆರಿಗೆ ಪ್ರಾಧಿಕಾರಗಳಿಗೆ ಸಲ್ಲಿಸಲಾದ ಆದಾಯ ತೆರಿಗೆ ದಾಖಲೆಗಳಲ್ಲಿ ಇರುವಂತೆ) ಆದಾಯ ಶೇ. 10ರವರೆಗಿನ ದಂಡವನ್ನು ಸಿ.ಸಿ.ಐ. ವಿಧಿಸಬಹುದು.

**ಅಂತಾರಾಷ್ಟ್ರೀಯ ಸಹಕಾರ :** ಗಡಿಯಾಚೆಗಿನ ಸ್ಪರ್ಧೆಯ ವಿಷಯಗಳನ್ನು ನಿಭಾಯಿಸಲು ಮತ್ತು ಅಂತಾರಾಷ್ಟ್ರೀಯ ಅತ್ಯುತ್ತಮ ಅಭ್ಯಾಸಗಳನ್ನು ಅಳವಡಿಸಿಕೊಳ್ಳಲು ಇತರ ಸ್ಪರ್ಧಾ ಪ್ರಾಧಿಕಾರಗಳು ಮತ್ತು ನಿಯಂತ್ರಣಾ ಸಂಸ್ಥೆಗಳ ಜೊತೆ ಸಹಕಾರ ಸಾಧಿಸುವುದು. ಅಂತಾರಾಷ್ಟ್ರೀಯ ಸಹಕಾರ ಸಾಧಿಸಲು ಇತರ ದೇಶಗಳ ಸ್ಪರ್ಧಾ ಸಂಸ್ಥೆಗಳೊಂದಿಗೆ ಸಿ.ಸಿ.ಐ. ಒಡಂಬಡಿಕೆ ಮಾಡಿಕೊಳ್ಳುತ್ತದೆ.

**ಮಾರುಕಟ್ಟೆ ಅಧ್ಯಯನಗಳು :** ಸಂಭಾವ್ಯ ಸ್ಪರ್ಧಾ ಸವಾಲುಗಳನ್ನು ಗುರುತಿಸಲು, ಮಾರುಕಟ್ಟೆ ಚಟುವಟಿಕೆಗಳನ್ನು ಅರಿತುಕೊಳ್ಳಲು, ಪ್ರವೇಶಕ್ಕೆ ಇರುವ ಅಡೆ-ತಡೆಗಳು, ಸ್ಪರ್ಧಾ-ನಿಗ್ರಹ ನಡೆವಳಿಕೆಗಳನ್ನು ತಿಳಿದುಕೊಳ್ಳಲು ಆಳವಾದ ಮಾರುಕಟ್ಟೆ ಅಧ್ಯಯನ ಕೈಗೊಳ್ಳುವುದು. ಅಧ್ಯಯನ ವರದಿಗಳು ಮಾರುಕಟ್ಟೆ ತಿದ್ದುಪಡಿಗೆ ಬೇಕಾಗುವ ಸಂಭಾವ್ಯ ಅವಕಾಶಗಳನ್ನು ಗುರುತಿಸಲು ನೆರವಾಗುತ್ತವೆ. ಸಾಕ್ಷ್ಯಾಧರಿತ ನೀತಿಗಳನ್ನು ರೂಪಿಸಲು ಅನುಕೂಲವಾಗುತ್ತವೆ.

**ವಿಲೀನ ನಿಯಂತ್ರಣ :** ವಿಲೀನ, ಸ್ವಾಧೀನ, ಮತ್ತು ಒಂದಾಗುವಿಕೆಗಳಿಂದ ಸ್ಪರ್ಧೆಯ ಮೇಲೆ ಉಂಟಾಗುವ ಪರಿಣಾಮವನ್ನು ಅವಲೋಕಿಸುವುದು.


G20
75 Azadi Ka Amrit Mahotsav
Fair Competition for Greater Good

## ಮಾಹಿತಿ ಸಲ್ಲಿಸಲು ಶುಲ್ಕ ಎಷ್ಟು?

ಆಯೋಗಕ್ಕೆ ಸಲ್ಲಿಸುವ ಮಾಹಿತಿಯ ಜೊತೆಗೆ ಈ ಕೆಳಗಿನಂತೆ ಶುಲ್ಕ ಪಾವತಿಸಿದ ದಾಖಲೆ ಲಗತ್ತಿಸಬೇಕು.

**ರೂ. 5,000** (ಐದು ಸಾವಿರ ರೂಪಾಯಿ) ವ್ಯಕ್ತಿಯಾಗಿದ್ದಲ್ಲಿ ಅಥವಾ ಹೆಚ್.ಯು.ಎಫ್.

**ರೂ. 10,000** (ಹತ್ತು ಸಾವಿರ ರೂಪಾಯಿ) ಸರ್ಕಾರೇತರ ಸಂಸ್ಥೆ, ಗ್ರಾಹಕ ಸಂಘ, ಸಹಕಾರಿ ಸಂಸ್ಥೆ ಅಥವಾ ಟ್ರಸ್ಟ್ ಆಗಿದ್ದಲ್ಲಿ.

**ರೂ. 40,000** (ನಲವತ್ತು ಸಾವಿರ ರೂಪಾಯಿ) ಹಿಂದಿನ ವರ್ಷದಲ್ಲಿ ರೂಪಾಯಿ ಎರಡು ಕೋಟಿವರೆಗೆ ವಹಿವಾಟು ಹೊಂದಿರುವ ಸಂಸ್ಥೆ ಅಥವಾ ಕಂಪನಿ ಆಗಿದ್ದಲ್ಲಿ.

**ರೂ. 1,00,000** (ಒಂದು ಲಕ್ಷ ರೂಪಾಯಿ) ಹಿಂದಿನ ವರ್ಷದಲ್ಲಿ ಎರಡು ಕೋಟಿ ರೂಪಾಯಿಗಿಂತ ಹೆಚ್ಚು 50 ಕೋಟಿ ರೂಪಾಯಿವರೆಗೆ ವಹಿವಾಟು ಹೊಂದಿರುವ ಸಂಸ್ಥೆ ಅಥವಾ ಕಂಪನಿ ಆಗಿದ್ದಲ್ಲಿ.

**ರೂ. 5,00,000** (ಐದು ಲಕ್ಷ ರೂಪಾಯಿ) ಮೇಲೆ ಹೇಳಿದ ಪ್ರಕರಣಗಳನ್ನು ಹೊರತುಪಡಿಸಿ.


ನಿಮ್ಮಸ್ಪರ್ಧಾಕಾನೂನನ್ನುತಿಳಿದುಕೊಳ್ಳಿ


CCI_India competitioncommissionofindia @competitioncommissionofindia

This is informative in nature. Viewers are advised to seek legal advice wherever necessary. visit www.cci.gov.in




Scanned with ACE Scanner





ಉದ್ದೇಶಿತ ವ್ಯವಹಾರಗಳು ಗ್ರಾಹಕ ಹಿತಾಸಕ್ತಿಗೆ ಚ್ಯುತಿ ಉಂಟು ಮಾಡುವ ಮತ್ತು ಸ್ಪರ್ಧೆಯ ಮೇಲೆ ಉಂಟುಮಾಡಬಹುದಾದ ಗಮನಾರ್ಹ ಪ್ರತಿಕೂಲ ಪರಿಣಾಮದ ಬಗ್ಗೆ ಸಿ.ಸಿ.ಐ. ಮೌಲ್ಯಮಾಪನ ಮಾಡುತ್ತದೆ. ವಿಲೀನಗಳು, ಸ್ವಾಧೀನಗಳು, ಮತ್ತು ಒಂದಾಗುವಿಕೆಗಳನ್ನು ತ್ವರಿತವಾಗಿ ಮತ್ತು ನಿರ್ಣಾಯಕವಾಗಿ ಪರಿಶೀಲನೆ ಮಾಡುತ್ತದೆ. ಗ್ರೀನ್ ಚಾನೆಲ್ ನಂಥ ಸೌಲಭ್ಯಗಳು ವ್ಯಾಪಾರವನ್ನು ಸರಳಗೊಳಿಸಿ, ಪಾಲುದಾರರಲ್ಲಿ ಪರಸ್ಪರ ವಿಶ್ವಾಸ ಬೆಳೆಸುತ್ತದೆ.

**ಉದಾರತೆಯ ಕಾರ್ಯಕ್ರಮ** : ಸ್ಪರ್ಧಾ-ವಿರೋಧಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಪಕ್ಷಗಾರರಿಗೆ ತಮ್ಮ ಒಳಗೊಳ್ಳುವಿಕೆಯ ಮಾಹಿತಿಯನ್ನು ಒದಗಿಸಲು ಮುಂದಾಗುವಂತೆ ಅವರಿಗೆ ಪ್ರೋತ್ಸಾಹಕರ ಕೊಡುಗೆಗಳನ್ನು ನೀಡುವುದು. ಸಹಕಾರಕ್ಕಾಗಿ ದಂಡದ ಪ್ರಮಾಣವನ್ನು ಕಡಿಮೆ ಮಾಡುವುದು.

**ಪರಿಹಾರಗಳು** : ಅವಶ್ಯಕತೆ ಇರುವ ಕಂಪನಿಗಳು ತಿದ್ದಿಕೊಳ್ಳುವ ಕ್ರಮಗಳನ್ನು ಕೈಗೊಳ್ಳುವುದು, ಸೊತ್ತು ವಾಪಾಸ್ ಪಡೆಯುವುದು, ಅಥವಾ ಸಿ.ಸಿ.ಐ. ಗುರುತಿಸಿರುವ ಸ್ಪರ್ಧಾ ಸಂಬಂಧಿ ಆತಂಕಗಳನ್ನು ನಿವಾರಿಸಲು ಸಂರಚನೆಯಲ್ಲಿಯೇ ಬದಲಾವಣೆ ತರುವುದು.

ಈ ಸಾಧನೆಗಳು ಮತ್ತು ತಂತ್ರಗಳು ಸ್ಪರ್ಧಾತ್ಮಕ ಮಾರುಕಟ್ಟೆಗಳು, ಸ್ಪರ್ಧಾ-ವಿರೋಧಿ ಚಟುವಟಿಕೆಗಳಿಂದ ಗ್ರಾಹಕರನ್ನು ಕಾಪಾಡಲು, ಮತ್ತು ಆರ್ಥಿಕ ಬೆಳವಣಿಗೆ ಹಾಗೂ ಪ್ರಯೋಗಶೀಲತೆಯನ್ನು ಪೋಷಿಸಲು ಸಿ.ಸಿ.ಐ.ಗೆ ನೆರವಾಗುತ್ತವೆ.

### ಸ್ಪರ್ಧೆ ಮತ್ತು ಗ್ರಾಹಕ ರಕ್ಷಣೆ ಮಧ್ಯೆ ಸಂಬಂಧ

ಕಾನೂನು ಕಾಯಿದೆಯು ಗ್ರಾಹಕ ಹಕ್ಕುಗಳಿಗೆ ನೇರವಾಗಿ ಸಂಬಂಧ ಪಡದಿದ್ದರೂ, ಮಾರುಕಟ್ಟೆಯನ್ನು ಸ್ಪರ್ಧಾ-ನಿಗ್ರಹ ಶಕ್ತಿಗಳಿಂದ ಮತ್ತು ಪ್ರಾಬಲ್ಯದ ದುರುಪಯೋಗದಿಂದ ಮುಕ್ತಗೊಳಿಸುವುದರ ಮೂಲಕ ಗ್ರಾಹಕರ ಹಿತಾಸಕ್ತಿಗೆ ಆದ್ಯತೆ ನೀಡುತ್ತದೆ.ಸ್ಪರ್ಧಾ ಕಾನೂನು ಮತ್ತು ಗ್ರಾಹಕ ಕಾನೂನುಗಳು ಸಮಸ್ಯೆಯನ್ನು ವಿಭಿನ್ನ ದೃಷ್ಟಿಕೋನದಿಂದ ನೋಡುತ್ತವೆಯಾದರೂ, ಅವು ಎರಡೂ ಗ್ರಾಹಕರ ಕ್ಷೇಮವನ್ನು ಖಚಿತಪಡಿಸುತ್ತವೆ.ಸ್ಪರ್ಧೆ ಮತ್ತು ಗ್ರಾಹಕ ನೀತಿಗಳು ಮಾರುಕಟ್ಟೆಯ ವೈಫಲ್ಯಗಳನ್ನು ಸರಿ ಮಾಡಿ, ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡುತ್ತವೆ; ಗ್ರಾಹಕ-ಕೇಂದ್ರಿತ ಕಾನೂನುಗಳು ಬೇಡಿಕೆ ಪರ ಗಮನ ಹರಿಸಿದರೆ ಮತ್ತು ಹಕ್ಕುಗಳಿಗಾಗಿ ಪ್ರತಿಪಾದಿಸಿದರೆ, ಸ್ಪರ್ಧಾ ಕಾನೂನುಗಳು ಪೂರೈಕೆ ಪರ ಒತ್ತು ನೀಡಿ, ಗ್ರಾಹಕರಿಗೆ ವೈವಿಧ್ಯಮಯ ಆಯ್ಕೆಗಳನ್ನು ನೀಡುತ್ತವೆ ಮತ್ತು ಕೈಗೆಟುಕುವ ದರಗಳನ್ನು ಒದಗಿಸುತ್ತವೆ. ನ್ಯಾಯಸಮ್ಮತ ಸ್ಪರ್ಧೆಯು ಕಡಿಮೆ ದರದಲ್ಲಿ ಹತ್ತು ಹಲವಾರು ಉತ್ಪನ್ನಗಳು ಮತ್ತು ಸೇವೆಗಳನ್ನು ಒದಗಿಸುವುದರ ಮೂಲಕ ಗ್ರಾಹಕ ಕ್ಷೇಮದ ಹಿನ್ನೆಲೆಯಲ್ಲಿ ಮೂಲಭೂತ ಕಂಬವಾಗಿ ಕೆಲಸ ಮಾಡುತ್ತದೆ. ಸ್ಪರ್ಧಾ ಕಾನೂನು, ಪೂರೈಕೆಯ ದೃಷ್ಟಿಯಿಂದ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ಪರಿಸ್ಥಿತಿಗಳನ್ನು ಸುಸ್ಥಿರಗೊಳಿಸುವ ಮೂಲಕ ಗ್ರಾಹಕರಿಗೆ ಸಾಕಷ್ಟು ಆಯ್ಕೆಗಳು ಸಿಗುವಂತೆ ನೋಡಿಕೊಳ್ಳುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಎರಡೂ ಕಾನೂನುಗಳು ಗ್ರಾಹಕರ ಹಕ್ಕುಗಳನ್ನು



Scanned with ACE Scanner

ಸ್ಥಾಪಿಸುವಲ್ಲಿ, ಮತ್ತು ತಮ್ಮ ಕ್ರಮಗಳ ಮೂಲಕ ಪರಸ್ಪರಪೂರಕವಾಗಿರುತ್ತವೆ. ಇದರಿಂದ ಮಾರುಕಟ್ಟೆ ವ್ಯವಸ್ಥೆಯೇ ಸರಿ ದಾರಿಯಲ್ಲಿ ಇದ್ದು ಎಲ್ಲ ಪಾಲುದಾರರಿಗೆ ಪ್ರಯೋಜನಕಾರಿಯಾಗಿರುತ್ತವೆ.

ವಿಶ್ವಸಂಸ್ಥೆಯ ಮಾರ್ಗಸೂಚಿಗಳಿಗೆ ಅನುಸಾರವಾಗಿ ಗ್ರಾಹಕ ರಕ್ಷಣೆಗಾಗಿ ಕಡಿಮೆ ವೆಚ್ಚದಲ್ಲಿ ಗ್ರಾಹಕರಿಗೆ ಅತ್ಯುತ್ತಮವಾದ ಉತ್ಪನ್ನಗಳು ಮತ್ತು ಸೇವೆಗಳನ್ನು ಒದಗಿಸಲು ಪರಿಣಾಮಕಾರಿ ಸ್ಪರ್ಧೆಯು ಅನಿವಾರ್ಯವಾಗಿರುವುದರಿಂದ ನ್ಯಾಯಯುತ ಸ್ಪರ್ಧೆಯು ಗ್ರಾಹಕರ ಕಲ್ಯಾಣದ ಬಳಿ ಬೆಳೆಯುವ ಒಂದು ಮೂಲಭೂತ ಆಧಾರ ಸ್ತಂಭವಾಗಿದೆ ಎಂಬುದನ್ನು ಸ್ಪಷ್ಟಪಡಿಸಲು ಎರಡರ ನಡುವೆ ಸಂಪರ್ಕವನ್ನು ಸ್ಥಾಪಿಸಬಹುದು.

**ಸ್ಪರ್ಧೆ ಮತ್ತು ವ್ಯಾಪಾರದ ನಡುವೆ ಸಂಬಂಧ**

ವ್ಯಾಪಾರ ಮತ್ತು ಸ್ಪರ್ಧೆಯ ನಡುವಿನ ಸಂಬಂಧವು ಮಾರುಕಟ್ಟೆ ಆರ್ಥಿಕತೆಯ ಮೂಲಭೂತ ಅಂಶವಾಗಿದೆ. ವ್ಯಾಪಾರಗಳು ಒಂದು ರೂಪ ಪಡೆಯುವಲ್ಲಿ ಮತ್ತು ಪರಸ್ಪರ ಸಂವಾದಿಸುವ ದಿಸೆಯಲ್ಲಿ ಸ್ಪರ್ಧೆಯು ಪ್ರಮುಖ ಪಾತ್ರ ವಹಿಸುತ್ತದೆ. ವ್ಯಾಪಾರಗಳು ಸುಸ್ಥಿರವಾಗಿ ಬೆಳೆಯಲು, ಪ್ರಯೋಗಗಳಿಗೆ ಒಳಪಡಲು, ಮತ್ತು ಗ್ರಾಹಕರ ಅವಶ್ಯಕತೆಗಳನ್ನು ಪರಿಣಾಮಕಾರಿಯಾಗಿ ಪೂರೈಸಲು ಬೇಕಾಗುವ ವಾತಾವರಣವನ್ನು ಸ್ಪರ್ಧೆಯು ಸೃಷ್ಟಿಸುತ್ತದೆ. ವಾಸ್ತವದಲ್ಲಿ ಸರಿಯಾಗಿ ಜಾರಿಗೊಳಿಸಲಾದ ಸ್ಪರ್ಧಾ ವ್ಯವಸ್ಥೆಯು ಉದ್ಯಮಶೀಲ ಮಾರುಕಟ್ಟೆಗಳಿಗೆ ವೇಗ ನೀಡುತ್ತದೆ. ಭಾರತದ ಪ್ರಸ್ತುತ ಸ್ಟಾರ್ಟ್‌ಅಪ್ ಆರ್ಥಿಕತೆಯು, ಸಕ್ರಿಯ ಸ್ಪರ್ಧಾ ನಿಯಂತ್ರಣ ವ್ಯವಸ್ಥೆಯ ಲಾಭ ಪಡೆಯುತ್ತಿದೆ. ಇದು ವ್ಯಾಪಾರಗಳ ನಡುವಿನ ಸ್ಪರ್ಧೆಯು ಅರ್ಹತೆಯನ್ನು ಅವಲಂಬಿಸಿದೆ; ಉದ್ಯಮಶೀಲ ಶಕ್ತಿ ಮತ್ತು ಹೂಡಿಕೆಗಳು ಸ್ಪರ್ಧಾ-ವಿರೋಧಿ ತಡೆಗಳನ್ನು ನಿವಾರಿಸುವಲ್ಲಿ ಮತ್ತು ಬೆಸಗೊಂಡಿರುವ ವ್ಯವಹಾರದ ಕ್ಷೇತ್ರಗಳನ್ನು ಸಮಗೊಳಿಸಲು ವ್ಯರ್ಥವಾಗದಂತೆ ತಡೆಯುತ್ತವೆ. ಡಿಜಿಟಲೀಕರಣದ ಈ ಕಾಲದಲ್ಲಿಯೂ ಸಿ.ಸಿ.ಐ.ನ ಜಾರಿ ಮತ್ತು ಪ್ರತಿಪಾದನ ವ್ಯವಸ್ಥೆಯು ಡಿಜಿಟಲ್ ಕ್ಷೇತ್ರದ ಮಾರುಕಟ್ಟೆ ಫಲಿತಾಂಶಗಳು ಮಾರುಕಟ್ಟೆ ಶಕ್ತಿಗಳ ನ್ಯಾಯಯುತ ನಡೆಯಿಂದ ಬರುತ್ತವೆ, ಮತ್ತು ಸ್ವ-ಶಾಶ್ವತಗೊಳ್ಳುವಿಕೆಯಲ್ಲಿ ಸಿಕ್ಕು ಹಾಕಿಕೊಳ್ಳದಂತೆ, ವ್ಯಾಪಾರಗಳ ಒಂದು ಸಣ್ಣ ಕೂಟವು ಡಿಜಿಟಲ್ ಕ್ರಾಂತಿಯ ಗರಿಷ್ಠ ಸಾಮರ್ಥ್ಯದ ಮತ್ತು ಆರ್ಥಿಕ ಅವಕಾಶದ ಲಾಭ ಪಡೆಯಲು ರೂಪಿಸಲು ಸ್ಪರ್ಧಾ-ವಿರೋಧಿ ನೀತಿಗಳಲ್ಲಿ ಸಿಕ್ಕು ಹಾಕಿಕೊಳ್ಳದಂತೆ ಆದ್ಯತೆಗಳನ್ನು ರಚಿಸಿಕೊಳ್ಳುತ್ತದೆ.

ಸ್ಥಳೀಯ ಮಾರುಕಟ್ಟೆಗಳಲ್ಲಿ ಉತ್ತಮ ಸ್ಪರ್ಧೆಯಿಂದಾಗಿ ಉತ್ಪಾದಕತೆ ಮತ್ತು ಬೆಳವಣಿಗೆ ವೃದ್ಧಿಗೊಂಡು ದೇಸಿ ವ್ಯಾಪಾರಗಳ ಅಂತಾರಾಷ್ಟ್ರೀಯ ಸ್ಪರ್ಧಾತ್ಮಕತೆ ಹೆಚ್ಚುತ್ತದೆ. ಸ್ಪರ್ಧಾ-ವಿರೋಧಿ ನಿಷ್ಕ್ರಿಯತೆಯ ಭಾರದಿಂದ ವಿರೂಪಗೊಂಡ ಮಾರುಕಟ್ಟೆಯು ದೇಸಿ ಜಿ.ಡಿ.ಪಿ. ಬೆಳವಣಿಗೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆಯಲ್ಲದೇ ರಾಷ್ಟ್ರದ ಆರ್ಥಿಕತೆಗೇ ಅಪಾಯ ಒಡ್ಡಬಲ್ಲದು.

**ಉಪಸಂಹಾರ**

ಭಾರತದಲ್ಲಿ ಸ್ಪರ್ಧಾ ನಿಯಂತ್ರಣಕ್ಕೆ ದೊರೆತಿರುವ ಶಾಸನಾತ್ಮಕ ಚೌಕಟ್ಟು ಮತ್ತು ಸಿ.ಸಿ.ಐ.ಗೆ ಲಭ್ಯ ಇರುವ ಸಾಧನಗಳನ್ನು ಗಮನಿಸಿ ಈ ಮುಂದಿನ ತೀರ್ಮಾನಕ್ಕೆ ಬರಬಹುದು: ಸ್ಪರ್ಧೆಯು ಪ್ರಯೋಗಶೀಲತೆಯ, ದಕ್ಷತೆಯ, ಮತ್ತು ಬೆಳವಣಿಗೆಯ, ವೇಗವರ್ಧಕವಾಗಿ ಕಾರ್ಯ ನಿರ್ವಹಿಸುತ್ತ, ವ್ಯಾಪಾರಗಳು ಸತತವಾಗಿ ಪ್ರಗತಿ ಹೊಂದಲು ಮತ್ತು ಉತ್ತಮ ಉತ್ಪನ್ನಗಳು ಹಾಗೂ ಸೇವೆಗಳನ್ನು ಒದಗಿಸಲು ಗ್ರಾಹಕ ಹಿತಾಸಕ್ತಿಗಳನ್ನು ಪೋಷಿಸುತ್ತದೆ.


G20
Azadi Ka Amrit Mahotsav
Fair Competition for Greater Good

**ಗೌಪ್ಯತೆಯ ಚರ್ಚೆಗಳಲ್ಲಿ ಯಾವ ರೀತಿಯ ಮಾಹಿತಿಯನ್ನು ಹಂಚಿಕೊಳ್ಳಬಹುದು?**

* ಗೌಪ್ಯತೆಯ ಚರ್ಚೆಯನ್ನು ಆಯೋಜಿಸುವಾಗ ಆಯೋಗವು ನಿರ್ಧರಿಸುವ ಇಡೀ ಗೌಪ್ಯ ದಾಖಲೆಗಳನ್ನು ಅಥವಾ ಅವುಗಳ ಕೆಲವು ಭಾಗಗಳನ್ನು ಗೌಪ್ಯತೆಯ ಚರ್ಚೆಯಲ್ಲಿ ಮಂಡಿಸಬೇಕಾಗುತ್ತದೆ.

ಆದರೆ ಈ ಕೆಳಗಿನ ವರ್ಗಕ್ಕೆ ಸೇರಿದ ದಾಖಲೆಗಳು ಗೌಪ್ಯತೆಯ ಚರ್ಚೆಯ ಸದಸ್ಯರಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡುವ ದಾಖಲೆಗಳಲ್ಲ-

* ಶೋಧ ಮತ್ತು ಮುಟ್ಟುಗೋಲು ಕಾರ್ಯಾಚರಣೆ ಮೂಲಕ ಪಡೆದ ದಾಖಲೆಗಳು;
* ಇ-ಮೇಲ್ ರಾಶಿಗಳು;
* ಕರೆ ವಿವರ ದಾಖಲೆಗಳು; ಅಥವಾ
* ವೈಯಕ್ತಿಕ ಮಾಹಿತಿ ಮಾದರಿಯಲ್ಲಿ ಇರುವ ಇತರ ಯಾವುದೇ ದಾಖಲೆ/ಸಾಮಗ್ರಿ.

ನಿಮ್ಮ ಸ್ಪರ್ಧಾಕಾನೂನನ್ನು ತಿಳಿದುಕೊಳ್ಳಿ


CCI_India | competitioncommissionofindia | @competitioncommissionofindia
This is informative in nature. Viewers are advised to seek legal advice wherever necessary. visit www.cci.gov.in




Scanned with ACE Scanner

# ಸಂಸದೀಯ ಸಮಿತಿ; ಪಾತ್ರ-ವ್ಯಾಪ್ತಿ ಬಲವರ್ಧನೆ

* ಅಲಾಯ ಪುರೇವಾಲ್
** ಎಂ.ಆರ್. ಮಾಧವನ್



**ಸಂಸದೀಯ ಸಮಿತಿಗಳು ಸರ್ಕಾರದ ಕಾರ್ಯಗಳನ್ನು ಪರಿಶೀಲಿಸುವಲ್ಲಿ ಹಾಗೂ ಸಂಸತ್ತಿನಲ್ಲಿ ಮಂಡನೆಯಾಗುವ ಮಸೂದೆಗಳ ಗುಣಮಟ್ಟವನ್ನು ಉತ್ತಮಗೊಳಿಸುವ ಮೂಲಕ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತವೆ. ಸಂಸದೀಯ ಸಮಿತಿಗಳ ಪರಿಣಾಮಕಾರಿತ್ವವು ಸಂಸತ್ತಿನ ಸಮರ್ಪಕ ಕಾರ್ಯ ನಿರ್ವಹಣೆಗೆ ಮುಖ್ಯವಾಗಿರಲಿದೆ. ಸಮಿತಿಗಳು ಮಂಡಿಸಿದ ವರದಿಗಳು ಸಂಸತ್ತಿನಲ್ಲಿ ಮಾಹಿತಿಪೂರ್ಣ ಚರ್ಚೆಗೆ ದಾರಿಮಾಡಿಕೊಡುತ್ತವೆ. ಅಷ್ಟಲ್ಲದೆ, ಸಮಿತಿಗಳು ಪಕ್ಷಾತೀತವಾದ ಸಮ್ಮತಿಯನ್ನು ರೂಪಿಸಲು, ವಿಷಯದಲ್ಲಿ ಪರಿಣತಿಯನ್ನು ಅಭಿವೃದ್ಧಿಪಡಿಸಲು ಹಾಗೂ ಪರಿಣತರು ಮತ್ತು ಭಾಗೀದಾರರಿಂದ ಸಲಹೆ ಪಡೆದುಕೊಳ್ಳಲು ಅವಕಾಶ ಮಾಡಿಕೊಡುತ್ತವೆ.**

ಸಂಸತ್ತು ಸಂವಿಧಾನದ ಒಂದು ಪ್ರಮುಖ ಅಂಗವಾಗಿ ಕಾನೂನುಗಳ ರಚನೆ ಮತ್ತು ಕಾರ್ಯಾಂಗದ ವ್ಯವಹಾರಗಳ ಮೇಲುಸ್ತುವಾರಿ ಸೇರಿದಂತೆ ಸಂಕೀರ್ಣವಾದ ಹಾಗೂ ವೈವಿಧ್ಯಮಯ ಕಾರ್ಯಗಳನ್ನು ನಿರ್ವಹಿಸುತ್ತದೆ. ಆದರೆ, ಅದಕ್ಕೆ ತನ್ನ ಮುಂದೆ ಇರಿಸಿರುವ ವಿಷಯಗಳ ತಲಸ್ಪರ್ಶಿ ಚರ್ಚೆ ನಡೆಸಲು ಸಾಧ್ಯವಾಗುವುದಿಲ್ಲ. ಇದನ್ನು ಸರಿಪಡಿಸಲು ಅದು ನಿರ್ದಿಷ್ಟ ವಿಷಯಗಳನ್ನು ವಿವರವಾಗಿ ಪರಿಶೀಲನೆ ನಡೆಸಿ, ಸಂಸತ್ತಿಗೆ ವರದಿ ಮಾಡಲು ಹಲವು ಸಮಿತಿಗಳನ್ನು ನೇಮಿಸುತ್ತದೆ. ಆದ್ದರಿಂದ, ಸಂಸತ್ತು ಎರಡು ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆ; ಶಾಸಕಾಂಗ ಸಭೆಯ ಸದನಗಳಲ್ಲಿ ಮತ್ತು ಸಮಿತಿಗಳಲ್ಲಿ. ಸಮಿತಿಗಳು ಸಲ್ಲಿಸುವ ವರದಿಗಳು ಸಂಸತ್ತಿನಲ್ಲಿ ಮಾಹಿತಿಪೂರ್ವ ಚರ್ಚೆಗೆ ದಾರಿ ಮಾಡಿಕೊಡಲಿವೆ. ಹೆಚ್ಚುವರಿಯಾಗಿ, ಸಮಿತಿಗಳು ಪಕ್ಷಾತೀತವಾದ ಒಮ್ಮತವನ್ನು ರೂಪಿಸಲು, ವಿಷಯದಲ್ಲಿ ಪರಿಣತಿಯನ್ನು ಅಭಿವೃದ್ಧಿಪಡಿಸಲು ಹಾಗೂ ಪರಿಣತರು ಮತ್ತು ಭಾಗೀದಾರರಿಂದ ಸಲಹೆ ಪಡೆದುಕೊಳ್ಳಲು ಅವಕಾಶ ಮಾಡಿಕೊಡುತ್ತವೆ.[1] ([1]A Background Paper on Working on Parliament and Need for Reforms, Volume II, Book 3, National Commission to Review the Working of the Constitution Report, 2002, https://legalaffairs.gov.in/sites/default/files/WORKING%20OF%20PARLIAMENT%20AND%20NEED%20FOR%20REFORMS.pdf.)

ಸ್ಥಾಯಿ ಸಮಿತಿಗಳನ್ನು ನಾಲ್ಕು ವಿಧವಾಗಿ ವರ್ಗೀಕರಿಸಲಾಗುತ್ತದೆ; 1. ವಿಷಯ 2. ಹಣಕಾಸು 3. ಉತ್ತರದಾಯಿತ್ವ ಮತ್ತು 4. ಆಡಳಿತಾತ್ಮಕ. ಸಂಸತ್ತು ಅಗತ್ಯವಿದ್ದಾಗ ತಾತ್ಕಾಲಿಕ ಸಮಿತಿಗಳನ್ನೂ ನೇಮಿಸಬಹುದಾಗಿದೆ. ಉದಾಹರಣೆಗೆ, ಜನ್ ವಿಶ್ವಾಸ್(ನಿಯಮಗಳಿಗೆ ತಿದ್ದುಪಡಿ) ಮಸೂದೆ, 2022ನ್ನು ತಾತ್ಕಾಲಿಕ ಸಮಿತಿಯಾದ ಜಂಟಿ ಸಂಸದೀಯ ಸಮಿತಿಗೆ ಒಪ್ಪಿಸಲಾಗಿದೆ. ವರದಿ ಸಲ್ಲಿಸಿದ ಬಳಿಕ ಇಂಥ ಸಮಿತಿಗಳನ್ನು ವಿಸರ್ಜಿಸಲಾಗುತ್ತದೆ.


ಇಲಾಖೆಗಳಿಗೆ ಸಂಬಂಧಿಸಿದ ಸಮಿತಿಗಳು ಅಥವಾ ವಿಷಯ

* ಲೇಖಕರು ಹೊಸದಿಲ್ಲಿಯ ಪಿಆರ್‌ಎಸ್ ಲೆಜಿಸ್ಲೇಟಿವ್ ರಿಸರ್ಚ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇಮೇಲ್: * alaya@prsindia.org ** madhavan@prsindia.org



Scanned with ACE Scanner

**ಚಿತ್ರ 1 : 14 ಮತ್ತು 17ನೇ ಲೋಕಸಭೆ ನಡುವೆ ಸಮಿತಿಗಳಿಗೆ ಕಳಿಸಲ್ಪಟ್ಟ ಮಸೂದೆಗಳ ಸಂಖ್ಯೆ ***




ಟಿಪ್ಪಣಿ: *2023ರ ಮಳೆಗಾಲದ ಅಧಿವೇಶನದ ಅಂತ್ಯದವರೆಗೆ. ಎಲ್‌ಎಸ್ ಎಂದರೆ ಲೋಕಸಭೆ.

ಮೂಲ: ಡಿಜಿ ಟಲ್ ಸಂಸದ್; ಪಿಆರ್‌ಎಸ್

ಸಮಿತಿಗಳು ಪ್ರತಿಯೊಂದು ಇಲಾಖೆಯ ಮೇಲ್ವಿಚಾರಣೆಯನ್ನು ಖಾತ್ರಿಗೊಳಿಸುತ್ತವೆ. ಸಚಿವರು ಸಮಿತಿಗಳ ಸದಸ್ಯರಾಗುವ ಅರ್ಹತೆ ಹೊಂದಿರುವುದಿಲ್ಲ. 24 ವಿಷಯ ಸಮಿತಿಗಳಿದ್ದು, ಪ್ರತಿಯೊಂದರಲ್ಲೂ 31 ಸದಸ್ಯರಿದ್ದಾರೆ; 21 ಮಂದಿ ಲೋಕಸಭೆಯಿಂದ ಹಾಗೂ 10 ಮಂದಿ ರಾಜ್ಯಸಭೆ ಯಿಂದ. ಸದನದಲ್ಲಿ ಪಕ್ಷಗಳ ಬಲಾಬಲವನ್ನು ಆಧರಿಸಿ, ಸಮಿತಿಗೆ ಸದಸ್ಯರನ್ನು ನಿಗದಿಪಡಿಸಲಾಗುತ್ತದೆ. ವಿಷಯ ಸಮಿತಿಗಳು ಪ್ರಸ್ತಾವಿತ ಕಾನೂನುಗಳನ್ನು ಪುನರ್‌ವಿಮರ್ಶಿಸುತ್ತವೆ, ಆಯ್ಕೆ ಮಾಡಿಕೊಂಡ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲಿಸುತ್ತವೆ ಮತ್ತು ಪ್ರತಿಯೊಂದು ಮಂತ್ರಾಲಯಕ್ಕೆ ನಿಗದಿಗೊಳಿಸಿದ ಅನುದಾನವನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತವೆ. ಮಸೂದೆಗಳನ್ನು ಅಂಗೀಕರಿಸುವ ಮುನ್ನ ಸೂಕ್ತವಾಗಿ ಪರಿಶೀಲನೆಯನ್ನು ಖಾತ್ರಿಗೊಳಿಸಲು

**ಕೋಷ್ಟಕ 1 : ವಿಷಯ ಸಮಿತಿಗಳು ಪ್ರಕಟಿಸಿದ ವರದಿಗಳ ವಿಧಗಳು**

| | ವರದಿಗಳ ಸಂಖ್ಯೆ | | | | ಒಟ್ಟು ವರದಿಗಳ ಶೇಕಡಾವಾರು | | | |
|---|---|---|---|---|---|---|---|---|
| ವರದಿಯ ವಿಧ | 14ನೇ ಲೋ.ಸ. | 15ನೇ ಲೋ.ಸ. | 16ನೇ ಲೋ.ಸ. | 17ನೇ ಲೋ.ಸ. | 14ನೇ ಲೋ.ಸ. | 15ನೇ ಲೋ.ಸ. | 16ನೇ ಲೋ.ಸ. | 17ನೇ ಲೋ.ಸ. |
| ಮಸೂದೆಗಳು** | 134 | 145 | 41 | 21 | ಶೇ.13 | ಶೇ.14 | ಶೇ.4 | ಶೇ.2 |
| ಡಿಎಫ್‌ಜಿ | 333 | 285 | 331 | 343 | ಶೇ.32 | ಶೇ.28 | ಶೇ.31 | ಶೇ.38 |
| ವಿಷಯಗಳು | 158 | 159 | 194 | 118 | ಶೇ.15 | ಶೇ.16 | ಶೇ.18 | ಶೇ.13 |
| ಎಟಿಆರ್ | 416 | 423 | 504 | 404 | ಶೇ.40 | ಶೇ.42 | ಶೇ.47 | ಶೇ.45 |
| ಒಟ್ಟು | 1,041 | 1,012 | 1,070 | 892 | | | | |

ಟಿಪ್ಪಣಿಗಳು–*ಜುಲೈ 2023ರಲ್ಲಿ ಇದ್ದಂತೆ. **ಜಂಟಿ ಸಂಸದೀಯ ಸಮಿತಿಗಳಿಗೆ ಒಪ್ಪಿಸಿದ ಮಸೂದೆಗಳನ್ನು ಸೇರಿಸಿಲ್ಲ. ಎಲ್‌ಎಸ್ ಎಂದರೆ ಲೋಕಸಭೆ


ಮೂಲ: ಡಿಜಿಟಲ್ ಸಂಸದ್; ಮಾಧವನ್ ಎಂ.ಆರ್.,'ಪಾರ್ಲಿಮೆಂಟ್' ಇನ್ ರಿಥಿಂಕಿಂಗ್ ಪಬ್ಲಿಕ್ ಇನ್‌ಸ್ಟಿಟ್ಯೂಷನ್ಸ್ ಇನ್ ಇಂಡಿಯಾ: ಪಿಆರ್‌ಎಸ್ [9]

([9]Madhavan M.R, "Parliament" in Rethinking Public Institutions in India, ed. Devesh Kapur, Pratap Bhanu Mehta and Milan Vaishnav, Oxford University Press, 2016.)



Scanned with ACE Scanner

ಚಿತ್ರ 2: 17ನೇ ಲೋಕಸಭೆಯಲ್ಲಿ ವಿಷಯ ಸಮಿತಿಗಳ ಸಭೆಯಲ್ಲಿ ಅಂದಾಜು ಹಾಜರಿ




ಟಿಪ್ಪಣಿ : ಜುಲೈ 2023ರಲ್ಲಿರುವಂತೆ. ಮೂಲಗಳು : ಡಿಜಿಟಲ್ ಸಂಸದ್; ಪಿಆರ್‌ಎಸ್


ಅವುಗಳನ್ನು ವಿಷಯ ಸಮಿತಿಗೆ ಒಪ್ಪಿಸಬಹುದಾಗಿದೆ. ಸಂಸದೀಯ ಸಮಿತಿಗಳು ಸಂಸತ್ತು ಅಂಗೀಕರಿಸಿದ ಮಸೂದೆಗಳ ಗುಣಮಟ್ಟ ಹೆಚ್ಚಳಕ್ಕೆ ತಮ್ಮ ಕೊಡುಗೆ ಸಲ್ಲಿಸಿವೆ. ಉದಾಹರಣೆಗೆ, ಸಾಗರಗಳಲ್ಲಿ ಕಳವು ತಡೆ ಮಸೂದೆ(ಆ್ಯಂಟಿಮಾರಿಟೈಮ್ ಪೈರಸಿ ಬಿಲ್) 2019 ಕಳವಿನಿಂದ ಸಾವು[2] ([2]The Anti-Maritime Piracy Bill, 2019, https://prsindia.org/files/bills_acts/bills_parliament/2019/The%20Anti-Maritime%20Piracy%20Bill,%202019.pdf.) ಸಂಭವಿಸಿದಲ್ಲಿ ಮರಣದಂಡನೆಯನ್ನು ವಿಧಿಸುತ್ತದೆ. ಕಡ್ಡಾಯ ಮರಣದಂಡನೆಯು ಸಮಾನತೆ ಮತ್ತು ಸ್ವಾತಂತ್ರ್ಯದ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂದು ಸುಪ್ರೀಂ ಕೋರ್ಟ್[3] ([3]Standing Committee on External Affairs, The Anti-Maritime Piracy Bill, 2019, Lok Sabha, February 2021, https://prsindia.org/files/bills_acts/bills_parliament/2019/17_External_Affairs_6.pdf.) ಹೇಳಿರುವುದನ್ನು ವಿದೇಶಾಂಗ ವ್ಯವಹಾರಗಳ ಸ್ಥಾಯಿ ಸಮಿತಿ ಗಮನಿಸಿತು. ಶಿಕ್ಷೆಯನ್ನು ಮರಣದಂಡನೆ ಬದಲು ಜೀವಾವಧಿ ಅಥವಾ ಮರಣದಂಡನೆ ಎಂದು ಬದಲಿಸಬೇಕೆಂದು ಶಿಫಾರಸು ಮಾಡಿತು. ಸಂಸತ್ತು ಮಸೂದೆಯನ್ನು ಅಂಗೀಕರಿಸಿದಾಗ[4] ([4]The Anti-Maritime Piracy Act, 2022, https://egazette.gov.in/WriteReadData/2023/243355.pdf.) ಈ ಬದಲಾವಣೆಯನ್ನು ಅಳವಡಿಸಿಕೊಂಡಿತು.

ಹಣಕಾಸು ಸಮಿತಿಗಳು ಮೂರು ಸಮಿತಿಗಳನ್ನು ಒಳಗೊಂಡಿರುತ್ತವೆ; ಅಂದಾಜು, ಸಾರ್ವಜನಿಕ ಕ್ಷೇತ್ರದ ಉದ್ಯಮಗಳು ಹಾಗೂ ಸಾರ್ವಜನಿಕ ಲೆಕ್ಕಪತ್ರ. ಸಚಿವರು ಸಮಿತಿಯ ಸದಸ್ಯರಾಗುವಂತಿಲ್ಲ. ಅಂದಾಜು ಸಮಿತಿಯು ಸಚಿವಾಲಯಗಳ ಬಜೆಟ್‌ಮುನ್ನ ಅಂದಾಜುಗಳನ್ನು ಪರಿಶೀಲಿಸುತ್ತದೆ; ಸಾರ್ವಜನಿಕ ಉದ್ದಿಮೆಗಳ ಸಮಿತಿಯು ಸಾರ್ವಜನಿಕ ಕ್ಷೇತ್ರದ ಉದ್ಯಮಗಳ ಕಾರ್ಯನಿರ್ವಹಣೆಯನ್ನು ಪರೀಕ್ಷಿಸುತ್ತದೆ; ಮತ್ತು, ಸಾರ್ವಜನಿಕ ಲೆಕ್ಕಪತ್ರ ಸಮಿತಿ(ಪಿಎಸಿ)ಯು ಸಂಸತ್ತು ಅಂಗೀಕರಿಸಿದ ಸರ್ಕಾರಗಳ ವೆಚ್ಚದ ಹೇಳಿಕೆಯನ್ನು ಅವಲೋಕಿಸುತ್ತದೆ. ಸಂಸತ್ತು ಮತ್ತು ಸದನಗಳ ಆಡಳಿತಾತ್ಮಕ ಹಾಗೂ ಉತ್ತರದಾಯಿತ್ವ ಕುರಿತ ದಿನನಿತ್ಯದ ವ್ಯವಹಾರಗಳನ್ನು ಪರಿಶೀಲಿಸುವ ಇನ್ನಿತರ ಸಮಿತಿಗಳೂ ಇವೆ. ಇದರಲ್ಲಿ ಸಂಸದರ ಹಕ್ಕುಗಳು, ವಿಶೇಷಾಧಿಕಾರಗಳು ಮತ್ತು ರಕ್ಷಣೆಗಳ ಉಲ್ಲಂಘನೆಯನ್ನು ಒಳಗೊಂಡ ಪ್ರಶ್ನೆಗಳನ್ನು ಪರಿಶೀಲಿಸುವ ವಿಶೇಷಾಧಿಕಾರಗಳ ಸಮಿತಿಯೂ ಸೇರಿದೆ. ಮನವಿ ಸಮಿತಿಯು ಸಾರ್ವಜನಿಕರು ಅರ್ಜಿಗಳ ಮೂಲಕ ಸಲ್ಲಿಸಿದ ದೂರುಗಳನ್ನು ಪರಿಶೀಲಿಸುತ್ತದೆ.



Scanned with ACE Scanner

**ಚಿತ್ರ 3 : 17ನೇ ಲೋಕಸಭೆಯಲ್ಲಿ ಹಣಕಾಸು ಸಮಿತಿ ಸಭೆಗಳಲ್ಲಿ ಅಂದಾಜು ಹಾಜರಾತಿ*(ಶೇ.)**




ಟಿಪ್ಪಣಿ : ಜುಲೈ 2023ರಲ್ಲಿರುವಂತೆ. ಮೂಲಗಳು : ಡಿಜಿಟಲ್ ಸಂಸದ್; ಪಿಆರ್‌ಎಸ್

ಹೆಚ್ಚುವರಿಯಾಗಿ ಉಭಯ ಸದನಗಳು ನಿರ್ದಿಷ್ಟ ಉದ್ದೇಶಕ್ಕಾಗಿ ತಾತ್ಕಾಲಿಕ ಸಮಿತಿಗಳನ್ನು ನೇಮಿಸುತ್ತವೆ. ಈ ಸಮಿತಿಗಳು ತಮ್ಮ ಕೆಲಸ ಪೂರೈಸಿ ವರದಿ ಸಲ್ಲಿಸಿದ ಬಳಿಕ ಅಸ್ತಿತ್ವ ಕಳೆದುಕೊಳ್ಳುತ್ತವೆ. ಈ ಲೇಖನದಲ್ಲಿ ಹಣಕಾಸು ಮತ್ತು ವಿಷಯ ಸಮಿತಿಗಳ ವ್ಯಾಪ್ತಿ ಮತ್ತು ಕಾರ್ಯಭಾರ ಕುರಿತು ಚರ್ಚಿಸಲಾಗಿದೆ.

ಸಂಸತ್ತಿನ ಸಮರ್ಪಕ ಕಾರ್ಯಾಚರಣೆಗೆ ಸಂಸದೀಯ ಸಮಿತಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದು ಮುಖ್ಯ. ಸಂಸದೀಯ ಸಮಿತಿಗಳ ಹಲವು ಕ್ಷೇತ್ರಗಳಲ್ಲಿ ಸುಧಾರಣೆ ಹಾಗೂ ಬಲವರ್ಧನೆಯ ಅಗತ್ಯವಿದೆ.

**ಮಸೂದೆಗಳನ್ನು ಸಮಿತಿಗಳಿಗೆ ಒಪ್ಪಿಸುವುದು:** ಪ್ರಸ್ತುತ, ಎಲ್ಲ ಮಸೂದೆಗಳನ್ನು ಸಮಿತಿಗಳಿಗೆ ಒಪ್ಪಿಸುವುದಿಲ್ಲ. ಮಸೂದೆಯೊಂದನ್ನು ಸಮಿತಿಗೆ ಒಪ್ಪಿಸಬೇಕೇ, ಬೇಡವೇ ಎಂಬುದನ್ನು ಮಸೂದೆಯನ್ನು ಮಂಡಿಸುತ್ತಿರುವ ಸಂಬಂಧಿಸಿದ ಸಚಿವರೊಟ್ಟಿಗೆ ಚರ್ಚಿಸಿದ ಬಳಿಕ ಸಭಾಧ್ಯಕ್ಷ ಅಥವಾ ಸಭಾಪತಿ ನಿರ್ಧರಿಸುತ್ತಾರೆ. ಎಲ್ಲ ಮಸೂದೆಗಳನ್ನು ಸಮಿತಿಯೊಂದಕ್ಕೆ ಒಪ್ಪಿಸುವುದರಿಂದ, ಎಲ್ಲ ಕಾಯಿದೆಗಳು ಕನಿಷ್ಠ ಮಟ್ಟದ ಸಂಸದೀಯ ಪರಿಶೀಲನೆಗೆ ಒಳಪಟ್ಟಂತೆ ಆಗಲಿದೆ. ಉದಾಹರಣೆಗೆ, ವಾಹನಗಳ ಮಾಲಿಕರು ಮೂರನೇ ವ್ಯಕ್ತಿಯಿಂದ ವಿಮೆ ಮಾಡಿಸಿರಬೇಕೆಂದು ಮೋಟರ್ ವಾಹನಗಳ ಕಾಯಿದೆ 1988 ಹೇಳುತ್ತದೆ.[5] ([5]The Motor Vehicles Act, 1988, https://www.indiacode.nic.in/bitstream/123456789/1798/1/A1988-59.pdf.) ಒಂದುವೇಳೆ ಅಪಘಾತ ಸಂಭವಿಸಿದಲ್ಲಿ ವ್ಯಕ್ತಿಗೆ ಪರಿಹಾರ ನೀಡಲು ಇದು ನೆರವಾಗಲಿದೆ. ಈ ಕಾಯಿದೆಯ 2016ರ ತಿದ್ದುಪಡಿಯು ವ್ಯಕ್ತಿ ಮರಣ ಹೊಂದಿದಲ್ಲಿ ಪರಿಹಾರ ಮೊತ್ತವನ್ನು 10 ಲಕ್ಷ ರೂ. ಗೆ ಮಿತಿಗೊಳಿಸಿತು.[6] ([6] The Motor Vehicles (Amendment) Bill, 2016, https://prsindia.org/files/bills_acts/bills_parliament/2016/Motor%20Vehicles%20(Amendment)%20Bill,%202016-.pdf) ಪರಿಹಾರ ವನ್ನು ನ್ಯಾಯಾಲಯಗಳು ನಿಗದಿಪಡಿಸುತ್ತವೆ ಮತ್ತು ಇದಕ್ಕೆ ಯಾವುದೇ ಗರಿಷ್ಠ ಮಿತಿಯಿಲ್ಲ ಎಂಬುದನ್ನು ಗುರುತಿಸಿದ ಸ್ಥಾಯಿ ಸಮಿತಿ, ವಿಮೆ ಪರಿಹಾರಕ್ಕೆ ಯಾವುದೇ ಗರಿಷ್ಠ ಮಿತಿ ಹೇರಬಾರದು. ಏಕೆಂದರೆ, ಅದು ಇಡೀ ಪರಿಹಾರವನ್ನು ಒಳಗೊಂಡಿರುತ್ತದೆ ಎಂದು ಶಿಫಾರಸು ಮಾಡಿತು. ಸಂಸತ್ತು ಮಸೂದೆಯನ್ನು ಅಂಗೀಕರಿಸಿದಾಗ, ಈ ಶಿಫಾರಸನ್ನು ಅಳವಡಿಸಿಕೊಂಡಿತು.

17ನೇ ಲೋಕಸಭೆಯ 2023ರ ಮುಂಗಾರು ಅಧಿವೇಶನದ ಅಂತ್ಯದವರೆಗೆ ಶೇ.17ರಷ್ಟು ಮಸೂದೆಗಳನ್ನು ಸಮಿತಿಗಳಿಗೆ ಒಪ್ಪಿಸಲಾಗಿದೆ(ಚಿತ್ರ 1). ಈ ಸಂಖ್ಯೆ ಕಳೆದ ಮೂರು ಲೋಕಸಭೆಗೆ ಹೋಲಿಸಿದರೆ ಕಡಿಮೆಯಾಗುತ್ತಿದೆ (ಕೋಷ್ಟಕ 1). ಸಮಿತಿಗಳ ಶಿಫಾರಸುಗಳ ಚರ್ಚೆ ನಡೆಸುವುದು ಅಥವಾ ಕೆಲವು ಶಿಫಾರಸುಗಳನ್ನು ನಿರ್ದಿಷ್ಟ ಕಾರಣ ನೀಡದೆ ತಿರಸ್ಕರಿಸುವುದು ಕೂಡ ಕಡ್ಡಾಯವೇನಲ್ಲ. ಆದರೆ, ಈ ವಿವರಗಳನ್ನು ಸದನದಲ್ಲಿ ಚರ್ಚಿಸುವುದರಿಂದ, ಕಾನೂನುಗಳನ್ನು ಸದೃಢಗೊಳಿಸಲು ನೆರವಾಗಲಿದೆ. ಅಷ್ಟಲ್ಲದೆ, ಪ್ರಸ್ತಾವಿತ ಮಸೂದೆಗಳ ಬಗ್ಗೆ ಪರಿಣತರ ಸಲಹೆ ಪಡೆಯುವುದರಿಂದ, ಶಾಸನದಲ್ಲಿನ ಕಂದರಗಳನ್ನು ಸರಿಪಡಿಸಲು ನೆರವಾಗಬಹುದು. ಲೋಕಸಭೆಯಲ್ಲಿ ಪರಿಚಯಿಸುವ ಮಸೂದೆಗಳನ್ನು ವಿಸ್ತೃತ ಪರಿಶೀಲನೆ ಮತ್ತು ಚರ್ಚೆಗಾಗಿ ವಿಷಯ ಸಮಿತಿಗಳಿಗೆ ಒಪ್ಪಿಸಬೇಕು ಎಂದು ಸಂವಿಧಾನದ ಕಾರ್ಯನಿರ್ವಹಣೆಯ ಅವಲೋಕನಕ್ಕೆ ನೇಮಿಸಿದ ರಾಷ್ಟ್ರೀಯ ಸಮಿತಿ(2002) ಹೇಳಿತ್ತು. ಜೊತೆಗೆ, ವಿಷಯ ಸಮಿತಿಗಳು ತಮಗೆ ಸಂಬಂಧಿಸಿದ ವಿಷಯಗಳ ಕುರಿತು ಸಂಸತ್ತು ಅಂಗೀಕರಿಸಿದ ಮಸೂದೆಗಳ ಅನುಷ್ಠಾನವನ್ನು ಅವಲೋಕಿಸಬೇಕು.[7] ([7]Standing Committee on Transport, Tourism and Culture, The Motor Vehicles Amendment) Bill, 2016, Rajya Sabha, February 8, 2017, https://sansad.in/getFile/rsnew/Committee_site/Committee_File/ReportFile/20/78/243_2020_9_15.pdf?source=rajyasabha.) ಕೆಲವು ಪ್ರಜಾಪ್ರಭುತ್ವ ವ್ಯವಸ್ಥೆಗಳಲ್ಲಿ, ಉದಾಹರಣೆಗೆ, ಬ್ರಿಟನ್, ಹಣಕಾಸು ಮಸೂದೆ ಹೊರತುಪಡಿಸಿ ಬೇರೆಲ್ಲ ಮಸೂದೆಗಳು ತನ್ನಿಂದತಾನೇ ಸಮಿತಿಗಳಿಗೆ ಕಳಿಸಲ್ಪಡುತ್ತವೆ.[8] ([8]"General Bills (including Public Bill Committees)", UK Parliament, as accessed on July 27, 2023, https://www.parliament.uk/about/how/committees/general/.)

**ಸಂಸದರ ಹಾಜರಿ:** ಸಂಸದೀಯ ಸಮಿತಿಗಳು ವಿಷಯಗಳನ್ನು ಚರ್ಚಿಸಲು ಹಲವು ಸಭೆಗಳನ್ನು ನಡೆಸುತ್ತವೆ. ಸಮಿತಿ ವ್ಯವಸ್ಥೆ ಯಶಸ್ವಿಯಾಗಬೇಕೆಂದರೆ, ಈ ಸಭೆಗಳಲ್ಲಿ ಸದಸ್ಯರ ಹಾಜರಿ ಅತ್ಯಗತ್ಯವಾಗಿರಲಿದೆ. ಆದರೆ,ಈ ಸಭೆಗಳಿಗೆ ಸದಸ್ಯರ ಹಾಜರಿ ಪ್ರಮಾಣ ಕಡಿಮೆ ಇದೆ. 17ನೇ ಲೋಕಸಭೆಯಲ್ಲಿ ಜುಲೈ



Scanned with ACE Scanner

2023ರವರೆಗೆ ವಿಷಯ ಸಮಿತಿಗಳಿಗೆ ಸದಸ್ಯರ ಹಾಜರಿ ಪ್ರಮಾಣ ಶೇ.47(ಚಿತ್ರ 2). ಹಣಕಾಸು ಸಮಿತಿಗಳಿಗೆ ಹಾಜರಿ ಪ್ರಮಾಣ ಶೇ.37. ಆದರೆ, ಇದೇ ಅವಧಿಯಲ್ಲಿ ಸಂಸತ್ತಿನಲ್ಲಿ ಸದಸ್ಯರ ಹಾಜರಿ ಪ್ರಮಾಣ ಶೇ.79 ಇತ್ತು. ವಿಷಯ ಸಮಿತಿಗಳಲ್ಲಿ ಅಂದಾಜು 10 ಸದಸ್ಯರು ಇರಲಿದ್ದು, ಇದರಲ್ಲಿ ಕೋರಂಗೆ 1/3 ರಷ್ಟು ಸದಸ್ಯರು ಇರಬೇಕು. ಸಂವಿಧಾನದ ಕಾರ್ಯನಿರ್ವಹಣೆಯ ಅವಲೋಕನಕ್ಕೆ ನೇಮಿಸಿದ ರಾಷ್ಟ್ರೀಯ ಸಮಿತಿ(2002)ಯು ಸಮಿತಿಗಳ ಸಭೆಗಳಲ್ಲಿ ಹಾಜರಿ ಕೊರತೆ ಹೆಚ್ಚು ಇರುತ್ತದೆ ಎಂದು ಹೇಳಿತ್ತು. ಅಷ್ಟಲ್ಲದೆ, ಕೆಲವೊಂದು ಸಮಿತಿಗೆ ಹಲವು ಸಚಿವಾಲಯಗಳ ಜವಾಬ್ದಾರಿ ನೀಡಿದ್ದು ಗಮನಕ್ಕೆ ಬಂದಿತ್ತು.[10] ([10] Chapter 5 'Parliament and State Legislatures', Volume 1, National Commission to Review the Working of the Constitution Report, 2002, https://legalaffairs.gov.in/sites/default/files/chapter%205.pdf.) ಇಂಥ ಸಮಿತಿಗಳು ಹಲವು ಸಚಿವಾಲಯಗಳ ಕಾರ್ಯನಿರ್ವಹಣೆ ಬಗ್ಗೆ ಕೂಲಂಕಷ ಪರಿಶೀಲನೆ ನಡೆಸಲು ಸಾಧ್ಯವಾಗುವುದಿಲ್ಲ ಎಂಬುದನ್ನು ಗಮನಿಸಲಾಗಿತ್ತು.

### ಪರಿಣತರು ಹಾಗೂ ತಾಂತ್ರಿಕ ಸಿಬ್ಬಂದಿ ಕೊರತೆ:

ಸಮಿತಿಗೆ ಕಳಿಸಿದ ವಿಷಯದ ಬಗ್ಗೆ ಸದನದಲ್ಲಿ ಸಾಧ್ಯವಿರುವುದಕ್ಕಿಂತ ಹೆಚ್ಚು ಆಳವಾಗಿ ಅಧ್ಯಯನ ಮಾಡುವುದು ಮತ್ತು ಪರೀಕ್ಷೆಯ ಫಲಿತಾಂಶವನ್ನು ಸದನಕ್ಕೆ ವರದಿ ಮಾಡುವುದು ಸಮಿತಿಗಳ ಉದ್ದೇಶ. ಸಂಕೀರ್ಣ ವಿಷಯಗಳನ್ನು ಉತ್ತಮವಾಗಿ ಅರ್ಥ ಮಾಡಿಕೊಳ್ಳಲು ಹಾಗೂ ಸಾರ್ವಜನಿಕರ ಮೇಲೆ ಇಂಥ ಕಾನೂನು ಇಲ್ಲವೇ ಕಾರ್ಯನೀತಿಗಳು ಬೀರುವ ಪರಿಣಾಮವನ್ನು ಅರ್ಥ ಮಾಡಿಕೊಳ್ಳಲು ಸಂಸದೀಯ ಸಮಿತಿಗಳು ತಜ್ಞ ಸಾಕ್ಷಿಗಳು, ಭಾಗೀದಾರರು ಮತ್ತು ಸಾರ್ವಜನಿಕರನ್ನು ಭೇಟಿ ಮಾಡಬಹುದು. ಸಂವಿಧಾನದ ಕಾರ್ಯನಿರ್ವಹಣೆಯ ಅವಲೋಕನಕ್ಕೆ ನೇಮಿಸಿದ ರಾಷ್ಟ್ರೀಯ ಸಮಿತಿ(2002)ಯು ವಿಚಾರಗಳಿಗೆ ತನಿಖೆ ನಡೆಸಲು, ಸಾರ್ವಜನಿಕ ವಿಚಾರಣೆಗಳನ್ನು ಆಯೋಜಿಸಲು ಮತ್ತು ಅಂಕಿಅಂಶ ಸಂಗ್ರಹಿಸಲು ಅಗತ್ಯವಿರುವಷ್ಟು ಹಣಕಾಸು ನೆರವು ನೀಡಬೇಕೆಂದು ಶಿಫಾರಸು ಮಾಡಿತ್ತು. ಪ್ರಸ್ತುತ, ಸಂಸದೀಯ ಸಮಿತಿಗಳಿಗೆ ಸಚಿವಾಲಯದ ಮೂಲಕ ನೀಡುತ್ತಿರುವ ತಾಂತ್ರಿಕ ಬೆಂಬಲ ಸಭೆಗಳನ್ನು ನಡೆಸಲು ಮತ್ತು ಟಿಪ್ಪಣಿ ತೆಗೆದುಕೊಳ್ಳಲಷ್ಟೇ ಸೀಮಿತವಾಗಿದೆ. ಇದಕ್ಕೆ ಪ್ರತಿಯಾಗಿ ಕೆನಡಾದಂಥ ಪ್ರಜಾಪ್ರಭುತ್ವಗಳಲ್ಲಿ ಸಂಸತ್ತಿನ ವಾಚನಾಲಯವು ಎಲ್ಲ ಸಮಿತಿಗಳಿಗೂ ಮನವಿ ಮೇರೆಗೆ ಸಂಶೋಧನಾ ಸಿಬ್ಬಂದಿಗಳನ್ನು ಪೂರೈಸುತ್ತದೆ.[11] ([11] "Committees", House of Commons, Parliament of Canada, as accessed on July 27, 2023, https://www.ourcommons.ca/marleaumontpetit/DocumentViewer.aspx?Language=E&Sec=Ch20&Seq=8) ಸಮಿತಿಗೆ ಹಿನ್ನೆಲೆ ಮಾಹಿತಿ ನೀಡುತ್ತದೆ ಹಾಗೂ ಸಾಕ್ಷಿದಾರರನ್ನು ಗುರುತಿಸುತ್ತದೆ. ಸಮಿತಿಗಳು ಹೆಚ್ಚುವರಿ ಇಲ್ಲವೇ ವಿಶೇಷ ಸಂಶೋಧನಾ ನೆರವನ್ನು ಸಂಸತ್ತಿನ ವಾಚನಾಲಯದ ಹೊರಗಿನಿಂದಲೂ ಪಡೆದುಕೊಳ್ಳುವ ಸ್ವಾತಂತ್ರ್ಯ ಹೊಂದಿರುತ್ತವೆ.

### ಸಾರ್ವಜನಿಕ ಪಾರದರ್ಶಕತೆ:

ಸಮಿತಿಯ ವರದಿಗಳನ್ನು ಸಾಮಾನ್ಯವಾಗಿ ಸಾರ್ವಜನಿಕಗೊಳಿಸಲಾಗುತ್ತದೆ. ಆದರೆ, ಸಮಿತಿಯ ಆಂತರಿಕ ಕಾರ್ಯನಿರ್ವಹಣೆಗಳು ಪಾರದರ್ಶಕವಾಗಿರಬೇಕೆಂದಿಲ್ಲ. ಪಾರದರ್ಶಕತೆ ಯ ಕ್ರಮವಾಗಿ, ಸಮಿತಿಯ ವರದಿಗಳಲ್ಲಿ ಸಭೆಗಳ ಕಿರುಟಿಪ್ಪಣಿಗಳನ್ನು ಸೇರ್ಪಡೆಗೊಳಿಸಲಾಗುತ್ತದೆ. ಆದರೆ, ಸಭೆಗಳನ್ನು ಮುಚ್ಚಿದ ಬಾಗಿಲುಗಳ ಒಳಗೆ ನಡೆಸಲಾಗುತ್ತದೆ. ಮುಚ್ಚಿದ ಬಾಗಿಲೊಳಗಿನ ಸಭೆಗಳು ಒಮ್ಮತದ ನಿರ್ಧಾರಕ್ಕೆ ಬರಲು ನೆರವಾಗಬಹುದಾದರೂ, ಅವು ಸಂಸದೀಯ ಸಮಿತಿಯ ಪ್ರಮುಖ ನಿರ್ಧಾರಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಲ್ಲಿ ಹಿನ್ನಡೆ ಅನುಭವಿಸುತ್ತವೆ. ಆದ್ದರಿಂದ, ಸಂವಿಧಾನದ ಕಾರ್ಯನಿರ್ವಹಣೆಯ ಅವಲೋಕನಕ್ಕೆ ನೇಮಿಸಿದ್ದ ರಾಷ್ಟ್ರೀಯ ಸಮಿತಿ(2002)ಯು ಎಲ್ಲ ಸಂಸದೀಯ ಸಮಿತಿಗಳ ವರದಿಗಳನ್ನು, ಅದರಲ್ಲೂ ವಿಶೇಷವಾಗಿ ಯಾವುದೇ ಸಮಿತಿ ಮತ್ತು ಕೇಂದ್ರ ಸರ್ಕಾರದ ನಡುವೆ ಭಿನ್ನಾಭಿಪ್ರಾಯ ಇದ್ದಲ್ಲಿ ಅದನ್ನು ಸಂಸತ್ತಿನಲ್ಲಿ ಚರ್ಚಿಸಬೇಕು ಎಂದು ಶಿಫಾರಸು ಮಾಡಿತ್ತು. ಇದಕ್ಕೆ ಪ್ರತಿಯಾಗಿ, ಕೆಲವು ಪ್ರಜಾಪ್ರಭುತ್ವಗಳು ಸಭೆ ನಡೆಯುತ್ತಿರುವಾಗಲೇ ಮಾಹಿತಿ ನೇರಪ್ರಸಾರ ಮಾಡುತ್ತವೆ. ಕೆನಡಾದ ಸಂಸತ್ತಿನ 1991ರ ಸದನ ನಿರ್ವಹಣೆ ಸಮಿತಿ ರೂಪಿಸಿದ ಮಾರ್ಗದರ್ಶಿ ಸೂತ್ರಗಳ ಅನ್ವಯ, ಸಮಿತಿಗಳ ಸಭೆಯನ್ನು ನೇರಪ್ರಸಾರ ಮಾಡಲು ಅವಕಾಶವಿದೆ.[12] ([12] "The Parliamentary Record", House of Commons, Parliament of Canada, as accessed on July 27, 2023, https://www.ourcommons.ca/procedure/procedure-and-practice-3/ch_24_2-e.html.) ಕೊವಿಡ್–19ರ ಸಮಯದಲ್ಲಿ ಯುನೈಟೆಡ್ ಕಿಂಗ್‌ಡಂ ಸೋಂಕುರೋಗದ ನಿರ್ವಹಣೆಗೆ ದೇಶದ ಸನ್ನದ್ಧಗೊಳ್ಳುವಿಕೆಯನ್ನು ಜನರಿಗೆ ತೋರಿಸಲು ಆರೋಗ್ಯ ಮತ್ತು ಸಾಮಾಜಿಕ ರಕ್ಷಣೆ ಸಮಿತಿಯ ಸಭೆಯನ್ನು ನೇರವಾಗಿ ಪ್ರಸಾರ ಮಾಡಿತ್ತು.[13] ([13] "Live Coronavirus Committee", BBC Parliament, March 05, 2020, https://www.bbc.co.uk/programmes/m000ghsb.)

ಸಂವಿಧಾನದ ಕಾರ್ಯನಿರ್ವಹಣೆಯ ಅವಲೋಕನಕ್ಕೆ ನೇಮಿಸಿದ್ದ ರಾಷ್ಟ್ರೀಯ ಸಮಿತಿ(2002)ಯು ಸಂಸದೀಯ ಸಮಿತಿಗಳಿಗೆ ಕೆಲವು ಸುಧಾರಣೆಗಳನ್ನು ಶಿಫಾರಸು ಮಾಡಿದೆ. ಅವುಗಳಲ್ಲಿ ಮೂರು ಹೊಸ ಸಮಿತಿಗಳ ರಚನೆ ಸೇರಿದೆ– ಸಂವಿಧಾನ ಸಮಿತಿ, ರಾಷ್ಟ್ರೀಯ ಆರ್ಥಿಕ ಸಮಿತಿ ಮತ್ತು ಶಾಸನಗಳ ಸಮಿತಿ. ವಿಷಯ ಸಮಿತಿ ಅಥವಾ ಪ್ರಸ್ತಾವಿತ ಸಮಿತಿಗಳು ಅಂದಾಜುಗಳ ಸಮಿತಿ, ಸಾರ್ವಜನಿಕ ಉದ್ದಿಮೆಗಳು ಮತ್ತು ಅಪ್ರಧಾನ ಶಾಸನಗಳ ಸಮಿತಿಗಳು ಪರಿಶೀಲನೆ ನಡೆಸುವ ವಿಷಯಗಳನ್ನು ಪರಿಶೀಲಿಸುವುದ ರಿಂದ, ಆ ಸಮಿತಿಗಳನ್ನು ಮುಂದುವರಿಸುವ ಅಗತ್ಯವಿಲ್ಲ ಎಂದು ಸಮಿತಿ ಹೇಳಿತು. ಈ ಶಿಫಾರಸುಗಳನ್ನು ಜಾರಿಗೊಳಿಸಿಲ್ಲ.

ಅಂತಿಮವಾಗಿ, ಸಂಸದೀಯ ಸಮಿತಿಗಳು ಸರ್ಕಾರದ ಕೆಲಸದ ಪರಾಮರ್ಶನ ಹಾಗೂ ಸಂಸತ್ತಿನಲ್ಲಿ ಮಂಡಿಸುವ ಮಸೂದೆಗಳ ಗುಣಮಟ್ಟವನ್ನು ಉತ್ತಮಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಸಂಸದರಿಗೆ ಭಾಗೀದಾರರು ಹಾಗೂ ಪರಿಣತರ ದೃಷ್ಟಿಕೋನವನ್ನು ಪರಿಚಯಿಸಲು ಮತ್ತು ವಿವಾದಾಸ್ಪದ ವಿಷಯಗಳಲ್ಲಿ ಪಕ್ಷಗಳ ನಡುವೆ ಒಮ್ಮತವನ್ನು ರೂಪಿಸಲು ನೆರವಾಗುತ್ತವೆ.

(ಟಿಪ್ಪಣಿ: ಅಂಕಿಅಂಶಗಳನ್ನು ಸಂಗ್ರಹಿಸಲು ನೆರವಾದವರು ನಿರಂಜನ ಮೆನನ್)



Scanned with ACE Scanner

# ಸಾಂವೈಧಾನಿಕ ಸಂಸ್ಥೆಗಳ ಪಾತ್ರ

* ಪ್ರೊ. ಜಿ. ಎಸ್. ಬಾಜಪೇಯಿ
** ಡಾ.ರಾಘವ್ ಪಾಂಡೆ

**ಸಾಂವೈಧಾನಿಕ ಸಂಸ್ಥೆಗಳು ಸಾಂಸ್ಥಿಕ ರೂಪದಲ್ಲಿ ಪ್ರಜಾಪ್ರಭುತ್ವದ ಅಡಿಪಾಯವಾಗಿವೆ. ಪ್ರಜಾಪ್ರಭುತ್ವದ ಆದರ್ಶಗಳನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಬಲವಾದ ಸಾಂವೈಧಾನಿಕ ಸಂಸ್ಥೆಗಳ ಉಪಸ್ಥಿತಿಯು ಭಾರತೀಯ ಪ್ರಜಾಪ್ರಭುತ್ವದ ಸದೃಢತೆಗೆ ನಿರ್ಣಾಯಕ ಅಂಶವಾಗಿದೆ.**

ಪ್ರಜಾಪ್ರಭುತ್ವವು ಹೆಚ್ಚು ಜನರ ಪಾಲ್ಗೊಳ್ಳುವಿಕೆಗೆ ಅನುವು ಮಾಡಿಕೊಡುವ ನಿಟ್ಟಿನಲ್ಲಿ ಒಂದು ಸಂಸ್ಥೆಯಾಗಿ ವಿಕಸನಗೊಂಡಿದೆ ಮತ್ತು ಬೆಳವಣಿಗೆ ಕಂಡಿದೆ. ನಮಗೆಲ್ಲರಿಗೂ ತಿಳಿದಿರುವಂತೆ, ಮತದಾರರ ಅಗಾಧ ಸಂಖ್ಯೆಯಿಂದಾಗಿ ಭಾರತದ ಪ್ರಜಾಪ್ರಭುತ್ವವು ವಿಶ್ವದಲ್ಲೇ ಅತಿ ದೊಡ್ಡದೆನಿಸಿದೆ.

ಕೆಲವು ಮೂಲಭೂತ ತತ್ವಗಳನ್ನು ಆಧರಿಸಿ, ಪ್ರಜಾಪ್ರಭುತ್ವವನ್ನು ಆಡಳಿತದ ಒಂದು ರೂಪವೆಂದು ಪರಿಕಲ್ಪಿಸಲಾಗಿದೆ. ಮೊದಲನೆಯದಾಗಿ ಜನರು ಆಡಳಿತ ರಚನೆಯ ಭಾಗವಾಗಿರಬೇಕು, ಏಕೆಂದರೆ ಅವರು ಆಡಳಿತ ವ್ಯವಸ್ಥೆಯ ಪ್ರಜೆಗಳು ಮತ್ತು ಫಲಾನುಭವಿಗಳು. ಜೊತೆಗೆ, ಹಲವಾರು ಅಧ್ಯಯನಗಳ ಪ್ರಕಾರ, ಒಂದು ಗುಂಪಿನಲ್ಲಿ ಮಾಡಿದ ನಿರ್ಧಾರಗಳು, ಒಬ್ಬ ವ್ಯಕ್ತಿ ವೈಯಕ್ತಿಕವಾಗಿ ತೆಗೆದುಕೊಳ್ಳುವ ನಿರ್ಧಾರಗಳಿಗಿಂತ ಹೆಚ್ಚು ಸಮತೋಲಿತ ಮತ್ತು ಉತ್ತಮವಾಗಿ ಪರಿಗಣಿಸಲ್ಪಡುತ್ತವೆ. ಏಕೆಂದರೆ ಗುಂಪಿನಲ್ಲಿ ನಿರ್ಧಾರ ಕೈಗೊಂಡಾಗ ಅನೇಕ ದೃಷ್ಟಿಕೋನಗಳನ್ನು ಪರಿಗಣಿಸಲಾಗುತ್ತದೆ ಮತ್ತು ಮಧ್ಯಸ್ಥಗಾರರ ಅಗತ್ಯಗಳಿಗೆ ಅನುಗುಣವಾಗಿ ನಿರ್ಣಯಗಳನ್ನು ಸರಿಹೊಂದಿಸಲಾಗುತ್ತದೆ.

ಪ್ರಜಾಪ್ರಭುತ್ವದ ತಳಹದಿಯ ತತ್ವ ಮತ್ತು ರಚನಾತ್ಮಕ ಅಗತ್ಯಗಳನ್ನು ಪರಿಗಣಿಸುವುದಾದರೆ, ಪ್ರಜಾಪ್ರಭುತ್ವದ ಆದರ್ಶಗಳನ್ನು ಸ್ಥಾಪಿಸಲು, ರಕ್ಷಿಸಲು ಮತ್ತು ಶಾಶ್ವತಗೊಳಿಸಲು ಸಾಂವಿಧಾನಿಕ ಸಂಸ್ಥೆಗಳು ಅತ್ಯಗತ್ಯವಾಗಿವೆ. ಕಾನೂನುಗಳನ್ನು ರೂಪಿಸುವ ಚುನಾಯಿತ ಶಾಸಕಾಂಗವು ಅತ್ಯಂತ ಅಗತ್ಯವಾದ ಪ್ರಜಾಪ್ರಭುತ್ವ ಸಂಸ್ಥೆಯಾಗಿರಬೇಕು. ಈ ನಿಟ್ಟಿನಲ್ಲಿ ಭಾರತದ ಸಂಸತ್ತು ಒಂದು ಸಾಂವೈಧಾನಿಕ ಸಂಸ್ಥೆಯಾಗಿ ಈ ಪ್ರಾಥಮಿಕ ಕಾರ್ಯವನ್ನು ನಿರ್ವಹಿಸುತ್ತದೆ. ಸಂಸತ್ತಿನ ಉಭಯ ಸದನಗಳನ್ನು ಪ್ರತಿನಿಧಿಸುವ ಸದಸ್ಯರು ನೇರ ಅಥವಾ ಪರೋಕ್ಷವಾಗಿ ಜನರಿಂದ ಆಯ್ಕೆಯಾದವರಾಗಿರುತ್ತಾರೆ. ಜನರು ಕಾನೂನುಗಳಿಂದ ಆಳಲ್ಪಡುತ್ತಾರೆ, ಅಂತಹ ಕಾನೂನುಗಳನ್ನು ಜನರು ತಮ್ಮ ಪಾಲ್ಗೊಳ್ಳುವಿಕೆಯ ಮೂಲಕವೇ ತಾವೇ ರೂಪಿಸುತ್ತಾರೆ ಎಂದು ಪ್ರಜಾಪ್ರಭುತ್ವವು ಹೇಳುತ್ತದೆ. ಹೀಗಾಗಿ, ಜನರು ಆಯ್ಕೆ ಮಾಡಿದ ಶಾಸಕಾಂಗದ ಸದಸ್ಯರು ಜನರಿಗಾಗಿ ಕಾನೂನುಗಳನ್ನು ಮಾಡುತ್ತಾರೆ. ಅಂತೆಯೇ, ಚುನಾಯಿತ ಶಾಸಕಾಂಗವು ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಮತ್ತು ಬಲಪಡಿಸಲು ಅತ್ಯಗತ್ಯ ಅಂಶವಾಗಿದೆ. ಬಹುಮತ ಆಧರಿತವಾಗಿ ನಿರ್ಧಾರ ಕೈಗೊಳ್ಳುವ ವ್ಯವಸ್ಥೆಯಡಿ ಇದು ಕಾರ್ಯನಿರ್ವಹಿಸುತ್ತದೆ.

ಎಲ್ಲಕ್ಕಿಂತ ಮುಖ್ಯವಾಗಿ, ಪ್ರಜಾಪ್ರಭುತ್ವದ ಪರಿಕಲ್ಪನೆಯು ಕೇವಲ ಸಾಮೂಹಿಕ ನಿರ್ಧಾರ ಕೈಗೊಳ್ಳುವಿಕೆಯ ಏಕಮಾತ್ರ ತತ್ವಕ್ಕಷ್ಟೇ ಸೀಮಿತವಾಗಿಲ್ಲ. ಪ್ರಜಾಪ್ರಭುತ್ವದ ನಿರ್ಧಾರ ತೆಗೆದುಕೊಳ್ಳುವಲ್ಲಿ



ಒಬ್ಬ ವ್ಯಕ್ತಿಯು ಒಬ್ಬ ಪ್ರಜೆಯಾಗಿ ಕೇಂದ್ರ ಸ್ಥಾನವನ್ನು ಪಡೆಯುತ್ತಾನೆ ಎಂಬ ತತ್ವವನ್ನೂ ಇದು ಆಧರಿಸಿದೆ. ಪರಿಣಾಮವಾಗಿ, ಒಬ್ಬ ವ್ಯಕ್ತಿಯು ಕೆಲವು ಮೂಲಭೂತ ಅಥವಾ ಮಾನವ ಹಕ್ಕುಗಳನ್ನು ಸಹ ಹೊಂದಿದ್ದಾನೆ, ಅವುಗಳನ್ನು ಬೇರ್ಪಡಿಸಲಾಗದು ಮತ್ತು ಪ್ರಜಾಪ್ರಭುತ್ವ ಅಥವಾ ಸಂವಿಧಾನದ ಆಗಮನಕ್ಕೆ ಮೊದಲಿನಿಂದಲೂ ಈ ಹಕ್ಕುಗಳು ಆತನಿಗೆ/ಆಕೆಗೆ ಪ್ರಾಪ್ತವಾಗಿವೆ ಎಂಬ ಅರ್ಥವನ್ನೂ ಇದು ನೀಡುತ್ತದೆ. ಆದ್ದರಿಂದ, ಈ ಹಕ್ಕುಗಳನ್ನು ವೈಯಕ್ತಿಕ ಮಟ್ಟದಲ್ಲಿ ರಕ್ಷಿಸಬೇಕು, ಶಾಸಕಾಂಗದ ಮೂಲಕ ಬಹುಮತದ ನಿರ್ಧಾರದಿಂದಲೂ ಸಹ ಅವುಗಳನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ, ಯಾರಿಂದಲೂ ಕಸಿದುಕೊಳ್ಳಲಾಗದಷ್ಟು ಪವಿತ್ರವಾಗಿ ಈ ಹಕ್ಕುಗಳನ್ನು ಸಂವಿಧಾನಗಳು ಬಲಪಡಿಸಬೇಕು. ನಮ್ಮ ಸಂವಿಧಾನದಲ್ಲಿ

* ಉಪಕುಲಪತಿಗಳು. ** ಸಹಾಯಕ ಪ್ರಾಧ್ಯಾಪಕರು, ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ, ದೆಹಲಿ. ಇಮೇಲ್: vc@nludelhi.ac.in



Scanned with ACE Scanner

ಇದನ್ನು ಭಾಗ-3ರಲ್ಲಿ ಮೂಲಭೂತ ಹಕ್ಕುಗಳಾಗಿ ಸೇರಿಸಲಾಗಿದೆ. ಶಾಸಕಾಂಗದಿಂದಲೂ ಈ ಹಕ್ಕುಗಳಿಗೆ ಚ್ಯುತಿ ಬಾರದಂತೆ ರಕ್ಷಿಸಲು, ಮತ್ತೊಂದು ಅಗತ್ಯ ಸಾಂವೈಧಾನಿಕ ಸಂಸ್ಥೆಯ ಅಗತ್ಯವಿದೆ ಅದೇ – ಸ್ವತಂತ್ರ ನ್ಯಾಯಾಂಗ.

ನ್ಯಾಯಾಲಯಗಳು, ಸಾಂವೈಧಾನಿಕ ಸಂಸ್ಥೆಗಳೂ ಆಗಿರುವುದರಿಂದ ಸಂವಿಧಾನವನ್ನು ರಕ್ಷಿಸುವ ನಿರ್ಣಾಯಕ ಕಾರ್ಯವನ್ನು ಅವು ನಿರ್ವಹಿಸಬೇಕಾಗುತ್ತದೆ. ಇದಕ್ಕಾಗಿ ಕೆಲವೊಮ್ಮೆ ಜನರ ಇಚ್ಛೆಗೆ ವಿರುದ್ಧವಾಗಿ ಹೋಗಬೇಕಾಗುತ್ತದೆ. ಭಾರತದಲ್ಲಿ, ಸರ್ವೋಚ್ಚ ನ್ಯಾಯಾಲಯವು 'ಪೂಜ್ಯ ಕೇಶವಾನಂದ ಭಾರತಿ ವರ್ಸಸ್ ಕೇರಳ ಸರ್ಕಾರ' ಪ್ರಕರಣದಲ್ಲಿ ಮೂಲ ರಚನೆಯ ಸಿದ್ಧಾಂತವನ್ನು ವಿಕಸನಗೊಳಿಸಿತು. ಅಲ್ಲಿ ಸಂವಿಧಾನದ ಅಗತ್ಯ ಲಕ್ಷಣಗಳನ್ನು ಸಂಸತ್ತಿನ ತಿದ್ದುಪಡಿ ಅಧಿಕಾರವನ್ನು ಮೀರಿ ಪರಿಗಣಿಸಲಾಯಿತು. ಕಾನೂನುಗಳು ಮತ್ತು ಇತರ ಸಾಂವಿಧಾನಿಕ ಸಂಸ್ಥೆಗಳ ಮೂಲಕ ರಚಿಸಲಾದ ಎಲ್ಲಾ ಅಧೀನ ಸಂಸ್ಥೆಗಳು ತಮ್ಮ ಕಾರ್ಯಗಳನ್ನು ಸೂಚಿಸಿದಂತೆ ನಿರ್ವಹಿಸುತ್ತವೆ ಎಂದು ಖಚಿತಪಡಿಸಿಕೊಳ್ಳಲು ನ್ಯಾಯಾಲಯಗಳು ನಿಗಾ ಇರಿಸುತ್ತವೆ.

ವಿಶ್ವದ ಅತಿದೊಡ್ಡ ಮತ್ತು ಸಮಗ್ರ ಸಂವಿಧಾನವನ್ನು ಹೊಂದಿರುವ ವಿಶಿಷ್ಟ ಹೆಗ್ಗಳಿಕೆಯನ್ನು ನಾವು ಹೊಂದಿದ್ದೇವೆ. ಸ್ವಾಭಾವಿಕವಾಗಿ, ನಾವು ಇತರ ದೇಶಗಳಿಗೆ ಹೋಲಿಸಿದರೆ ಹೆಚ್ಚಿನ ಸಾಂವೈಧಾನಿಕ ಸಂಸ್ಥೆಗಳನ್ನು ಹೊಂದಿದ್ದೇವೆ. ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಕಾನೂನಿನ ನಿಯಮವು ಆಳವಾಗಿ ಬೇರೂರುವುದನ್ನು ಖಚಿತಪಡಿಸಿಕೊಳ್ಳಲು ನಮ್ಮ ಸಾಂವೈಧಾನಿಕ ರಚನಾಕಾರರು ಹೀಗೆ ಮಾಡಿದ್ದಾರೆ. ಅದರಂತೆ, ಭಾರತದ ಚುನಾವಣಾ ಆಯೋಗ, ಕೇಂದ್ರ ಲೋಕಸೇವಾ ಆಯೋಗ, ಭಾರತದ ಅಟಾರ್ನಿ ಜನರಲ್ ಕಚೇರಿ ಇತ್ಯಾದಿಗಳಿಗೆ ಸಾಂವೈಧಾನಿಕ ಸ್ಥಾನಮಾನವನ್ನು ನೀಡಲಾಗಿದೆ. ಇತರ ವ್ಯವಸ್ಥೆಗಳಲ್ಲಿ, ಈ ಸಂಸ್ಥೆಗಳು ಅಸ್ತಿತ್ವದಲ್ಲೇ ಇಲ್ಲ ಎಂದು ಇದರ ಅರ್ಥವಲ್ಲ, ಆದರೆ ಅಲ್ಲಿ, ಅವು ಸಂವಿಧಾನದ ಬದಲು ಶಾಸಕಾಂಗದ ರಚನೆಗಳಾಗಿವೆ. ಈ ಸಂಸ್ಥೆಗಳಿಗೆ ಸಾಂವೈಧಾನಿಕ ಸ್ಥಾನಮಾನವನ್ನು ನೀಡುವುದರಿಂದ ಅನೇಕ ಪ್ರಯೋಜನಗಳಿವೆ. ಶಾಶ್ವತತೆಯು ಈ ಸಂಸ್ಥೆಗಳನ್ನು ಸಂಪರ್ಕಿಸುವ ಜನರ ಕಾರ್ಯಗಳು ಮತ್ತು ಆಕಾಂಕ್ಷೆಗಳಲ್ಲಿ ಸ್ಥಿರತೆ ಮತ್ತು ಮುನ್ಸೂಚನೆಯನ್ನು ಖಾತರಿಪಡಿಸುತ್ತದೆ. ಇವೆಲ್ಲವೂ ಕಾನೂನಿನ ನಿಯಮದ ಅತ್ಯಗತ್ಯ ಲಕ್ಷಣಗಳಾಗಿವೆ, ಪ್ರತಿ ಪ್ರಜಾಪ್ರಭುತ್ವ ವ್ಯವಸ್ಥೆಯು ಇದನ್ನು ಸ್ಥಾಪಿಸಲು ಪ್ರಯತ್ನಿಸುತ್ತದೆ. ಕಾನೂನಿನ ನಿಯಮವನ್ನು ಒಂದು ಪರಿಕಲ್ಪನೆಯಾಗಿ, ರಾಜನ ಆಳ್ವಿಕೆಯ ವಿರುದ್ಧವಾದ ಪರಿಕಲ್ಪನೆಯೊಂದಿಗೆ ಹೋಲಿಸುವ ಮೂಲಕ ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ಇದರಲ್ಲಿ ರಾಜನು ತನ್ನ ಆದೇಶದ ಮೂಲಕ ಆಳ್ವಿಕೆ ಮಾಡುತ್ತಾನೆ. ಜೊತೆಗೆ ಆತನು ಕಾನೂನುಬದ್ಧವಾಗಿ ನಿರಂಕುಶವಾದ, ತನ್ನ ವಿವೇಚನೆಗೆ ಅನುಗುಣವಾದ ಮತ್ತು ವಿಚಿತ್ರ ನಿರ್ಧಾರಗಳನ್ನು ಕೈಗೊಳ್ಳಬಹುದು ಮತ್ತು ಅವುಗಳನ್ನು ಕಾನೂನಾಗಿ ಜಾರಿಗೊಳಿಸಲೂಬಹುದು. ಆದರೆ, ಪ್ರಜಾಪ್ರಭುತ್ವದಲ್ಲಿ ಇದಕ್ಕೆ ಅವಕಾಶವಿಲ್ಲ.

ಕಾನೂನಿನ ಆಡಳಿತ ವ್ಯವಸ್ಥೆಯಲ್ಲಿ, ಕಾನೂನೇ ಸರ್ವೋಚ್ಚವಾಗಿದುದು. ಪ್ರತಿಯೊಬ್ಬ ವ್ಯಕ್ತಿ ಮತ್ತು ಸಂಸ್ಥೆ ಅದಕ್ಕೆ ಅಧೀನವಾಗಿರುತ್ತಾರೆ. ಯಾರೊಬ್ಬರೂ ಸ್ವಂತ ವಿವೇಚನೆಯ ಮತ್ತು ನಿರಂಕುಶ ನಿರ್ಧಾರಗಳನ್ನು ಕೈಗೊಳ್ಳಲು ಇದರಲ್ಲಿ ಯಾವುದೇ ಅವಕಾಶವಿಲ್ಲ. ಉದಾಹರಣೆಗೆ, ಸರ್ಕಾರವೊಂದು ಕೈಗೊಂಡ ನಿರ್ಧಾರವನ್ನು ಅನೇಕ ಹಂತಗಳಲ್ಲಿ ಸಮರ್ಥಿಸಬೇಕಾಗುತ್ತದೆ. ಮೊದಲನೆಯದಾಗಿ, ಸಂಸತ್ತು ಒಂದು ಚುನಾಯಿತ ಸಂಸ್ಥೆಯಾಗಿ, ಆ ನಿರ್ಧಾರವನ್ನು ಮತಕ್ಕೆ ಹಾಕುತ್ತದೆ. ಎರಡನೆಯದಾಗಿ, ಒಬ್ಬ ವ್ಯಕ್ತಿಯು ಸಹ ತನಗೆ ಹೇಗೆ ಅನಾನುಕೂಲವಾಗುತ್ತಿದೆ ಅಥವಾ ತಾರತಮ್ಯಕ್ಕೊಳಗಾಗುತ್ತಿದ್ದೇನೆ ಎಂದು ಭಾವಿಸಿದರೆ, ಅವರು ಆ ಕಾನೂನನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಬಹುದು. ಈ ರೀತಿಯಾಗಿ ಸಾಂವೈಧಾನಿಕ ಸಂಸ್ಥೆಗಳು ಕಾನೂನಿನ ನಿಯಮವನ್ನು ಕಾಪಾಡುತ್ತವೆ. ಜೊತೆಗೆ ಬೇರೆಡೆಗಳಿಗಿಂತ ಹೆಚ್ಚಿನ ಸಂಸ್ಥೆಗಳಿಗೆ ಸಾಂವೈಧಾನಿಕ ಸ್ಥಾನಮಾನವನ್ನು ನೀಡುವ ಮೂಲಕ ನಮ್ಮಲ್ಲಿ ಪ್ರಜಾಪ್ರಭುತ್ವದ ಗುರಿಗಳ ವ್ಯಾಪ್ತಿಯನ್ನು ಹೆಚ್ಚಿಸಲಾಗಿದೆ.


ಪ್ರಜಾಪ್ರಭುತ್ವದಲ್ಲಿ, ಸರ್ಕಾರದ ಯಾವುದೇ ಕೃತ್ಯವು ನ್ಯಾಯಸಮ್ಮತವಾಗಿರಬೇಕು. ಸಾಂವೈಧಾನಿಕ ಸಂಸ್ಥೆಗಳು ಸರ್ಕಾರದ ಅಂಗಗಳಾಗಿರುವುದರಿಂದ, ಅವುಗಳ ಕಾರ್ಯಗಳಿಗೆ ಪ್ರಜಾಪ್ರಭುತ್ವದ ನ್ಯಾಯಸಮ್ಮತತೆಯ ಅಗತ್ಯವಿದೆ. ಪ್ರಜಾಸತ್ತಾತ್ಮಕ ನ್ಯಾಯಸಮ್ಮತತೆ ಎಂದರೆ ಒಂದು ಕೃತ್ಯವು ಅದರ ಹಿಂದಿರುವ ಜನರ ಇಚ್ಛಾಶಕ್ತಿಯ ಬಲದಿಂದಾಗಿ ಸಮರ್ಥನೀಯ ಮತ್ತು ಕಾನೂನುಬದ್ಧವಾಗಿರಬೇಕು. ಜನರು ಸಂಸತ್ತನ್ನು ಆಯ್ಕೆ ಮಾಡುತ್ತಾರೆ, ಹಾಗಾಗಿ ಅಲ್ಲಿ ಅಂಗೀಕರಿಸಿದ ಕಾನೂನುಗಳು ಮಾನ್ಯ ಮತ್ತು ಜಾರಿಯೋಗ್ಯವಾಗಿರುತ್ತವೆ. ಅದೇ ರೀತಿ, ಒಂದು ನಿರ್ದಿಷ್ಟ ಕಾರ್ಯವನ್ನು ನಿರ್ವಹಿಸಲು ಸರ್ಕಾರವು ಒಂದು ಸಂಸ್ಥೆಗೆ ಅಧಿಕಾರ ನೀಡಿದಾಗ, ಆ ಕೆಲಸವು ಸಹ ಪರೋಕ್ಷವಾಗಿ ಪ್ರಜಾಪ್ರಭುತ್ವ ನ್ಯಾಯಸಮ್ಮತತೆಯನ್ನು ಹೊಂದಿರುತ್ತದೆ. ಹೀಗಾಗಿ, ಸಾಂವಿಧಾನಿಕ ಸಂಸ್ಥೆಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ಪ್ರಜಾಪ್ರಭುತ್ವದ ನ್ಯಾಯಸಮ್ಮತತೆ ಹೊಂದಿರುವ ಸದಸ್ಯರು ಮುನ್ನಡೆಸಬೇಕಾಗುತ್ತದೆ.

ಸಾಂವೈಧಾನಿಕ ಸಂಸ್ಥೆಗಳು ಸಾಂಸ್ಥಿಕ ರೂಪದಲ್ಲಿ ಪ್ರಜಾಪ್ರಭುತ್ವದ ಅಡಿಪಾಯವಾಗಿವೆ. ಪ್ರಜಾಪ್ರಭುತ್ವದ ಕಾರ್ಯವಿಧಾನಕ್ಕೆ ಅಗತ್ಯವಾದ ಅಂಶಗಳನ್ನು ಸಂಸತ್ತು ರೂಪಿಸುತ್ತದೆ; ನ್ಯಾಯಾಂಗವು ಪ್ರಜಾಪ್ರಭುತ್ವದ ಮೂಲಭೂತ ಅಂಶಗಳನ್ನು ರಕ್ಷಣೆ ಮಾಡುತ್ತದೆ; ಮತ್ತೊಂದೆಡೆ ಚುನಾವಣಾ ಆಯೋಗವು ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳನ್ನು ಖಾತರಿಪಡಿಸುತ್ತದೆ. ಇದೇ ವೇಳೆ, ಕೇಂದ್ರ ನಾಗರಿಕ ಸೇವಾ ಆಯೋಗ(ಯುಪಿಎಸ್‌ಸಿ) ಹಾಗೂ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾದಂತಹ (ಸಿಎಜಿ) ಸಂಸ್ಥೆಗಳು ಪ್ರಜಾಪ್ರಭುತ್ವದ ಆದರ್ಶಗಳನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಸವಾಲುಗಳನ್ನು ಎದುರಿಸಲು ಬಲವಾದ ಸಾಂವೈಧಾನಿಕ ಸಂಸ್ಥೆಗಳ ಉಪಸ್ಥಿತಿಯು ಭಾರತೀಯ ಪ್ರಜಾಪ್ರಭುತ್ವದ ಪಾಲಿಗೆ ನಿರ್ಣಾಯಕ ಅಂಶವಾಗಿದೆ. ಈ ಸಂಸ್ಥೆಗಳು ನಾಗರಿಕರ ಹಕ್ಕುಗಳನ್ನು ರಕ್ಷಿಸಲು, ಕಾನೂನು ನಿಯಮ ಪಾಲನೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ಉತ್ತೇಜಿಸಲು ಸಹಾಯ ಮಾಡಿವೆ.



Scanned with ACE Scanner

# ಆದಿತ್ಯ ಎಲ್–1 ಉಡಾವಣೆ



ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ – ಇಸ್ರೊ, ಆದಿತ್ಯ ಎಲ್ – 1 ನೌಕೆಯನ್ನು ಯಶಸ್ವಿಯಾಗಿ ಹಾರಿಬಿಟ್ಟಿದೆ. ಸೆಪ್ಟೆಂಬರ್ 2 ರಂದು ಶ್ರೀ ಹರಿಕೋಟಾದ ನೆಲೆಯಿಂದ ಪಿಎಸ್‌ಎಲ್‌ವಿಸಿ 57 ವಾಹಕದ ಮೂಲಕ ಆದಿತ್ಯ ಎಲ್ – 1 ನೌಕೆಯ ಉಡಾವಣೆ ನಡೆಸಲಾಯಿತು.


ಸೂರ್ಯನ ಕ್ರೋಮೊಸ್ಪಿಯರ್ ಹಾಗೂ ಕೊರೊನಾ ಸೇರಿದಂತೆ ಸೌರ ವಾತಾರವಣದ ಬಗ್ಗೆ ಅಧ್ಯಯನ ನಡೆಸುವುದು ಈ ನೌಕೆಯ ಉದ್ದೇಶ. ನೌಕೆ ಭೂಮಿಯಿಂದ ಸುಮಾರು ಒಂದೂವರೆ ದಶಲಕ್ಷ ಕಿ.ಮೀ. ದೂರದಲ್ಲಿ ಸತತ ಸೂರ್ಯ ಅಧ್ಯಯನಕ್ಕೆ ಸೂಕ್ತ ಸ್ಥಳವೆಂದು ಗುರುತಿಸಲಾದ ಸೂರ್ಯ–ಭೂಮಿ ವ್ಯವಸ್ಥೆಯ ಕಕ್ಷೆತಾಣ (L 1) ದಲ್ಲಿ ಕಾರ್ಯನಿರ್ವಹಿಸಲಿದೆ. ಈ ನೌಕೆ ನಾಲ್ಕು ದೂರ ಸಂವೇದಿ ಪೇಲೋಡ್ ಸೇರಿದಂತೆ ಒಟ್ಟು 7 ಪೇಲೋಡ್‌ಗಳನ್ನು ಹೊಂದಿದೆ. ನೌಕೆ ನಿಗದಿತ ತಾಣವನ್ನು ನಾಲ್ಕು ತಿಂಗಳಲ್ಲಿ ತಲುಪಲಿದೆ.

(ಮೂಲ : ಇಸ್ರೊ)



Scanned with ACE Scanner

# ಚಂದ್ರನ ಮೇಲ್ಮೈ ಮೇಲೆ ನವಿರಾಗಿ ಇಳಿದ ವಿಕ್ರಮ್

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ – ಇಸ್ರೊ, ಜುಲೈ 14 ರಂದು ಹಾರಿ ಬಿಟ್ಟಿದ್ದ ಚಂದ್ರಯಾನ – 3 ನೌಕೆಯ ಅಂಗವಾದ ವಿಕ್ರಮ್ ಲ್ಯಾಂಡರ್ ಅನ್ನು ಚಂದ್ರನ ಮೇಲೆ ನವಿರಾಗಿ ಇಳಸುವ ಮೂಲಕ ಇತಿಹಾಸ ಸೃಷ್ಟಿಸಿದೆ.

ಭೂಮಿಯಿಂದ ಹಾರಿ ಬಿಟ್ಟ ಈ ನೌಕೆ ಸುಮಾರು 40 ದಿನಗಳ ಯಾನದ ಬಳಿಕ ಆಗಸ್ಟ್ 23 ರ ಸಂಜೆ 6.04 ಕ್ಕೆ ಚಂದ್ರನ ದಕ್ಷಿಣ ಧ್ರುವದಲ್ಲಿ ನಿಗದಿಪಡಿಸಿದಂತೆ ಕರಾರುವಕ್ಕಾಗಿ ಇಳಿಯಿತು. ಈ ಐತಿಹಾಸಿಕ ಘಟನೆಯ ನೇರ ಪ್ರಸಾರವನ್ನು ಇಡೀ ಜಗತ್ತು ನಿಬ್ಬೆರಗಿನಿಂದ ವೀಕ್ಷಿಸಿತು. ಭಾರತದ ಈ ತಂತ್ರಜ್ಞಾನ ಮತ್ತು ವೈಜ್ಞಾನಿಕ ನೈಪುಣ್ಯಕ್ಕೆ ವಿಶ್ವ ಸಮುದಾಯ ಸಾಕ್ಷಿಯಾಯಿತು.

ಚಂದ್ರಗ್ರಹದ ಮೇಲೆ ಚಂದ್ರಯಾನ–3 ಯಶಸ್ವಿಯಾಗಿ ಇಳಿದ ನಂತರ ಪ್ರಧಾನಮಂತ್ರಿಯವರು ವಿಡಿಯೊ ಸಂವಾದ ಮೂಲಕ ಮಾಡಿದ ಭಾಷಣದ ಕನ್ನಡ ಅವತರಣಿಕೆ

ನನ್ನ ಪ್ರೀತಿಯ ಕುಟುಂಬದ ಸದಸ್ಯರೇ,

ನಮ್ಮ ಕಣ್ಣೆದುರೇ ಇಂತಹ ಇತಿಹಾಸ ನಿರ್ಮಾಣವಾಗುತ್ತಿರುವುದನ್ನು ಕಂಡಾಗ ಬದುಕು ಧನ್ಯವಾಗುತ್ತದೆ. ಅಂತಹ ಐತಿಹಾಸಿಕ ಘಟನೆಗಳು ರಾಷ್ಟ್ರದ ಪಾಲಿಗೆ ಶಾಶ್ವತ ದಾಖಲೆಯಾಗುತ್ತವೆ. ಈ ಕ್ಷಣ ಅವಿಸ್ಮರಣೀಯ. ಈ ಕ್ಷಣ ಅಭೂತಪೂರ್ವವಾಗಿದೆ. ಈ ಕ್ಷಣ ನವ ಭಾರತದ ವಿಜಯೋತ್ಸವವಾಗಿದೆ. ಈ ಕ್ಷಣ ಕಷ್ಟಗಳ ಸಾಗರವನ್ನು ದಾಟುವುದಾಗಿದೆ. ಈ ಕ್ಷಣವು ಗೆಲುವಿನ ಹಾದಿಯಲ್ಲಿ ಸಾಗುತ್ತಿದೆ. ಈ ಕ್ಷಣವು 1.4 ಶತಕೋಟಿ ಹೃದಯ ಬಡಿತಗಳ ಸಾಮರ್ಥ್ಯವನ್ನು ಹೊಂದಿದೆ. ಈ ಕ್ಷಣವು ಭಾರತದಲ್ಲಿ ಹೊಸ ಶಕ್ತಿ, ಹೊಸ ನಂಬಿಕೆ ಮತ್ತು ಹೊಸ ಪ್ರಜ್ಞೆಯನ್ನು ಸೂಚಿಸುತ್ತದೆ. ನಾವು ಭೂಮಿಯ ಮೇಲೆ ಪ್ರತಿಜ್ಞೆ ಮಾಡಿದ್ದೇವೆ





ಸಂಭ್ರಮ

# ಚಂದ್ರನ ಮೇಲೆ ಭಾರತದ ಛಾಪು



ಮತ್ತು ನಾವು ಅದನ್ನು ಚಂದ್ರಗ್ರಹದ ಮೇಲೆ ಪೂರೈಸಿದ್ದೇವೆ. ನಮ್ಮ ವೈಜ್ಞಾನಿಕ ಸಹೋದ್ಯೋಗಿಗಳಿಗೆ ಕೂಡ "ಭಾರತವು ಈಗ ಚಂದ್ರನ ಮೇಲಿದೆ" ಎಂದು ನಾನು ಹೇಳ ಬಯಸುತ್ತೇನೆ. ಇಂದು ನಾವು ಬಾಹ್ಯಾಕಾಶದಲ್ಲಿ ನವ ಭಾರತದ ಹೊಸ ಹಾರಾಟಕ್ಕೆ ಸಾಕ್ಷಿಯಾಗಿದ್ದೇವೆ.

ಸ್ನೇಹಿತರೇ,

ನಾನು ಪ್ರಸ್ತುತ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗವಹಿಸಲು ದಕ್ಷಿಣ ಆಫ್ರಿಕಾದಲ್ಲಿದ್ದೇನೆ. ಆದಾಗ್ಯೂ, ಪ್ರತಿಯೊಬ್ಬ ದೇಶವಾಸಿಗಳಂತೆ ನನ್ನ ಹೃದಯವೂ ಚಂದ್ರಯಾನ ಸಂಕಲ್ಪದತ್ತ ಕೇಂದ್ರೀಕೃತವಾಗಿತ್ತು. ಹೊಸ ಇತಿಹಾಸ ತೆರೆದುಕೊಳ್ಳುತ್ತಿದ್ದಂತೆ ಪ್ರತಿಯೊಬ್ಬ ಭಾರತೀಯನೂ ಸಂಭ್ರಮಾಚರಣೆಯಲ್ಲಿ ಮುಳುಗಿದ್ದು, ಪ್ರತಿ ಮನೆಯಲ್ಲೂ ಹಬ್ಬದ ಸಂಭ್ರಮ ಶುರುವಾಗಿದೆ. ಈ ಕ್ಷಣಕ್ಕಾಗಿ ವರ್ಷಗಟ್ಟಲೆ ಅವಿರತವಾಗಿ ಶ್ರಮಿಸಿದ ಚಂದ್ರಯಾನ ತಂಡ, ಇಸ್ರೋ ತಂಡ ಮತ್ತು ದೇಶದ ಎಲ್ಲಾ ವಿಜ್ಞಾನಿಗಳಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಉತ್ಸಾಹ, ಹುರುಪು, ಸಂತೋಷ ಮತ್ತು ಭಾವನೆಗಳಿಂದ ತುಂಬಿದ ಈ ಅದ್ಭುತ ಕ್ಷಣಕ್ಕಾಗಿ ನಾನು 140 ಕೋಟಿ ದೇಶವಾಸಿಗಳನ್ನು ಅಭಿನಂದಿಸುತ್ತೇನೆ!

ನನ್ನ ಕುಟುಂಬದ ಸದಸ್ಯರೇ,

ವಿಶ್ವದ ಯಾವುದೇ ದೇಶವು ಈ ತನಕ ತಲುಪಿಲ್ಲದ ಚಂದ್ರ ಗ್ರಹದ ದಕ್ಷಿಣ ಧ್ರುವವನ್ನು ನಮ್ಮ ವಿಜ್ಞಾನಿಗಳ ಕಠಿಣ ಪರಿಶ್ರಮ ಮತ್ತು ಪ್ರತಿಭೆಯ ಮೂಲಕ, ಭಾರತವು ತಲುಪಿದೆ. ಇದು ಐತಿಹಾಸಿಕ ವಿಜಯವಾಗಿದೆ.

ಸ್ನೇಹಿತರೇ,

ಈ ಸಂತೋಷದಾಯಕ ಸಂದರ್ಭದಲ್ಲಿ, ನಾನು ಪ್ರಪಂಚದ ಎಲ್ಲಾ ಜನರನ್ನು, ಪ್ರತಿಯೊಂದು ದೇಶ ಮತ್ತು ಪ್ರದೇಶದ ಎಲ್ಲಾ ಜನರನ್ನು, ಉದ್ದೇಶಿಸಿ ಮಾತನಾಡಲು ಬಯಸುತ್ತೇನೆ. ಭಾರತದ ಯಶಸ್ವಿ ಚಂದ್ರಯಾನ ಭಾರತಕ್ಕೆ ಮಾತ್ರ ಹೆಮ್ಮೆ ತರುವ ವಿಷಯವಲ್ಲ. ಭಾರತದ ಜಿ-20 ಅಧ್ಯಕ್ಷ ಸ್ಥಾನಕ್ಕೆ ಜಗತ್ತು ಸಾಕ್ಷಿಯಾಗುತ್ತಿರುವ ವರ್ಷವಿದು. ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ' ಎಂಬ ನಮ್ಮ ಸಂಕಲ್ಪವು ಜಗತ್ತಿನಾದ್ಯಂತ ಪ್ರತಿಧ್ವನಿಸುತ್ತಿದೆ. ನಾವು ಪ್ರತಿನಿಧಿಸುವ ಈ ಮಾನವ ಕೇಂದ್ರಿತ ಕಾರ್ಯವಿಧಾನವನ್ನು ಸಾರ್ವತ್ರಿಕವಾಗಿ ಸ್ವಾಗತಿಸಲಾಗಿದೆ. ನಮ್ಮ ಚಂದ್ರಗ್ರಹದ ಮಿಷನ್ ಕೂಡ ಅದೇ ಮಾನವ-ಕೇಂದ್ರಿತ ವಿಧಾನವನ್ನು ಆಧರಿಸಿದೆ. ಆದ್ದರಿಂದ, ಈ ಯಶಸ್ಸು ಎಲ್ಲಾ ಮಾನವೀಯತೆಗೆ ಸೇರಿದೆ.

ನನ್ನ ಕುಟುಂಬದ ಸದಸ್ಯರೇ,

ಚಂದ್ರಯಾನ ಮಿಷನ್‌ನ ಈ ಸಾಧನೆಯು ಚಂದ್ರಗ್ರಹದ ಕಕ್ಷೆಯ ಆಚೆಗೆ ಭಾರತದ ಪ್ರಯಾಣವನ್ನು ಮುನ್ನಡೆಸುತ್ತದೆ. ಭವಿಷ್ಯಕ್ಕಾಗಿ ನಾವು ಅನೇಕ ದೊಡ್ಡ ಮತ್ತು ಮಹತ್ವಾಕಾಂಕ್ಷೆಯ ಗುರಿಗಳನ್ನು ಹೊಂದಿದ್ದೇವೆ. ಶೀಘ್ರದಲ್ಲೇ, ಇಸ್ರೋ ಸೂರ್ಯನ ಆಳವಾದ ಅಧ್ಯಯನಕ್ಕಾಗಿ 'ಆದಿತ್ಯ ಎಲ್-1' ಮಿಷನ್ ಅನ್ನು ಪ್ರಾರಂಭಿಸಲಿದೆ. ಅದರ ಬೆನ್ನಲ್ಲೇ ಶುಕ್ರಗ್ರಹವೂ ಇಸ್ರೋದ ಕಾರ್ಯಸೂಚಿಯಲ್ಲಿದೆ. ಗಗನಯಾನ್ ಮಿಷನ್ ಮೂಲಕ, ದೇಶವು ತನ್ನ ಮೊದಲ ಮಾನವ ಸಹಿತ ಬಾಹ್ಯಾಕಾಶ ಯಾನಕ್ಕಾಗಿ ಶ್ರದ್ಧೆಯಿಂದ ತಯಾರಿ ನಡೆಸುತ್ತಿದೆ. ನಮ್ಮ ಸಾಧನೆಗಳಿಗೆ ಆಕಾಶವೇ ಮಿತಿಯಲ್ಲ ಎಂಬುದನ್ನು ಭಾರತ ಪದೇ ಪದೇ ಸಾಬೀತುಪಡಿಸುತ್ತಿದೆ.

ಸ್ನೇಹಿತರೇ,

ಸೋಲಿನಿಂದ ಪಾಠಗಳನ್ನು ತೆಗೆದುಕೊಳ್ಳುವ ಮೂಲಕ ವಿಜಯವನ್ನು ಹೇಗೆ ಸಾಧಿಸಲಾಗುತ್ತದೆ ಎಂಬುದನ್ನು ಈ ದಿನ ಸಂಕೇತಿಸುತ್ತದೆ. ಮತ್ತೊಮ್ಮೆ, ದೇಶದ ಎಲ್ಲಾ ವಿಜ್ಞಾನಿಗಳಿಗೆ ಹೃತ್ಪೂರ್ವಕ ಅಭಿನಂದನೆಗಳು ಮತ್ತು ಭವಿಷ್ಯದ ಕಾರ್ಯಾಚರಣೆಗಳಿಗೆ ಶುಭಾಶಯಗಳು! ಎಲ್ಲರಿಗೂ ತುಂಬಾ ತುಂಬಾ ಧನ್ಯವಾದಗಳು.

# ಇಸ್ರೋಗೆ ಪ್ರಧಾನ ಮಂತ್ರಿಗಳ ಭೇಟಿ





ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಬ್ರಿಕ್ಸ್ ಸಮಾವೇಶದ ನಂತರ ಆಗಸ್ಟ್ 26 ರಂದು ದಕ್ಷಿಣ ಆಫ್ರಿಕಾದಿಂದ ನೇರವಾಗಿ ಬೆಂಗಳೂರಿಗೆ ಆಗಮಿಸಿ ಇಸ್ರೊ ಪ್ರಧಾನ ಕಚೇರಿಗೆ ಭೇಟಿ ನೀಡಿ ವಿಜ್ಞಾನಿಗಳನ್ನು ಖುದ್ದಾಗಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಅವರು ಮೂರು ಪ್ರಕಟಣೆಗಳನ್ನು ಮಾಡಿದರು. 1. ಚಂದ್ರಯಾನ-2ರ ಲ್ಯಾಂಡರ್ ಬಿಂದುವಿಗೆ ತಿರಂಗಾ ಎಂದು ನಾಮಕರಣ, 2. ಚಂದ್ರಯಾನ-3ರ ಲ್ಯಾಂಡರ್ ಇಳಿದ ಬಿಂದುವಿಗೆ ಶಿವಶಕ್ತಿ ಎಂದು ನಾಮಕರಣ ಹಾಗೂ 3. ಆಗಸ್ಟ್ 23 ರಾಷ್ಟ್ರೀಯ ಬಾಹ್ಯಾಕಾಶ ದಿನವಾಗಿ ಘೋಷಣೆ.




## ವಿಶ್ವ ಅಥ್ಲೆಟಿಕ್ಸ್ : ನೀರಜ್ ಚೋಪ್ರಗೆ ಚಿನ್ನ

ಬುಧಪೇಸ್ಟ್‌ನಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್ ಶಿಪ್‌ನಲ್ಲಿ ಭಾರತದ ನೀರಜ್ ಚೋಪ್ರ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಪುರುಷರ ಜವೆಲಿನ್ ಥ್ರೋ ಸ್ಪರ್ಧೆಯಲ್ಲಿ ನೀರಜ್ ಚೋಪ್ರ ಅವರು 88.17 ಮೀಟರ್ ದೂರ ಎಸೆದು ಸ್ವರ್ಣ ಪದಕಕ್ಕೆ ಪಾತ್ರರಾದರು.



Scanned with ACE Scanner

# ಮಹಿಳಾ ಸಬಲೀಕರಣ: ಸುಧಾರಣಾ ಕ್ರಮಗಳು

* ರೇಖಾ ಶರ್ಮಾ


**ಲಿಂಗ ಸಮಾನತೆ ಸಾಧಿಸಲು ಹಿಂಸಾಚಾರದ ವಿರುದ್ಧ ಹೋರಾಟ, ಬಾಲ್ಯ ವಿವಾಹದ ಅಂತ್ಯ, ರಾಜಕೀಯ ಮತ್ತು ಆರ್ಥಿಕ ಸಬಲೀಕರಣಕ್ಕೆ ಉತ್ತೇಜನ, ಲೈಂಗಿಕ ಮತ್ತು ಸಂತಾನೋತ್ಪತ್ತಿ ಆರೋಗ್ಯ ಹಕ್ಕುಗಳ ಸಂರಕ್ಷಣೆ, ಭೂಮಿ ಹಕ್ಕಿನ ರಕ್ಷಣೆ ಮತ್ತು ಲಿಂಗಾಧರಿತ ಪ್ರತಿಕ್ರಿಯಾ ಆಯವ್ಯಯಗಳು ನಿರ್ಣಾಯಕ ಹೆಜ್ಜೆಗಳಾಗಿವೆ. ಸರ್ಕಾರಗಳು, ನಾಗರಿಕ ಸಮಾಜ ಮತ್ತು ವ್ಯಕ್ತಿಗಳ ಸಂಘಟಿತ ಪ್ರಯತ್ನದಿಂದ ಮಾತ್ರ ಇನ್ನಷ್ಟು ಸಮ ಮತ್ತು ಮಹಿಳೆಯರನ್ನೊಳಗೊಂಡ ಪ್ರಪಂಚ ರೂಪಿಸಲು ಸಾಧ್ಯ. ಸುಪ್ರಿಂ ಕೋರ್ಟ್ ಇತ್ತೀಚೆಗೆ ಲಿಂಗಾಧರಿತ ಪೂರ್ವಾಗ್ರಹ ಪೀಡಿತ ಭಾವನೆಗಳ ಬಳಕೆ ದಮನದ ಕೈಪಿಡಿಯನ್ನು ಬಿಡುಗಡೆ ಮಾಡಿದೆ.**

ಪುರುಷರ ಸಬಲೀಕರಣ–ವಾದಲ್ಲಿ ವ್ಯಕ್ತಿಯ ಸಬಲೀಕರಣವಾಗುತ್ತದೆ ಎಂಬ ಮಾತಿದೆ. ಇದೀಗ ಸಮಾಜದಲ್ಲಿ ಮಹಿಳೆಯರ ಕೇಂದ್ರೀಕೃತ ಪಾತ್ರದಿಂದಾಗಿ ಮಹಿಳೆಯ ಸಬಲೀಕರಣದಿಂದ ಇಡೀ ಪೀಳಿಗೆಯ ಸಬಲೀಕರಣವಾಗಲಿದೆ ಎಂಬುದು ಎಲ್ಲರೂ ಒಪ್ಪಿಕೊಂಡ ಮಾತಾಗಿದೆ. ಪ್ರತಿ ಹಂತದಲ್ಲೂ ಲಿಂಗ ತಾರತಮ್ಯ ತೊಡೆದುಹಾಕಲು ರಾಷ್ಟ್ರೀಯ ಮಹಿಳಾ ಆಯೋಗ ಕಾರ್ಯಪ್ರವೃತ್ತವಾಗಿದೆ. ಅಷ್ಟೇ ಅಲ್ಲ, ಪೂರ್ವಾಗ್ರಹಪೀಡಿತರಾಗದೇ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತಾಗಲು ಮಹಿಳೆಗೆ ಸಮಾನ, ಮುಕ್ತ ಮತ್ತು ನ್ಯಾಯಸಮ್ಮತ ಅವಕಾಶ ನೀಡುವ ಸಂಸ್ಕೃತಿಯನ್ನು ಪ್ರತಿ ಹಂತದಲ್ಲೂ ಬೆಳೆಸುವ ಅಗತ್ಯವಿದೆ. ಇದು ಭಾರತ ಸರ್ಕಾರದ ಮುನ್ನೋಟ ಮತ್ತು ನೀತಿಗಳಿಗೆ ಪೂರಕವಾಗಿದೆ. ಭಾರತೀಯ ಸಂವಿಧಾನದಡಿಯಲ್ಲಿನ ಎಲ್ಲಾ ನ್ಯಾಯ ಸಮ್ಮತ ಹಕ್ಕುಗಳು, ಬದ್ಧತೆಗಳು, ಖಾತರಿಗಳು ಮತ್ತು ಸುರಕ್ಷತೆಗಳು ಮಹಿಳೆಯರಿಗೆ ಸಿಗುವಂತೆ ಮಾಡುವಲ್ಲಿ ಆಯೋಗ ಶ್ರಮಿಸುತ್ತಿದೆ.


ಮಹಿಳೆಯರನ್ನೂ ಸಮಾನ ಪಾಲುದಾರರನ್ನಾಗಿಸಲು ಸಬಲೀಕರಣದತ್ತ ಗಮನಹರಿಸುತ್ತಾ, ಕೌಟುಂಬಿಕ ಮತ್ತು ವೃತ್ತಿಪರ ನಿಂದನೆ ನಿವಾರಿಸುತ್ತಾ, ಅವರ ಭದ್ರತೆ ಖಾತರಿಪಡಿಸುತ್ತಾ, 21 ನೇ ಶತಮಾನದಲ್ಲಿ ಮಹಿಳೆಯರು ಬೀರಬಹುದಾದ ಪ್ರಭಾವವನ್ನು ಪೋಷಿಸುತ್ತಾ, ಪ್ರಸ್ತುತ ಸರ್ಕಾರ ಮಹತ್ವದ ಹೆಜ್ಜೆಯನ್ನಿರಿಸಿದೆ. ಕಲ್ಯಾಣ ಮತ್ತು ಹಣಕಾಸು ಯೋಜನೆಗಳ ಅನುಷ್ಠಾನದ ಮೂಲಕ, ಕಾನೂನು ತಿದ್ದುಪಡಿ ಮತ್ತು ಹೊಸ ಕಾನೂನುಗಳ ಅನುಷ್ಠಾನದ ಮೂಲಕ, ಭಾರತೀಯ ನಾರಿಯರನ್ನು ಅಸಾಧಾರಣ ಶಕ್ತಿಯನ್ನಾಗಿ ಪರಿವರ್ತಿಸುವಲ್ಲಿ ಸರ್ಕಾರ ದೃಢ ಬದ್ಧತೆ ತೋರಿದೆ. ಹತ್ತು ಕಲ್ಯಾಣ ಯೋಜನೆಗಳ ಯಶಸ್ವಿ ಅನುಷ್ಠಾನ, ಮೂರು ತಿದ್ದುಪಡಿಗಳ ಜಾರಿ ಮತ್ತು ನಾಲ್ಕು ಹೊಸ ಕಾನೂನುಗಳ ಅನುಮೋದನೆಗಳು ಮಹಿಳೆಯ ಪ್ರಗತಿಗೆ ದಾರಿ ಮಾಡಿಕೊಟ್ಟಿದ್ದು, ಇವುಗಳು ಸರ್ಕಾರದ ಈ ಬದ್ಧತೆಯನ್ನು ಖಾತರಿಪಡಿಸಿವೆ. ಭಾರತದಲ್ಲಿ ಕಳೆದ 10 ವರ್ಷಗಳಲ್ಲಿ ಮಹಿಳೆಯರ ಹಕ್ಕುಗಳಿಗೆ ಸಂಬಂಧಿಸಿದ ಮಹತ್ವದ ಮಸೂದೆಗಳಿಗೆ ಸಂಸತ್ತಿನ ಅನುಮೋದನೆ ದೊರೆತಿದೆ.

### ಲಿಂಗ ಅಸಮಾನತೆ

ಹಿಂಸಾಚಾರ, ತಾರತಮ್ಯ, ಸೀಮಿತ ಅವಕಾಶ ಮೊದಲಾದ ಕಾರಣಗಳಿಂದಾಗಿ ಜಾಗತಿಕವಾಗಿ ಲಿಂಗ ಸಮಾನತೆ ಖಾತರಿಪಡಿಸುವಿಕೆ ಇನ್ನೂ ಅಗತ್ಯದ ವಿಚಾರವಾಗಿಯೇ ಉಳಿದಿದೆ. ಮಹಿಳಾ



ಉದ್ಯಮ ಆರಂಭಿಸಲು, ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಮತ್ತು ಸ್ವಯಂ ಉದ್ಯೋಗಾವಕಾಶ ಉತ್ತೇಜಿಸಲು 10 ಲಕ್ಷ ರೂಪಾಯಿಯಿಂದ ಒಂದು ಕೋಟಿ




* ಅಧ್ಯಕ್ಷರು, ರಾಷ್ಟ್ರೀಯ ಮಹಿಳಾ ಆಯೋಗ, ನವದೆಹಲಿ. ಇಮೇಲ್: chairperson-ncw@nic.in



Scanned with ACE Scanner

**ಕಳೆದ 10 ವರ್ಷಗಳಲ್ಲಿ ಮಹಿಳೆಯರ ಹಕ್ಕುಗಳಿಗೆ ಸಂಬಂಧಿಸಿದಂತೆ ಮಹತ್ವದ ಕಾಯ್ದೆಗಳ ಜಾರಿ. ಪ್ರಮುಖ ಕಾಯ್ದೆಗಳು ಇಂತಿವೆ:**



- ಕೌಟುಂಬಿಕ ಹಿಂಸಾಚಾರದಿಂದ ಮಹಿಳೆಯರ ರಕ್ಷಣೆ ಕಾಯ್ದೆ, 2005
- ಬಾಲ್ಯ ವಿವಾಹ ತಡೆ ಕಾಯ್ದೆ, 2006
- ಮುಸ್ಲಿಂ ಮಹಿಳೆಯರ (ವಿವಾಹ ಹಕ್ಕುಗಳ ರಕ್ಷಣೆ) ಕಾಯ್ದೆ, 2019 (ತಕ್ಷಣದ ತ್ರಿವಳಿ ತಲಾಖ್ ಅಪರಾಧ)
- ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ತಿದ್ದುಪಡಿ) ಕಾಯ್ದೆ, 2019
- ವೈದ್ಯಕೀಯ ಗರ್ಭಪಾತ (ತಿದ್ದುಪಡಿ) ಕಾಯ್ದೆ, 2021
- ಸಹಾಯಕ ಸಂತಾನೋತ್ಪತ್ತಿ ತಂತ್ರಜ್ಞಾನ (ನಿಯಂತ್ರಣ) ಕಾಯ್ದೆ, 2020
- ತೃತೀಯ ಲಿಂಗಿಗಳ (ಹಕ್ಕುಗಳ ಸಂರಕ್ಷಣೆ) ಕಾಯ್ದೆ, 2019

ಸಬಲೀಕರಣಕ್ಕೆ ಮತ್ತು ಲಿಂಗ ಸಮಾನತೆ ಸಾಧಿಸಲು ತುರ್ತು ಕ್ರಾಂತಿಕಾರಕ ಕ್ರಮಗಳು ಅಗತ್ಯ ಎಂಬುದನ್ನು ಅಂಕಿಅಂಶಗಳು ಸೂಚಿಸುತ್ತಿವೆ. ಸಮಗ್ರ ಕಾನೂನು ಚೌಕಟ್ಟು, ಹೆಚ್ಚಿನ ಜಾಗೃತಿ ಕಾರ್ಯಕ್ರಮಗಳು, ಏಕಾಂಗಿಯರಿಗೆ ಬೆಂಬಲ ಒದಗಿಸುವಿಕೆ ಮೊದಲಾದವುಗಳ ಮೂಲಕ ಕೌಟುಂಬಿಕ ಹಿಂಸಾಚಾರವನ್ನು ನಿಯಂತ್ರಿಸುವಲ್ಲಿ ಸರ್ಕಾರಗಳು ಮತ್ತು ಸಮಾಜ, ಸಂಘಟಿತ ಪ್ರಯತ್ನ ಮಾಡುತ್ತಿವೆ. ಸಹಾಯವಾಣಿ, ಸುರಕ್ಷಿತ ಮನೆಗಳು ಮತ್ತು ಸಮಾಲೋಚನೆಗಳು ಸಂತ್ರಸ್ತರಿಗೆ ಬೆಂಬಲ ನೀಡುವಲ್ಲಿ ನಿರ್ಣಾಯಕ ಪಾತ್ರ ವಹಿಸಬಲ್ಲವಾಗಿದ್ದು ಈ ಮೂಲಕ ಹಿಂಸಾಚಾರದ ಸರಪಳಿಯನ್ನು ತೊಡೆದುಹಾಕಬಲ್ಲವಾಗಿವೆ.

### ಬಾಲ್ಯ ವಿವಾಹಕ್ಕೆ ಇತಿಶ್ರೀ

ಬಾಲ್ಯ ವಿವಾಹವು ಹೆಣ್ಣು ಮಕ್ಕಳ ಬಾಲ್ಯ, ಶಿಕ್ಷಣ ಮತ್ತು ಭವಿಷ್ಯವನ್ನು ಕಸಿದುಕೊಳ್ಳುತ್ತದೆ. ಹೀಗಾಗಿ ವಿವಾಹಕ್ಕೆ ಕನಿಷ್ಠ ವಯೋಮಿತಿ ನಿಗದಿ ಮಾಡುವ, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡುವ ಮತ್ತು ಎಳೆ ವಯಸ್ಸಿನಲ್ಲಿಯೇ ಮದುವೆ ಮಾಡುವುದರಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳ ಅನುಷ್ಠಾನ ಮತ್ತು ನಿಯಮಾನುಷ್ಠಾನದ ಬಗ್ಗೆ ಗಮನಹರಿಸುವ ಪ್ರಯತ್ನಗಳು ನಡೆಯಬೇಕು. ಸಮುದಾಯ ಪಾಲ್ಗೊಳ್ಳುವಿಕೆ, ಗುರಿಯಧರಿತ ಮಧ್ಯಸ್ಥಿಕೆ ಮತ್ತು ಆರ್ಥಿಕ ಸಬಲೀಕರಣ ಕಾರ್ಯಕ್ರಮಗಳು ಹೆಣ್ಣು ಮಕ್ಕಳು ಮತ್ತು ಅವರ ಕುಟುಂಬ ಸೂಕ್ತ ಆಯ್ಕೆ ಮಾಡಲು ಪ್ರೇರಣೆ ನೀಡಬಲ್ಲವಾಗಿವೆ ಮತ್ತು ವಂಶಪಾರಂಪರ್ಯ ಬಡತನವನ್ನು ನಿರ್ಮೂಲನೆ ಮಾಡಬಲ್ಲವಾಗಿದೆ.

### ರಾಜಕೀಯ ಸಬಲೀಕರಣ

ಪ್ರಗತಿಯ ಹೊರತಾಗಿಯೂ, ರಾಜಕೀಯದಲ್ಲಿ ಮಹಿಳೆಯರ ಪ್ರಾತಿನಿಧ್ಯ ಇನ್ನೂ ಕಡಿಮೆಯೇ ಇದೆ. ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಿಸಲು ಸರ್ಕಾರ ಮಹಿಳಾ ಮೀಸಲು ಹೆಚ್ಚು ಮಾಡುವುದು ಸೇರಿದಂತೆ ಅನೇಕ ಸಕಾರಾತ್ಮಕ ನೀತಿನಿರೂಪಣೆಗಳನ್ನು ಜಾರಿಗೆ ತಂದಿದೆ. ಮಹಿಳಾ ಅಭ್ಯರ್ಥಿಗಳ ನಾಮನಿರ್ದೇಶನಕ್ಕೆ ರಾಜಕೀಯ ಪಕ್ಷಗಳಿಗೆ ಪ್ರೋತ್ಸಾಹ, ನಾಯಕತ್ವ ತರಬೇತಿ ಮತ್ತು ವ್ಯವಸ್ಥಿತ ತಡೆಗೋಡೆಗಳಿಗೆ ಪರಿಹಾರ ಕಂಡುಕೊಂಡಲ್ಲಿ ರಾಷ್ಟ್ರೀಯ ಸಂಸತ್ತು ಮತ್ತು ಸ್ಥಳೀಯ ಆಡಳಿತದಲ್ಲಿ ಮಹಿಳೆಯರು ಸಮಾನ ಪ್ರಾತಿನಿಧ್ಯ ಹೊಂದಲು ಸಾಧ್ಯವಾಗಬಹುದಾಗಿದೆ.

### ಆರ್ಥಿಕ ಸಬಲೀಕರಣ

ಉದ್ಯೋಗದಲ್ಲಿ ಲಿಂಗಾನುಪಾತದ ಅಂತರ ಕಡಿಮೆ ಮಾಡುವುದು ಮತ್ತು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಉತ್ತೇಜನ ನೀಡುವುದು ನಿರ್ಣಾಯಕ ಅಂಶವಾಗಿದೆ. ಸರ್ಕಾರಗಳು ಮತ್ತು ಉದ್ಯಮಗಳು, ಸಮಾನ ಕೆಲಸಕ್ಕೆ ಸಮಾನ ವೇತನಕ್ಕೆ ಆದ್ಯತೆ ನೀಡಬೇಕಿದೆ. ಮಾತೃತ್ವ ರಜೆ ಮತ್ತು ಶಿಶುಪಾಲನಾ ನೀತಿಗಳನ್ನು ಜಾರಿಗೆ ತರಬೇಕಿದೆ ಮತ್ತು ಮಹಿಳೆಯರಿಗೆ ಹಣಕಾಸು ಮತ್ತು ಉದ್ಯಮಶೀಲತ್ವದೆಡೆ ತರಬೇತಿ ಮತ್ತು ಪ್ರವೇಶ ನೀಡಬೇಕಿದೆ. ಪಾರಂಪರಿಕವಾಗಿ ಪುರುಷರ ಪ್ರಾಬಲ್ಯವಿರುವ ವಲಯಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಉತ್ತೇಜನ ನೀಡುವುದು ಮತ್ತು ವೃತ್ತಿಯಲ್ಲಿ ಮುನ್ನಡೆಗಾಗಿ ಅಡೆತಡೆಗಳನ್ನು ನಿವಾರಿಸುವುದು, ಕೆಲಸದ ಸ್ಥಳದಲ್ಲಿ ಲಿಂಗ ಸಮಾನತೆ ಸಾಧಿಸುವೆಡೆಗೆ ಪೂರಕವಾಗಬಲ್ಲದಾಗಿದೆ.

### ಲೈಂಗಿಕ ಮತ್ತು ಸಂತಾನೋತ್ಪತ್ತಿ ಆರೋಗ್ಯ ಮತ್ತು ಹಕ್ಕುಗಳು

ಮಹಿಳೆಯರ ಸ್ವಾಯತ್ತತೆಗೆ ಮತ್ತು ಸೌಖ್ಯಕ್ಕೆ ಸಮಗ್ರ ಲೈಂಗಿಕ ಮತ್ತು ಸಂತಾನೋತ್ಪತ್ತಿ ಆರೋಗ್ಯ ಸೇವೆ ಖಾತರಿಪಡಿಸುವುದು ನಿರ್ಣಾಯಕವಾಗಿದೆ. ಸಮಗ್ರ ಲೈಂಗಿಕ ಶಿಕ್ಷಣ, ಕುಟುಂಬ ಯೋಜನಾ ಸೇವೆಗಳು ಮತ್ತು ಕಾನೂನಾತ್ಮಕ ಸುರಕ್ಷಿತ ಗರ್ಭಪಾತ ಸೇವೆಗಳಿಗೆ ಸರ್ಕಾರ ಆದ್ಯತೆ ನೀಡಬೇಕಿದೆ. ಇದರ ಜೊತೆಗೆ, ಆರೋಗ್ಯ ಮೂಲಸೌಕರ್ಯ ವಲಯದಲ್ಲಿ ಹೂಡಿಕೆ ಮತ್ತು ಗರ್ಭಧಾರಣೆ ಸಂಬಂಧಿತ ಆರೋಗ್ಯದ ಸುತ್ತ ಹರಡಿರುವ ಕಳಂಕ ಎಂಬ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವುದರಿಂದ ಅನಗತ್ಯ ಗರ್ಭಧಾರಣೆ ಪ್ರಕರಣಗಳು ಕಡಿಮೆಯಾಗಲಿದ್ದು ಮಹಿಳೆಯರು ತಮ್ಮ ದೇಹ ಮತ್ತು ಭವಿಷ್ಯದ ಬಗ್ಗೆ ದೃಢ ನಿರ್ಧಾರ ಕೈಗೊಳ್ಳಲು ಸಾಧ್ಯವಾಗಲಿದೆ.

### ಭೂಮಿ ಹಕ್ಕುಗಳು

ಮಹಿಳೆಯರ ಭೂಮಿ ಒಡೆತನದ ಹಕ್ಕು ಸಂರಕ್ಷಿಸುವುದು ಅವರ ಆರ್ಥಿಕ ಸಬಲೀಕರಣಕ್ಕೆ ಮತ್ತು ಒಟ್ಟಾರೆ ಅಭಿವೃದ್ಧಿಗೆ ಮೂಲಭೂತ ಅಗತ್ಯವಾಗಿದೆ. ಭೂಮಿ, ಆಸ್ತಿ ಹಕ್ಕು ಮತ್ತು ಪಿತ್ರಾರ್ಜಿತ ಕಾನೂನುಗಳಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ನೀಡುವ ಶಾಸನವನ್ನು ಸರ್ಕಾರಗಳು ಜಾರಿಗೆ ತರಬೇಕು. ಭೂ ಹಿಡುವಳಿ ವ್ಯವಸ್ಥೆ ಬಲವರ್ಧನೆ, ಕಾನೂನು ನೆರವು ಮತ್ತು ಮಹಿಳಾ ಒಡೆತನದ ಭೂಮಿಗೆ ಉತ್ತೇಜನ ನೀಡುತ್ತಾ ಲಿಂಗ ಸಮಾನತೆ ಮತ್ತು ಬಡತನ ನಿರ್ಮೂಲನೆಗೆ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕಿದೆ.




Scanned with ACE Scanner

### ಲಿಂಗಾಧರಿತ ಆಯವ್ಯಯ

ಲಿಂಗ ಸಮಾನತೆ ಖಾತರಿಪಡಿಸಲು, ಸಾರ್ವಜನಿಕ ಹಂಚಿಕೆ ವ್ಯವಸ್ಥೆಯಲ್ಲಿ ಲಿಂಗ ಸಮಾನತೆಯ ನಿಗಾ ಇಡುವ ಸಮಗ್ರ ವ್ಯವಸ್ಥೆಯನ್ನು ಜಾರಿಗೆ ತರಬೇಕಿದೆ. ಮಹಿಳೆಯರು ಎದುರಿಸುವ ಸವಾಲುಗಳಿಗೆ ಮತ್ತು ಅವರ ನಿರ್ದಿಷ್ಟ ಅಗತ್ಯಗಳಿಗಾಗಿ ಸರ್ಕಾರಗಳು ಅಗತ್ಯ ಸಂಪನ್ಮೂಲಗಳನ್ನು ಹಂಚಿಕೆ ಮಾಡುವ ಜೊತೆಗೆ ಅವುಗಳ ಪರಿಣಾಮಕಾರಿ ಬಳಕೆಯ ಬಗ್ಗೆಯೂ ನಿಗಾ ವಹಿಸಬೇಕಿದೆ. ಪಾರದರ್ಶಕ ಮತ್ತು ಬದ್ಧ ವ್ಯವಸ್ಥೆಯು ಲಿಂಗ ಸಮಾನತೆಯ ಗುರಿ, ಪ್ರಗತಿಯೆಡೆಗೆ ಸಾಗುವುದನ್ನು ಖಾತರಿಪಡಿಸುತ್ತದೆ.

### ಉಪಸಂಹಾರ

ಮಹಿಳೆಯರು ಜಾಗತಿಕವಾಗಿ ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಸಮಗ್ರ ಸಾಮಾಜಿಕ ಸುಧಾರಣಾ ಕ್ರಮಗಳ ತುರ್ತು ಅಗತ್ಯವಿದೆ ಎಂಬುದನ್ನು ಅಂಕಿಅಂಶಗಳು ಸಾರಿ ಹೇಳಿವೆ. ಹಿಂಸಾಚಾರ ನಿಗ್ರಹ, ಬಾಲ್ಯ ವಿವಾಹ ಅಂತ್ಯ ಮತ್ತು ಸ್ತ್ರೀ ಜನನಾಂಗಗಳ ಊನಗೊಳಿಸುವಿಕೆಗೆ ತಡೆ, ರಾಜಕೀಯ ಮತ್ತು ಆರ್ಥಿಕ ಸಬಲೀಕರಣಕ್ಕೆ ಉತ್ತೇಜನ, ಲೈಂಗಿಕ ಮತ್ತು ಸಂತಾನೋತ್ಪತ್ತಿ ಆರೋಗ್ಯ ಹಕ್ಕುಗಳ ಹಿತರಕ್ಷಣೆ, ಭೂಮಿ ಹಕ್ಕುಗಳ ಸಂರಕ್ಷಣೆ ಮತ್ತು ಲಿಂಗಾಧರಿತ ಆಯವ್ಯಯ ಅನುಷ್ಠಾನಗಳು ಲಿಂಗ ಸಮಾನತೆ ಖಾತರಿಪಡಿಸುವಲ್ಲಿ ನಿರ್ಣಾಯಕ ಹೆಜ್ಜೆಗಳಾಗಿವೆ. ಸರ್ಕಾರಗಳು, ನಾಗರಿಕ ಸಮಾಜ ಮತ್ತು ವ್ಯಕ್ತಿಗಳನ್ನೊಳಗೊಂಡಂತೆ ಸಂಘಟಿತ ಪ್ರಯತ್ನದ ಮೂಲಕ ನಾವು ಮಹಿಳೆಯರನ್ನು ಇನ್ನಷ್ಟು ಒಳಗೊಂಡ ಸಮಸಮಾಜ ರೂಪಿಸಬಹುದಾಗಿದೆ.






## ಜೀವನ ಪರಿವರ್ತನೆ, ಮಹಿಳೆಯರ ಸಬಲೀಕರಣ

* **ಪ್ರಧಾನಮಂತ್ರಿ ಉಜ್ವಲ ಯೋಜನೆಯಡಿ** ಬಡತನರೇಖೆಗಿಂತ ಕೆಳಗಿರುವ ಕುಟುಂಬಗಳ **9.4 ಕೋಟಿಗೂ ಹೆಚ್ಚು ಮಹಿಳೆಯರಿಗೆ ಉಚಿತ ಅಡುಗೆ ಅನಿಲ** ಸಂಪರ್ಕ
* ಜೈವಿಕ ಇಂಧನಗಳಾದ ಸೌದೆ ಮತ್ತು ಒಣ ಸಗಣಿಗಳ ಬಳಕೆ ಹೊಗೆಯಿಂದ ಬಿಡುಗಡೆ
* **ಜಲ್‌ಜೀವನ್ ಮಿಷನ್ ಅಡಿಯಲ್ಲಿ 7 ಕೋಟಿಗೂ ಹೆಚ್ಚು ಗ್ರಾಮೀಣ ಕುಟುಂಬ**ಗಳಿಗೆ ನಲ್ಲಿ ನೀರು ಸಂಪರ್ಕ
* **ತ್ರಿವಳಿ ತಲಾಖ್ ಪ್ರಕರಣಗಳು ಶೇಕಡ 80** ರಷ್ಟು ಇಳಿಮುಖ

* **ಬೇಟಿ ಬಚಾವೋ, ಬೇಟಿ ಪಢಾವೋ** : 2015ರಲ್ಲಿ ಜಾರಿಗೆ ತಂದ ಈ ಉಪಕ್ರಮ, ಕುಸಿಯುತ್ತಿರುವ ಹೆಣ್ಣು ಮಕ್ಕಳ ಜನನ ಪ್ರಮಾಣ ಸಮಸ್ಯೆ ನಿವಾರಿಸುವ ಮತ್ತು ಬಾಲಕಿಯರ ಶಿಕ್ಷಣ ಮತ್ತು ಕಲ್ಯಾಣ ಉತ್ತೇಜನದ ಗುರಿ ಹೊಂದಿದೆ.

* **ಪ್ರಧಾನಮಂತ್ರಿ ಮಾತೃ ವಂದನಾ ಯೋಜನಾ (ಪಿಎಂಎಂವಿವೈ)** : 2017ರಲ್ಲಿ ಜಾರಿಯಾದ ಈ ಮಾತೃತ್ವ ಸೌಲಭ್ಯ ಯೋಜನೆಯು, ಗರ್ಭಧಾರಣೆ ಮತ್ತು ಶಿಶು ಜನನದ ಸಮಯದಲ್ಲಿ ಸುಧಾರಿತ ಆರೋಗ್ಯ ಮತ್ತು ಪೌಷ್ಟಿಕಾಂಶ ದೊರೆಯುವಂತಾಗಲು ಗರ್ಭಿಣಿಯರಿಗೆ ಮತ್ತು ಬಾಣಂತಿಯರಿಗೆ ಹಣಕಾಸು ನೆರವು ಒದಗಿಸುತ್ತದೆ.

* **ಮಹಿಳಾ ಇ-ಹಾತ್** : ಮಹಿಳಾ ಉದ್ಯಮಿಗಳು ಮತ್ತು ಕರಕುಶಲಕರ್ಮಿಗಳಿಗೆ ಅವರವರ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೆ ವೇದಿಕೆ ಒದಗಿಸುವಂತಾಗಲು 2016ರಲ್ಲಿ ಈ ಆನ್‌ಲೈನ್ ಪ್ಲಾಟ್‌ಫಾರಂ ಅನಾವರಣಗೊಳಿಸಲಾಯಿತು. ಇದು ಹೆಚ್ಚಿನ ಗ್ರಾಹಕರನ್ನು ತಲುಪಲು ಮಹಿಳೆಯರಿಗೆ ಡಿಜಿಟಲ್ ಮಾರುಕಟ್ಟೆಯ ಸ್ಥಳಾವಕಾಶ ಒದಗಿಸಲಿದೆ ಮತ್ತು ಈ ಮೂಲಕ ಅವರ ವ್ಯಾಪಾರ ವಹಿವಾಟಿಗೆ ಉತ್ತೇಜನ ದೊರೆಯಲು ಕೂಡ ಸಹಕಾರಿಯಾಗಲಿದೆ.

* **ಉಜ್ವಲ ಯೋಜನೆ** : 2016 ರಲ್ಲಿ ಅನಾವರಣಗೊಂಡ ಈ ಯೋಜನೆಯಡಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಮಹಿಳೆಯರಿಗೆ ಉಚಿತ ಅಡುಗೆ ಅನಿಲ (ಎಲ್‌ಪಿಜಿ) ಸಂಪರ್ಕ ಒದಗಿಸಲಾಗುತ್ತದೆ. ಈ ಮೂಲಕ ಶುದ್ಧ ಇಂಧನ ದೊರೆತು, ಆಂತರಿಕ ವಾಯು ಮಾಲಿನ್ಯ ನಿಯಂತ್ರಣವಾಗಿ, ಮಹಿಳೆಯರ ಆರೋಗ್ಯ ಸುಧಾರಿಸುವ ಗುರಿ ಹೊಂದಲಾಗಿದೆ.

* **ಸ್ಟ್ಯಾಂಡ್ ಅಪ್ ಇಂಡಿಯಾ:** 2016 ರಲ್ಲಿ ಜಾರಿಗೆ ಬಂದ ಈ ಯೋಜನೆಯು ಮಹಿಳೆಯರು ಮತ್ತು ಪರಿಶಿಷ್ಟ ಜಾತಿ ಅಥವಾ ಪಂಗಡದ ವ್ಯಕ್ತಿಗಳಲ್ಲಿ ಉದ್ಯಮಶೀಲತ್ವವನ್ನು ಪ್ರೋತ್ಸಾಹಿಸುತ್ತದೆ. ಹಸಿರುವಲಯ




Scanned with ACE Scanner




- ಲಿಂಗಾನುಪಾತದಲ್ಲಿ ಮಹತ್ವದ ಬದಲಾವಣೆ:
- 11 ಸ್ಟಾರ್ಟ್‌ಅಪ್‌ಗಳ ಪೈಕಿ 5ರಲ್ಲಿ ಮಹಿಳಾ ನೇತೃತ್ವ, ಕನಿಷ್ಠ ಒಬ್ಬ ಮಹಿಳಾ ನಿರ್ದೇಶಕಿ
- ಭಾರತದಲ್ಲಿ ಶೇಕಡ 15 ರಷ್ಟು ವಾಣಿಜ್ಯ ಪೈಲಟ್‌ಗಳು ಮಹಿಳೆಯರು
- 2019ರ ಚುನಾವಣೆಯಲ್ಲಿ ಪುರುಷರಿಗಿಂತ ಹೆಚ್ಚಿನ ಸಂಖ್ಯೆಯ ಮಹಿಳೆಯರಿಂದ ಮತ ಚಲಾವಣೆ
- ಮಹಿಳಾ ಸಚಿವರಿಂದ ಸರ್ಕಾರದ ಪ್ರಮುಖ ಖಾತೆಗಳ ನಿರ್ವಹಣೆ

ರೂಪಾಯಿವರೆಗೆ ಈ ಯೋಜನೆಯಡಿ ಸಾಲಸೌಲಭ್ಯವನ್ನು ಬ್ಯಾಂಕ್‌ಗಳು ಒದಗಿಸುತ್ತವೆ.

* **ಪ್ರಧಾನಮಂತ್ರಿ ಕೌಶಲ ವಿಕಾಸ ಯೋಜನೆ (ಪಿಎಂಕೆವಿವೈ)** : ಇದು ಕೇವಲ ಮಹಿಳೆಯರಿಗೆ ಮಾತ್ರ ಮೀಸಲಿರುವ ಯೋಜನೆಯಲ್ಲ. ಆದಾಗ್ಯೂ 2015 ರಲ್ಲಿ ಜಾರಿಗೆ ಬಂದ ಈ ಕೌಶಲ್ಯಾಭಿವೃದ್ಧಿ ಯೋಜನೆಯು, ಉದ್ಯೋಗಾರ್ಹತೆಗಾಗಿ ಉದ್ಯಮಾಧಾರಿತ ತರಬೇತಿ ನೀಡುವ ಗುರಿ ಹೊಂದಿದೆ. ವಿವಿಧ ವಲಯಗಳಲ್ಲಿ ಕೌಶಲ್ಯಾಧರಿತ ತರಬೇತಿ ನೀಡಿರುವುದರಿಂದ ಅನೇಕ ಮಹಿಳೆಯರಿಗೆ ಅನುಕೂಲವಾಗಿದೆ.




ಮಹಿಳೆಯರ ಸಬಲೀಕರಣ ಉತ್ತೇಜನ, ಆರೋಗ್ಯ ರಕ್ಷಣೆ, ಉದ್ಯಮಶೀಲತ್ವ ಮತ್ತು ಕೌಶಲ್ಯಾಭಿವೃದ್ಧಿಗಾಗಿ ಕಳೆದೊಂದು ದಶಕದಲ್ಲಿ ಸರ್ಕಾರ ಅನುಷ್ಠಾನಕ್ಕೆ ತಂದಿರುವ ಯೋಜನೆಗಳ ಕೆಲವು ಉದಾಹರಣೆಗಳಿವು. ಇದಲ್ಲದೇ ಮಹಿಳೆಯರ ಕಲ್ಯಾಣ, ಶಿಕ್ಷಣ ಮತ್ತು ಹಣಕಾಸು ಒಳಗೊಳ್ಳುವಿಕೆಗಾಗಿ ಆದ್ಯ ಗಮನ ನೀಡುವ, ಅನೇಕ ಕೇಂದ್ರ ಮತ್ತು ರಾಜ್ಯ ಮಟ್ಟದ ಯೋಜನೆಗಳೂ ಇವೆ.

ಕಳೆದೊಂದು ದಶಕದಲ್ಲಿ ಅನುಷ್ಠಾನಕ್ಕೆ ತರಲಾದ ಕೆಲವು ಸುಧಾರಣಾ ಕ್ರಮಗಳಿವು. ಕಳೆದ 10 ವರ್ಷಗಳಲ್ಲಿ ಶಾಸನ, ಸಾಮಾಜಿಕ ಕಾರ್ಯಕ್ರಮ ಮತ್ತು ಜಾಗೃತಿ ಕಾರ್ಯಕ್ರಮ ಸೇರಿದಂತೆ ವಿವಿಧ ಉಪಕ್ರಮಗಳ ಮೂಲಕ ಲಿಂಗ ಸಮಾನತೆ ಉತ್ತೇಜಿಸಲು ಮತ್ತು ಮಹಿಳೆಯರ ಹಕ್ಕುಗಳನ್ನು ರಕ್ಷಿಸಲು ಅನೇಕ ಪ್ರಯತ್ನಗಳನ್ನು ಮಾಡಲಾಗಿದೆ.

* **ಅಪರಾಧ ಕಾನೂನು (ತಿದ್ದುಪಡಿ) ಕಾಯ್ದೆ, 2013 (ನಿರ್ಭಯಾ ಕಾಯ್ದೆ)**: ಲೈಂಗಿಕ ಅಪರಾಧಗಳಿಗೆ ಸಂಬಂಧಿಸಿದಂತೆ ಈ ಕಾನೂನಿಗೆ 2013 ರಲ್ಲಿ ಮಹತ್ವದ ತಿದ್ದುಪಡಿಗಳನ್ನು ಮಾಡಲಾಯಿತು. ಮಹಿಳೆಯರ ಸುರಕ್ಷತೆ ಮತ್ತು ಸಶಕ್ತೀಕರಣಕ್ಕಾಗಿ ಸರ್ಕಾರ ನಿರ್ಭಯಾ ನಿಧಿ ಆರಂಭಿಸಿದೆ. ಮಹಿಳಾ ಸುರಕ್ಷತೆಗೆ ಸಂಬಂಧಿಸಿದ ಸಹಾಯವಾಣಿ, ಒನ್ ಸ್ಟಾಪ್ ಸೆಂಟರ್ ಸ್ಥಾಪನೆ, ಮೂಲಸೌಕರ್ಯ ಸುಧಾರಣೆಗಳಿಗೆ ನಿಧಿ ಮೂಲಕ ನೆರವು ಕಲ್ಪಿಸಲಾಗುತ್ತಿದೆ.

* **ಮಾತೃತ್ವ ಸೌಲಭ್ಯ (ತಿದ್ದುಪಡಿ) ಕಾಯ್ದೆ, 2017**: ಸಂಘಟಿತ ವಲಯಗಳಲ್ಲಿ ದುಡಿಯುವ ಮಹಿಳೆಯರ ಹೆರಿಗೆ ರಜೆ ಅವಧಿಯನ್ನು 12 ವಾರಗಳಿಂದ 26 ವಾರಗಳಿಗೆ ವಿಸ್ತರಿಸಿ 2017 ರಲ್ಲಿ ಈ ತಿದ್ದುಪಡಿ ಕಾಯ್ದೆ ಜಾರಿಗೆ ತರಲಾಯಿತು.

* **ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ತಿದ್ದುಪಡಿ) ಕಾಯ್ದೆ, 2019**: ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸಲು ಬಲ ನೀಡಲು ಈ ಕಾಯ್ದೆಗೆ 2019 ರಲ್ಲಿ ತಿದ್ದುಪಡಿ ತರಲಾಯಿತು.

* **ಮುಸ್ಲಿಂ ಮಹಿಳೆಯರ (ವೈವಾಹಿಕ ಹಕ್ಕುಗಳ ಸಂರಕ್ಷಣೆ) ಕಾಯ್ದೆ, 2019**: ಎಲ್ಲಾ ಮಹಿಳೆಯರಿಗೆ ಅನ್ವಯವಾಗದೇ ಇದ್ದರೂ, ತಕ್ಷಣದ ತ್ರಿವಳಿ ತಲಾಖ್ (ವಿಚ್ಛೇದನ) ವಿರುದ್ಧ ಮುಸ್ಲಿಂ ಮಹಿಳೆಯರಿಗೆ ಕಾನೂನಾತ್ಮಕ ರಕ್ಷಣೆ ನೀಡಲು ಕಳೆದ 10 ವರ್ಷಗಳಲ್ಲಿ ಜಾರಿಗೆ ತರಲಾದ ಪ್ರಮುಖ ತಿದ್ದುಪಡಿಯಾಗಿದೆ.

* **ಕಾರ್ಯಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಶೋಷಣೆ (ನಿಯಂತ್ರಣ, ನಿರ್ಬಂಧ ಮತ್ತು ನಿವಾರಣಾ) ಕಾಯ್ದೆ, 2013**: ಕಾರ್ಯಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯದ ದೂರುಗಳನ್ನು ನಿವಾರಿಸಲು ಮತ್ತು ಮಹಿಳೆಯರಿಗೆ ಸುರಕ್ಷಿತ ಕಾರ್ಯನಿರ್ವಹಣಾ ಪರಿಸರ ಖಾತರಿಪಡಿಸಲು ಕಾರ್ಯಸ್ಥಳಗಳಲ್ಲಿ ಆಂತರಿಕ ಸಮಿತಿ ಸ್ಥಾಪನೆ ಈ ಕಾಯ್ದೆಯಡಿ ಕಡ್ಡಾಯವಾಗಿದೆ.


ಭಾರತದಲ್ಲಿ ಮಹಿಳೆಯರ ಹಕ್ಕು ಮತ್ತು ಸಬಲೀಕರಣಕ್ಕೆ ಉತ್ತೇಜನ ನೀಡುವಲ್ಲಿ, ಲಿಂಗ ಸಮಾನತೆ ಪೋಷಿಸುವಲ್ಲಿ ಮತ್ತು ಅಸಮಾನತೆಗಳ ವಿರುದ್ಧ ಹೋರಾಡುವಲ್ಲಿ ಈ ಸುಧಾರಣಾ ಕ್ರಮಗಳು ನಿರ್ಣಾಯಕ ಪಾತ್ರ ವಹಿಸಿವೆ. ಆದಾಗ್ಯೂ, ಜೀವನದ ಎಲ್ಲಾ ಹಂತಗಳಲ್ಲೂ ಮಹಿಳೆಯರ ಹಕ್ಕುಗಳನ್ನು ಸಂಪೂರ್ಣವಾಗಿ ಎತ್ತಿ ಹಿಡಿಯುವ ಮತ್ತು ಗೌರವಿಸುವ ಸಮಾಜ ನಿರ್ಮಿಸುವಲ್ಲಿ ಶ್ರಮಿಸಬೇಕಿರುವುದು ಅಗತ್ಯವಾಗಿದೆ.



Scanned with ACE Scanner

# ಆಡಳಿತಾತ್ಮಕ ಸುಧಾರಣೆ

* ವಿ ಶ್ರೀನಿವಾಸ್



**ರಾಷ್ಟ್ರ ನಿರ್ಮಾಣ ಮತ್ತು ಎಲ್ಲರನ್ನೂ ಒಳಗೊಂಡ ಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ಭಾರತವು ಸಮಯಾಧರಿತವಾಗಿ ಆಡಳಿತ ವ್ಯವಸ್ಥೆಯನ್ನು ಸುಧಾರಿಸಲು ಹೊಸ ತಲೆಮಾರಿನ ಹಲವಾರು ಆಡಳಿತಾತ್ಮಕ ಸುಧಾರಣೆಗಳನ್ನು ಅಳವಡಿಸಿಕೊಂಡಿದೆ.**

ಕಳೆದ ದಶಕದಿಂದೀಚೆಗೆ ಭಾರತವು ಹಲವಾರು ಬದಲಾವಣೆಯ ಸುಧಾರಣೆಗಳನ್ನು ಕೈಗೊಂಡಿದ್ದು, ಇದರಲ್ಲಿನ ಇ-ಆಡಳಿತ ಮಾದರಿಗಳು ಸರ್ಕಾರದೊಂದಿಗೆ ನಾಗರಿಕರ ಸಂಪರ್ಕವನ್ನು ಸರಳಗೊಳಿಸುತ್ತಿವೆ ಮತ್ತು ಸರ್ಕಾರ ಮತ್ತು ನಾಗರಿಕರನ್ನು ಹತ್ತಿರ ತರುತ್ತಿವೆ. ಭಾರತದ ಸಾರ್ವಜನಿಕ ಸಂಸ್ಥೆಗಳನ್ನು ಸಂಪೂರ್ಣ ಡಿಜಿಟಲ್ ಸಂಸ್ಥೆಗಳಾಗಿ ಪರಿವರ್ತಿಸಲಾಗಿದ್ದು, ಇದು ಲಕ್ಷಾಂತರ ಭಾರತೀಯರಿಗೆ ಪ್ರಯೋಜನವನ್ನು ನೀಡುತ್ತಿದೆ. ಕೇಂದ್ರ ಸರ್ಕಾರದ ಇ-ಆಡಳಿತ ಮಾದರಿಗಳಾದ ಆಯುಷ್ಮಾನ್ ಭಾರತ್, ಪ್ರಧಾನ ಮಂತ್ರಿಗಳ ಜನ ಆರೋಗ್ಯ ಯೋಜನೆ, ಪ್ರಧಾನ ಮಂತ್ರಿ ಜನ್ ಧನ್ ಯೋಜನೆ, ಒಂದು ದೇಶ -ಒಂದು ಪಡಿತರ ಚೀಟಿ ಮತ್ತು ಪಾಸ್‌ಪೋರ್ಟ್ ಸೇವಾ ಕೇಂದ್ರಗಳು ಸರ್ಕಾರಿ ಪ್ರಕ್ರಿಯೆಗಳಲ್ಲಿ ಪಾರದರ್ಶಕತೆ ಮತ್ತು ಮುಕ್ತತೆಯನ್ನು ತರುವಲ್ಲಿ ಯಶಸ್ವಿಯಾಗಿವೆ.

ಪ್ರಧಾನಮಂತ್ರಿಯವರು "ಗರಿಷ್ಠ ಆಡಳಿತ-ಕನಿಷ್ಠ ಸರ್ಕಾರ" ನೀತಿಯನ್ನು ಅಳವಡಿಸಿಕೊಂಡಿದ್ದಾರೆ, ಇದು "ಡಿಜಿಟಲ್ ಸಶಕ್ತ ನಾಗರಿಕ" ಮತ್ತು "ಡಿಜಿಟಲ್ ರೂಪಾಂತರಗೊಂಡ ಸಂಸ್ಥೆ"ಯನ್ನು ರೂಪಿಸುತ್ತದೆ. ಇದು ಪ್ರಮಾಣ, ವ್ಯಾಪ್ತಿ ಮತ್ತು ಕಲಿಕೆಯ ಮಾದರಿಗಳಲ್ಲಿ ಭಾರತದ ಆಡಳಿತದ ಭೂದೃಶ್ಯವನ್ನು ಆಮೂಲಾಗ್ರವಾಗಿ ಬದಲಾಯಿಸುತ್ತದೆ. ಪ್ರಧಾನಿಗಳ ಮಾತುಗಳಲ್ಲಿ ಹೇಳುವುದಾದರೆ, "ತಂತ್ರಜ್ಞಾನವು ಸರ್ಕಾರ ಮತ್ತು ನಾಗರಿಕರನ್ನು ಹತ್ತಿರ ತರುವ ಅಪಾರ ಸಾಮರ್ಥ್ಯವನ್ನು ಹೊಂದಿದೆ. ಇಂದು, ತಂತ್ರಜ್ಞಾನವು ನಾಗರಿಕರನ್ನು ಸಬಲೀಕರಣಗೊಳಿಸುವ ಶಕ್ತಿಯುತ ಸಾಧನವಾಗಿದೆ ಮತ್ತು ದೈನಂದಿನ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಉತ್ತಮಗೊಳಿಸುವ ಮಾಧ್ಯಮವಾಗಿದೆ. ವಿವಿಧ ನೀತಿ ಮಧ್ಯಸ್ಥಿಕೆಗಳ ಮೂಲಕ, ನಾವು ನಾಗರಿಕರ ಡಿಜಿಟಲ್ ಸಬಲೀಕರಣ ಮತ್ತು ಸಂಸ್ಥೆಗಳ ಡಿಜಿಟಲ್ ರೂಪಾಂತರದತ್ತ ಬಲವಾಗಿ ಮುಂದುವರಿಯುತ್ತಿದ್ದೇವೆ".

ಭಾರತವು ತನ್ನ 75ನೇ ಸ್ವಾತಂತ್ರ್ಯೋತ್ಸವವನ್ನು ಆಜಾದಿ ಕಾ ಅಮೃತ ಮಹೋತ್ಸವವಾಗಿ ಆಚರಿಸುತ್ತಿರುವ ಸಂದರ್ಭದಲ್ಲಿ, 'ವಿಕಸಿತ್ ಭಾರತ'ದೆಡೆಗೆ ಸಾಗಲು ಅನುವು ಮಾಡಿಕೊಡಲು ಮುಂದಿನ ಪೀಳಿಗೆಯ ಸುಧಾರಣೆಗಳನ್ನು ಅಳವಡಿಸಿಕೊಳ್ಳಲು ಪ್ರಧಾನ ಮಂತ್ರಿಗಳು ಕರೆ ನೀಡಿದ್ದಾರೆ. ಮುಂದಿನ ತಲೆಮಾರಿನ ಆಡಳಿತಾತ್ಮಕ ಸುಧಾರಣೆಗಳ ದೃಷ್ಟಿಕೋನವು ಆಳವಾಗಿ ಬೇರೂರಿರುವ ಸಚಿವಾಲಯ ಸುಧಾರಣೆಗಳು, ರಾಷ್ಟ್ರವ್ಯಾಪಿ ಸ್ವಚ್ಛತಾ ಅಭಿಯಾನಗಳು, ಆಡಳಿತ ಮತ್ತು ಸೇವೆಗಳ ಮಾನದಂಡ, ಸಾರ್ವಜನಿಕ ಕುಂದುಕೊರತೆಗಳ ಪರಿಹಾರ ಮತ್ತು ಸೇವಾ ವಿತರಣೆಯನ್ನು ಸುಧಾರಿಸುವುದು, ಅರ್ಹತೆಗೆ ಮನ್ನಣೆ ಮತ್ತು ಉತ್ತಮ ಆಡಳಿತ ಪದ್ಧತಿಗಳ ಪುನರಾವರ್ತನೆಯನ್ನು ಒಳಗೊಂಡಿದೆ.

ಸಾಂಸ್ಥಿಕ ಸುಧಾರಣೆಗಳು ಮತ್ತು ಸಿಬ್ಬಂದಿ ಆಡಳಿತದಲ್ಲಿ ಗಮನಾರ್ಹ ಸುಧಾರಣೆಗಳಾದ ಮಿಷನ್ ಕರ್ಮಯೋಗಿ, ಪಾರ್ಶ್ವ ನೇಮಕಾತಿ, ವೇಗವರ್ಧಿತ ಬಡ್ತಿ ನೀತಿಗಳು, ಉತ್ತಮ ಆಡಳಿತ ಪದ್ಧತಿಗಳ ಪುನರಾವರ್ತನೆಗಾಗಿ ಪ್ರಾದೇಶಿಕ ಸಮ್ಮೇಳನಗಳು, ಸಾರ್ವಜನಿಕ ಆಡಳಿತದಲ್ಲಿ ಶ್ರೇಷ್ಠತೆಗಾಗಿ ಪ್ರಧಾನ ಮಂತ್ರಿ ಪ್ರಶಸ್ತಿಗಳ ಯೋಜನೆಯನ್ನು ವ್ಯಾಪಕಗೊಳಿಸುವ ಮೂಲಕ ಸಾರ್ವಜನಿಕ ಆಡಳಿತದಲ್ಲಿ ಶ್ರೇಷ್ಠತೆಯನ್ನು ಗುರುತಿಸುವುದು, ಆಡಳಿತದಲ್ಲಿ ಮಾದರಿ ಬದಲಾವಣೆಯನ್ನು ಪ್ರತಿನಿಧಿಸುತ್ತದೆ.

* ಮಹಾನಿರ್ದೇಶಕರು, ಆಡಳಿತಾತ್ಮಕ ಸುಧಾರಣೆ ಮತ್ತು ಸಾರ್ವಜನಿಕ ಕುಂದುಕೊರತೆಗಳ ಇಲಾಖೆ ಪಿಂಚಣಿ ಮತ್ತು ಪಿಂಚಣಿದಾರರ ಕಲ್ಯಾಣ ಇಲಾಖೆ ಹಾಗೂ ರಾಷ್ಟ್ರೀಯ ಉತ್ತಮ ಆಡಳಿತ ಕೇಂದ್ರ, ಭಾರತ ಸರ್ಕಾರ. ಇಮೇಲ್: vsrinivas@nic.in



Scanned with ACE Scanner




**ಸಾರ್ವಜನಿಕ ಕುಂದುಕೊರತೆಗಳ ಪರಿಣಾಮಕಾರಿ ಪರಿಹಾರ:** ಸಿಪಿಜಿಆರ್ ಎಎಂಎಸ್ ಅನ್ನು ಎಲ್ಲಾ ಕೇಂದ್ರ ಸಚಿವಾಲಯಗಳು ಮತ್ತು ಇಲಾಖೆಗಳು, ಸಂಬಂಧಿತ, ಅಧೀನ ಮತ್ತು ಸ್ವಾಯತ್ತ ಸಂಸ್ಥೆಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಇದಲ್ಲದೆ ಸಿಪಿಜಿಆರ್‌ಎಂಎಸ್ ಅನ್ನು ಹಲವಾರು ಕೇಂದ್ರಾಡಳಿತ ಪ್ರದೇಶಗಳು ಸಹ ಬಳಸುತ್ತಿವೆ. ಪ್ರಸ್ತುತ, ಸಾರ್ವಜನಿಕ ಕುಂದುಕೊರತೆಗಳನ್ನು ಸಲ್ಲಿಸಲು 17 ಲಕ್ಷ ನಾಗರಿಕರು ಈ ವೇದಿಕೆಯಲ್ಲಿ ತಮ್ಮನ್ನು ನೊಂದಾಯಿಸಿಕೊಂಡಿದ್ದಾರೆ. 84,449 ಕುಂದುಕೊರತೆ ಅಧಿಕಾರಿಗಳು ಮತ್ತು 950 ಮೇಲ್ಮನವಿ ಅಧಿಕಾರಿಗಳನ್ನು ಸಿಪಿಜಿಆರ್‌ಎಂಎಸ್ ಪೋರ್ಟಲ್‌ನಲ್ಲಿ ಮ್ಯಾಪ್ ಮಾಡಲಾಗಿದೆ. 2022ರಲ್ಲಿ, ಎಲ್ಲಾ ಸಚಿವಾಲಯಗಳು, ಇಲಾಖೆಗಳು, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು 18,19,104 ಕುಂದುಕೊರತೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 15,68,097 ಅನ್ನು ಪರಿಹರಿಸಲಾಗಿದೆ. ಈ ಪೈಕಿ 11,29,642 ಕುಂದುಕೊರತೆಗಳನ್ನು ಕೇಂದ್ರ ಸಚಿವಾಲಯಗಳು ಮತ್ತು ಇಲಾಖೆಗಳು ವಿಲೇವಾರಿ ಮಾಡಿದ್ದರೆ, 4,38,455 ಪ್ರಕರಣಗಳನ್ನು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ವಿಲೇವಾರಿ ಮಾಡಿವೆ. ಕೇಂದ್ರ ಸಚಿವಾಲಯಗಳು ಮತ್ತು ಇಲಾಖೆಗಳ ಸರಾಸರಿ ವಿಲೇವಾರಿ ಸಮಯವು 2021ರ 32 ದಿನಗಳಿಂದ 2022ರಲ್ಲಿ 27 ದಿನಗಳಿಗೆ ಸುಧಾರಿಸಿದೆ. 2022ರಲ್ಲಿ ಒಟ್ಟಾರೆ 1,71,509 ಮೇಲ್ಮನವಿಗಳನ್ನು ಸ್ವೀಕರಿಸಲಾಗಿದ್ದು, ಅದರಲ್ಲಿ ಶೇ.80ಕ್ಕಿಂತ ಹೆಚ್ಚು ಮೇಲ್ಮನವಿಗಳನ್ನು ವಿಲೇವಾರಿ ಮಾಡಲಾಗಿದೆ. 2023ರಲ್ಲಿ (ಜೂನ್ 2023ರವರೆಗೆ), ಸಿಪಿಜಿಆರ್‌ಎಂಎಸ್ ಪೋರ್ಟಲ್‌ನಲ್ಲಿ 10,75,247 ಕುಂದುಕೊರತೆ ಮನವಿಗಳನ್ನು ಸ್ವೀಕರಿಸಲಾಗಿದೆ. ಅದರಲ್ಲಿ 7,09,569 ಕೇಂದ್ರ ಸಚಿವಾಲಯಗಳು ಮತ್ತು ಇಲಾಖೆಗಳಿಗೆ ಮತ್ತು 3,65,680 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸಂಬಂಧಿಸಿವೆ. 7,23,067 ಕುಂದುಕೊರತೆ ಮನವಿಗಳನ್ನು ಕೇಂದ್ರ ಸಚಿವಾಲಯಗಳು ಮತ್ತು ಇಲಾಖೆಗಳು ಮತ್ತು 3,64,468 ಕುಂದುಕೊರತೆಗಳನ್ನು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಪರಿಹರಿಸಿವೆ. ಕೇಂದ್ರ ಸಚಿವಾಲಯವು ಜೂನ್ 2023ರಲ್ಲಿ ಅತ್ಯಂತ ಕಡಿಮೆ 57,848 ಕುಂದುಕೊರತೆಗಳ ಬಾಕಿಯನ್ನು ದಾಖಲಿಸಿದೆ. ಏಕೆಂದರೆ ವಿಲೇವಾರಿ ಮಟ್ಟವು ಸತತವಾಗಿ 14 ತಿಂಗಳುಗಳವರೆಗೆ ಮಾಸಿಕ 1 ಲಕ್ಷ ಸಂಖ್ಯೆ ದಾಟಿದೆ. ಕೇಂದ್ರ ಸಚಿವಾಲಯಗಳು ಮತ್ತು ಇಲಾಖೆಗಳಲ್ಲಿ ಸರಾಸರಿ ಕುಂದುಕೊರತೆ ಪರಿಹಾರ ಸಮಯವು 1 ಜನವರಿ 2023 ರಿಂದ 30 ಜೂನ್ 2023 ರ ಅವಧಿಯಲ್ಲಿ 19 ದಿನಗಳಿಗೆ ಇಳಿದಿದೆ.


ವಿಲೇವಾರಿಯ ಗುಣಮಟ್ಟವನ್ನು ಸುಧಾರಿಸಲು ಮತ್ತು ಕಾಲಮಿತಿಯನ್ನು ಕಡಿಮೆ ಮಾಡಲು ಅಳವಡಿಸಿಕೊಂಡ 10–ಹಂತದ ಸಿಪಿಜಿಆರ್‌ಎಂಎಸ್ ಸುಧಾರಣೆಗಳು ಗಮನಾರ್ಹ ಪರಿಣಾಮ ಬೀರಿದವು. 10–ಹಂತದ ಸಿಪಿಜಿಆರ್‌ಎಂಎಸ್ ಸುಧಾರಣೆಯು ಪರಿಣಾಮಕಾರಿ ಕುಂದುಕೊರತೆ ಪರಿಹಾರವನ್ನು ಸಕ್ರಿಯಗೊಳಿಸಲು ಸಹಾನುಭೂತಿ, ಅನುಭೂತಿ ಮತ್ತು ವಿಜ್ಞಾನ ಆಧರಿತ ಪರಿಹಾರಗಳನ್ನು ತಂದಿದೆ ಎಂದು ಹೇಳಬಹುದು. ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ ಸಚಿವಾಲಯದ ಸಂಸದೀಯ ಸ್ಥಾಯಿ ಸಮಿತಿಯು 2023ರ ಮಾರ್ಚ್‌ನಲ್ಲಿ ಸಂಸತ್ತಿಗೆ ಸಲ್ಲಿಸಿದ ತನ್ನ 127ನೇ ವರದಿಯಲ್ಲಿ, ಕುಂದುಕೊರತೆಗಳ ಗುಣಮಟ್ಟ ಮತ್ತು ವಿಲೇವಾರಿಯನ್ನು ಸುಧಾರಿಸಲು ಮತ್ತು ಸಮಯವನ್ನು ಕಡಿಮೆ ಮಾಡಲು ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ಕುಂದುಕೊರತೆಗಳ ಇಲಾಖೆ (ಡಿಎಆರ್‌ಪಿಜಿ) ಅಳವಡಿಸಿಕೊಂಡ 10 ಹಂತದ ಸುಧಾರಣಾ ಪ್ರಕ್ರಿಯೆಯನ್ನು ಶ್ಲಾಘಿಸಿದೆ. ತಿಂಗಳಿಗೆ ಒಂದು ಲಕ್ಷಕ್ಕೂ ಹೆಚ್ಚು ಕುಂದುಕೊರತೆಗಳನ್ನು ತ್ವರಿತವಾಗಿ ವಿಲೇವಾರಿ ಮಾಡಿದ್ದಕ್ಕಾಗಿ ಸಂಸದೀಯ ಸ್ಥಾಯಿ ಸಮಿತಿಯು ಇಲಾಖೆಯನ್ನು ಶ್ಲಾಘಿಸಿತು. ಕುಂದುಕೊರತೆ ನಿವಾರಣಾ ಸೂಚ್ಯಂಕವನ್ನು ಅಭಿವೃದ್ಧಿಪಡಿಸಲು, ಪರಿಹಾರ ಅವಧಿಯನ್ನು 45–60 ದಿನಗಳಿಂದ 45ಕ್ಕೆ, ಇಲ್ಲಿಂದ 30 ದಿನಗಳಿಗೆ ಇಳಿಸಲು, ಮೇಲ್ಮನವಿ ಕಾರ್ಯವಿಧಾನವನ್ನು ಪರಿಚಯಿಸಲು, ಸೇವೋತ್ತಮ್ ಯೋಜನೆಯನ್ನು ಪುನರುಜ್ಜೀವನಗೊಳಿಸಲು, ಪ್ರತಿಕ್ರಿಯೆ ಕಾರ್ಯವಿಧಾನವನ್ನು ಕಾರ್ಯಗತಗೊಳಿಸಲು ಪ್ರಾದೇಶಿಕ ಭಾಷೆಗಳಲ್ಲಿ ಒಂದು ದೇಶ – ಒಂದು ಪೋರ್ಟಲ್, ಸಿಪಿಜಿಆರ್‌ಎಂಎಸ್ ಪೋರ್ಟಲ್, ಸಿಪಿಜಿಆರ್‌ಎಎಸ್ ಡ್ಯಾಶ್ ಬೋರ್ಡ್ ಮುಂತಾದ ಹೆಚ್ಚಿನ ಶಿಫಾರಸುಗಳನ್ನು ಇಲಾಖೆ ಜಾರಿಗೆ ತಂದಿದೆ ಎಂದು ಸಂಸದೀಯ ಸ್ಥಾಯಿ ಸಮಿತಿ ಸಂತಸ ವ್ಯಕ್ತಪಡಿಸಿದೆ.

**ಬೆಂಚ್ ಮಾರ್ಕಿಂಗ್ ಆಡಳಿತ:** ಬೆಂಚ್ ಮಾರ್ಕಿಂಗ್ ಆಡಳಿತವು ಮುಂದಿನ ಪೀಳಿಗೆಯ ಪ್ರಮುಖ ಆಡಳಿತ ಸುಧಾರಣೆಯಾಗಿದೆ. ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ಕುಂದುಕೊರತೆಗಳ ಇಲಾಖೆಯು ಉತ್ತಮ ಆಡಳಿತ ಸೂಚ್ಯಂಕ (ಜಿಜಿಐ) ಮೂಲಕ



Scanned with ACE Scanner

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಡಳಿತದ ದ್ವಿವಾರ್ಷಿಕ ಮೌಲ್ಯಮಾಪನವನ್ನು ಕೈಗೊಳ್ಳುತ್ತದೆ. ಜಿಲ್ಲಾ ಉತ್ತಮ ಆಡಳಿತ ಸೂಚ್ಯಂಕದ ಮೂಲಕ ಜಿಲ್ಲಾ ಮಟ್ಟದಲ್ಲಿ ಆಡಳಿತವನ್ನು ನಿರ್ಣಯಿಸುತ್ತದೆ ಮತ್ತು ದ್ವಿವಾರ್ಷಿಕ ರಾಷ್ಟ್ರೀಯ ಇ-ಸೇವೆಗಳ ವಿತರಣಾ ಮೌಲ್ಯಮಾಪನದ ಮೂಲಕ ಇ-ಸೇವೆಗಳ ವಿತರಣೆಯನ್ನು ನಿರ್ಣಯಿಸುತ್ತದೆ. 10 ವಲಯಗಳು ಮತ್ತು 58 ಸೂಚಕಗಳನ್ನು ಒಳಗೊಂಡ ಉತ್ತಮ ಆಡಳಿತ ಸೂಚ್ಯಂಕ ಚೌಕಟ್ಟು, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಡಳಿತವನ್ನು ನಿರ್ಣಯಿಸಲು ಸಮಗ್ರ ಚೌಕಟ್ಟನ್ನು ಪ್ರತಿನಿಧಿಸುತ್ತದೆ ಮತ್ತು ಸುಧಾರಣೆಗೆ ಸ್ಪರ್ಧಾತ್ಮಕ ಚಿತ್ರವನ್ನು ನೀಡುತ್ತದೆ. ಜಿಜಿಐ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು 4 ವಿಭಾಗಗಳಾಗಿ ವರ್ಗೀಕರಿಸುತ್ತದೆ – ಕೇಂದ್ರಾಡಳಿತ ಪ್ರದೇಶಗಳು, ಈಶಾನ್ಯ ಮತ್ತು ಗುಡ್ಡಗಾಡು ರಾಜ್ಯಗಳು, ಇತರ ರಾಜ್ಯಗಳು: ಗುಂಪು ಎ ಮತ್ತು ಗುಂಪು ಬಿ. ಜಿಜಿಐ 2019 ಸೂಚ್ಯಂಕ ಸ್ಕೋರ್‌ಗಳಿಗಿಂತ 20 ರಾಜ್ಯಗಳು ತಮ್ಮ ಸಂಯೋಜಿತ ಸ್ಕೋರ್‌ಗಳನ್ನು ಸುಧಾರಿಸಿವೆ ಎಂದು ಜಿಜಿಐ 2021 ಹೇಳುತ್ತದೆ. ಜಿಜಿಐ 2021ರಲ್ಲಿ ಗುಜರಾತ್ ಮೊದಲ ಸ್ಥಾನದಲ್ಲಿದ್ದರೆ, ಮಹಾರಾಷ್ಟ್ರ ಮತ್ತು ಗೋವಾ ನಂತರದ ಸ್ಥಾನಗಳಲ್ಲಿವೆ. 2019–2021ರ ಅವಧಿಯಲ್ಲಿ ಉತ್ತರ ಪ್ರದೇಶವು ಜಿಜಿಐ ಸೂಚಕಗಳಲ್ಲಿ ಶೇಕಡಾ 8.9ರಷ್ಟು ಸುಧಾರಣೆಯನ್ನು ದಾಖಲಿಸಿದೆ. ಡಿಎಆರ್‌ಪಿಜಿ ಉತ್ತರ ಪ್ರದೇಶ, ಗುಜರಾತ್, ಜಮ್ಮು ಮತ್ತು ಕಾಶ್ಮೀರ ಮತ್ತು ಅರುಣಾಚಲ ಪ್ರದೇಶ ಸರ್ಕಾರಗಳೊಂದಿಗೆ ಸಹಯೋಗ ಹೊಂದಿದ್ದು, ತಳಮಟ್ಟದ ವಾಸ್ತವತೆಯನ್ನು ನಿರ್ಣಯಿಸಲು ಪ್ರದೇಶ-ನಿರ್ದಿಷ್ಟ ಸೂಚಕಗಳೊಂದಿಗೆ ಜಿಲ್ಲಾ ಉತ್ತಮ ಆಡಳಿತ ಸೂಚ್ಯಂಕವನ್ನು ಪ್ರಕಟಿಸಿದೆ. ರಾಷ್ಟ್ರೀಯ ಇ-ಸೇವೆಗಳ ವಿತರಣಾ ಮೌಲ್ಯಮಾಪನ (ಎನ್‌ಇಎಸ್‌ಡಿಎ) ದೇಶಾದ್ಯಂತ ಇ-ಸೇವೆಗಳ ವಿತರಣೆಯ ಸ್ಥಿತಿಯನ್ನು ನಿರ್ಣಯಿಸುತ್ತದೆ. ಎನ್‌ಇಎಸ್‌ಡಿಎ ಚೌಕಟ್ಟು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಎಲ್ಲಾ ಸೇವಾ ಪೋರ್ಟಲ್‌ಗಳನ್ನು ಮತ್ತು ಆಯ್ದ ಸಚಿವಾಲಯಗಳನ್ನು 7 ಪ್ರಮುಖ ನಿಯತಾಂಕಗಳ ಮೇಲೆ ಮೌಲ್ಯಮಾಪನ ಮಾಡಿದೆ. ಎನ್‌ಇಎಸ್‌ಡಿಎ 2021 ಎಲ್ಲಾ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ 1400 ಇ-ಸೇವೆಗಳನ್ನು ಮೌಲ್ಯಮಾಪನ




ಮಾಡಿದೆ. ಇದು 2019ಕ್ಕಿಂತ ಶೇ.60ರಷ್ಟು ಹೆಚ್ಚಾಗಿದೆ. ಎಲ್ಲಾ ಕಡ್ಡಾಯ ಇ-ಸೇವೆಗಳಲ್ಲಿ ಒಟ್ಟು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ತಲುಪಿಸಲಾದ ಇ-ಸೇವೆ ಪ್ರಮಾಣ 2019ರ ಶೇ. 48ರಿಂದ ಶೇ.69ಕ್ಕೇರಿತು. ನಾಗರಿಕರ ತೃಪ್ತಿ ಪ್ರಮಾಣ ಶೇ.74 ರಷ್ಟಿತ್ತು.

**ಸಚಿವಾಲಯ ಸುಧಾರಣೆಗಳು:** ನಿರ್ಧಾರ ತೆಗೆದುಕೊಳ್ಳುವಲ್ಲಿ ದಕ್ಷತೆಯನ್ನು ಹೆಚ್ಚಿಸುವ ಉದ್ದೇಶದಿಂದ ಸರ್ಕಾರವು ಗಹನವಾದ ಸಚಿವಾಲಯ ಸುಧಾರಣೆಗಳನ್ನು ಜಾರಿಗೆ ತಂದಿದೆ. ಇದು ವಿಳಂಬ ನಿವಾರಣೆ ಹಣಕಾಸು ಅಧಿಕಾರಗಳ ನಿಯೋಜನೆ ಮತ್ತು ಸ್ವಚ್ಛತೆಯನ್ನು ಸಾಂಸ್ಥಿಕಗೊಳಿಸಲು ಮತ್ತು ವಿಲೇವಾರಿ ಬಾಕಿಯನ್ನು ಕಡಿಮೆ ಮಾಡಲು ಇ-ಆಫೀಸ್ ಅಳವಡಿಕೆ ಮತ್ತು ವಿಶೇಷ ಅಭಿಯಾನ 2.0 ಅಳವಡಿಕೆ ಕ್ರಮಗಳನ್ನು ಒಳಗೊಂಡಿದೆ.

ಕೇಂದ್ರ ಸಚಿವಾಲಯದ ಕಚೇರಿ ಕಾರ್ಯವಿಧಾನ ಕೈಪಿಡಿ 2022, ನಿರ್ಧಾರ ತೆಗೆದುಕೊಳ್ಳುವಲ್ಲಿನ ದಕ್ಷತೆ ಹೆಚ್ಚಳ ಮತ್ತು ಕೇಂದ್ರ ಸಚಿವಾಲಯದಾದ್ಯಂತ ಮೌನ ಪರಿವರ್ತನೆಯನ್ನು ಸಕ್ರಿಯಗೊಳಿಸಲು ಬಾಕಿ ಇರುವ ವಿಷಯಗಳ ವಿಲೇವಾರಿಗಾಗಿ ವಿಶೇಷ ಅಭಿಯಾನವನ್ನು ಒಳಗೊಂಡಿದೆ. ವಿಶೇಷ ಅಭಿಯಾನ 2.0 ಅಡಿಯಲ್ಲಿ, 2022ರಲ್ಲಿ, 1,01,582 ಸ್ಥಳಗಳಲ್ಲಿ ಸ್ವಚ್ಛತಾ ಅಭಿಯಾನವನ್ನು ಜಾರಿಗೆ ತರಲಾಯಿತು, 64.92 ಲಕ್ಷ ಕಡತಗಳನ್ನು ಪರಿಶೀಲಿಸಲಾಯಿತು, 37.27 ಲಕ್ಷ ಕಡತಗಳನ್ನು ತೆಗೆಯಲಾಯಿತು, 4.56 ಲಕ್ಷ ಸಾರ್ವಜನಿಕ ಕುಂದುಕೊರತೆಗಳನ್ನು ಪರಿಹರಿಸಲಾಯಿತು, 8998 ಸಂಸದರ ಉಲ್ಲೇಖಗಳಿಗೆ ಉತ್ತರಿಸಲಾಯಿತು ಮತ್ತು ಅಭಿಯಾನದ ಸಮಯದಲ್ಲಿ 890 ನಿಯಮಗಳನ್ನು ಸಡಿಲಿಸಲಾಯಿತು. ಕೇಂದ್ರ ಸಚಿವಾಲಯದಲ್ಲಿ ಇ-ಫೈಲ್ ಅಳವಡಿಕೆಯು ಜೂನ್ 2023ರಲ್ಲಿ 26.48 ಲಕ್ಷ ಇ-ಫೈಲ್ ಗಳೊಂದಿಗೆ ಶೇ. 89.66 ರಷ್ಟಿದೆ ಮತ್ತು ಭೌತಿಕವಾಗಿ 7.17 ಲಕ್ಷ ಫೈಲ್‌ಗಳಿವೆ.

**ಚಿಂತನ ಶಿಬಿರ:** ಚಿಂತನ ಶಿಬಿರ ಭವಿಷ್ಯದ ಆಡಳಿತದ ಮಾದರಿಯನ್ನು ರೂಪಿಸುತ್ತದೆ, ಇದು ಕರ್ತವ್ಯ ಕಾಲಾವಧಿಯಲ್ಲಿ ದೂರಗಾಮಿ ಆಡಳಿತ ಸುಧಾರಣೆಯನ್ನು ಪ್ರತಿನಿಧಿಸುತ್ತದೆ. 2023ರಲ್ಲಿ, ಪ್ರತಿ ಸಚಿವಾಲಯವು ತಮ್ಮನ್ನು ಆಡಳಿತ ಮಾದರಿಗಳನ್ನು ಹೊಸದಾಗಿ ನೋಡಲು ಆಂತರಿಕ ಸಮಾಲೋಚನೆಗಳನ್ನು ನಡೆಸಬೇಕು ಎಂದು ಮಂತ್ರಿಮಂಡಲದಲ್ಲಿ ಚರ್ಚೆಯಾದ ನಂತರ ಚಿಂತನ್ ಶಿಬಿರ ಒಂದು ಪರಿಕಲ್ಪನೆಯಾಗಿ ಗಣನೀಯ ವೇಗವನ್ನು ಪಡೆದುಕೊಂಡಿದೆ.

ನಾಗರಿಕ ಸೇವಾ ದಿನ: ಭಾರತವು ಪ್ರತಿವರ್ಷ ಏಪ್ರಿಲ್ 21 ಅನ್ನು ನಾಗರಿಕ ಸೇವಾ ದಿನವಾಗಿ ಆಚರಿಸುತ್ತದೆ. ಇದು ದೇಶಾದ್ಯಂತ ನಾಗರಿಕ ಸೇವಕರು ನಾಗರಿಕರಿಗೆ ತಮ್ಮನ್ನು ಸಮರ್ಪಿಸಿಕೊಳ್ಳಲು ಮತ್ತು ಸಾರ್ವಜನಿಕ ಸೇವೆ ಮತ್ತು ಕೆಲಸದಲ್ಲಿ ಉತ್ಕೃಷ್ಟತೆಗೆ ತಮ್ಮ ಬದ್ಧತೆಯನ್ನು ನವೀಕರಿಸುವ ಸಂದರ್ಭವೆಂದು ಗುರುತಿಸಲಾಗಿದೆ. 2015ರಿಂದ, ನಾಗರಿಕ ಸೇವಾ ದಿನವನ್ನು 2 ದಿನಗಳ ಕಾರ್ಯಕ್ರಮಗಳಾಗಿ ನಡೆಸಲಾಗುತ್ತದೆ. ಅಂದರೆ ಏಪ್ರಿಲ್ 20ರಂದು, ನಾಗರಿಕ ಸೇವಕರು ಪೂರ್ಣ ಮತ್ತು ಬ್ರೇಕೌಟ್ ಅಧಿವೇಶನಗಳಲ್ಲಿ ಸಮ್ಮೇಳನದ ವಿಷಯಗಳ ಬಗ್ಗೆ ಚರ್ಚಿಸುತ್ತಾರೆ. ಏಪ್ರಿಲ್ 21ರಂದು



Scanned with ACE Scanner

ಪ್ರಧಾನ ಮಂತ್ರಿಯವರು ಸಾರ್ವಜನಿಕ ಆಡಳಿತದಲ್ಲಿ ಶ್ರೇಷ್ಠತೆಗಾಗಿ ಪ್ರಧಾನ ಮಂತ್ರಿ ಪ್ರಶಸ್ತಿಗಳನ್ನು ಪ್ರದಾನ ಮಾಡುತ್ತಾರೆ. ಜತೆಗೆ ರಾಷ್ಟ್ರದ ನಾಗರಿಕ ಸೇವಕರನ್ನುದ್ದೇಶಿಸಿ ಮಾತನಾಡುತ್ತಾರೆ. ನಾಗರಿಕ ಸೇವಾ ದಿನ 2023 ಅನ್ನು 'ವಿಕಸಿತ್ ಭಾರತ್ – ನಾಗರಿಕರನ್ನು ಸಬಲೀಕರಣಗೊಳಿಸುವುದು ಮತ್ತು ಕೊನೆಯ ಮೈಲಿಯನ್ನು ತಲುಪುವುದು' ಎಂಬ ಸಮ್ಮೇಳನದ ವಿಷಯದೊಂದಿಗೆ ಆಚರಿಸಲಾಯಿತು. ಭಾರತದ ಉಪರಾಷ್ಟ್ರಪತಿಗಳು ನಾಗರಿಕ ಸೇವಾ ದಿನದ ಕಾರ್ಯಕ್ರಮಗಳನ್ನು ಉದ್ಘಾಟಿಸಿದರು. ಪ್ರಧಾನಮಂತ್ರಿಯವರು 2023ರ ಏಪ್ರಿಲ್ 21ರಂದು ನಾಗರಿಕ ಸೇವಕರನ್ನುದ್ದೇಶಿಸಿ ಮಾತನಾಡಿದರು. 15 ಪ್ರಶಸ್ತಿ ವಿಜೇತರಿಗೆ ಸಾರ್ವಜನಿಕ ಆಡಳಿತದಲ್ಲಿ ಶ್ರೇಷ್ಠತೆಗಾಗಿ ಪ್ರಧಾನ ಮಂತ್ರಿಯವರು ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. 2023ರ 16ನೇ ನಾಗರಿಕ ಸೇವೆಗಳ ದಿನದಂದು 26000ಕ್ಕೂ ಹೆಚ್ಚು ನಾಗರಿಕ ಸೇವಕರು ಭೌತಿಕ ಮತ್ತು ವರ್ಚುವಲ್ ಮೋಡ್‌ನಲ್ಲಿ ಭಾಗವಹಿಸಿದ್ದರು. ಇದು ಒಂದು ಪ್ರಮುಖ ಸಂದರ್ಭವಾಗಿದೆ.

**ಸಾರ್ವಜನಿಕ ಆಡಳಿತದಲ್ಲಿ ಶ್ರೇಷ್ಠತೆಗಾಗಿ ಪ್ರಧಾನ ಮಂತ್ರಿ ಪ್ರಶಸ್ತಿಗಳು:** ಜಿಲ್ಲೆಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು/ಸಂಸ್ಥೆಗಳು ಮಾಡಿದ ಅಸಾಧಾರಣ ಮತ್ತು ನವೀನ ಕೆಲಸಗಳನ್ನು ಗುರುತಿಸಲು ಮತ್ತು ಪ್ರಶಸ್ತಿ ನೀಡಲು ಸಾರ್ವಜನಿಕ ಆಡಳಿತದಲ್ಲಿ ಶ್ರೇಷ್ಠತೆಗಾಗಿ ಪ್ರಧಾನ ಮಂತ್ರಿ ಪ್ರಶಸ್ತಿಗಳನ್ನು ಸ್ಥಾಪಿಸಲಾಯಿತು. ಆದ್ಯತೆಯ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಉತ್ಕೃಷ್ಟತೆಯನ್ನು ಕೇಂದ್ರೀಕರಿಸಲು ಪ್ರಶಸ್ತಿ ಯೋಜನೆಯನ್ನು 2015–16ರಲ್ಲಿ ಪುನರ್ ರಚಿಸಲಾಗಿದೆ. 2021ರಲ್ಲಿ, ಪ್ರಧಾನ ಮಂತ್ರಿಯವರು ವೈಯಕ್ತಿಕವಾಗಿ ಯೋಜನೆಯನ್ನು ಪರಿಶೀಲಿಸಿದರು, ರಚನಾತ್ಮಕ ಸ್ಪರ್ಧೆ, ನಾವಿನ್ಯತೆ, ಅನುಕರಣೆ ಮತ್ತು ಗರಿಷ್ಠ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಉತ್ತಮ ಅಭ್ಯಾಸಗಳ ಸಾಂಸ್ಥೀಕರಣವನ್ನು ಉತ್ತೇಜಿಸುವ ಉದ್ದೇಶದಿಂದ ಯೋಜನೆಯ ಪುನರ್ ರಚನೆಯನ್ನು ಕೈಗೊಳ್ಳಲಾಯಿತು. 2022ರಲ್ಲಿ ಪುನರ್‌ರಚಿಸಿದ ಯೋಜನೆಯು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಂದ ಸಾರ್ವಕಾಲಿಕ ಹೆಚ್ಚಿನ ಸಂಖ್ಯೆಯ ನಾಮನಿರ್ದೇಶನಗಳನ್ನು ಪಡೆಯಿತು. ಒಟ್ಟು 743 ಜಿಲ್ಲೆಗಳು 2022ರ ಪ್ರಧಾನ ಮಂತ್ರಿ ಪ್ರಶಸ್ತಿಗಳಿಗೆ 2520 ನಾಮನಿರ್ದೇಶನಗಳನ್ನು ಸಲ್ಲಿಸಿವೆ. ಇದು ಯೋಜನೆಯಲ್ಲಿ ಭಾಗವಹಿಸಿದ ದೇಶದ ಒಟ್ಟು ಜಿಲ್ಲೆಗಳ ಶೇ.97 ರಷ್ಟನ್ನು ಪ್ರತಿನಿಧಿಸುತ್ತದೆ.

2022ರ ಪ್ರಶಸ್ತಿ ಯೋಜನೆಗಳಲ್ಲಿ ಹರ್ ಘರ್ ಜಲ್ ಯೋಜನೆ ಮೂಲಕ ಸ್ವಚ್ಛ ಜಲವನ್ನು ಉತ್ತೇಜಿಸುವುದು, ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳ ಮೂಲಕ ಸ್ವಸ್ಥ ಭಾರತವನ್ನು ಉತ್ತೇಜಿಸುವುದು, ಸಮಗ್ರ ಶಿಕ್ಷಣದ ಮೂಲಕ ಗುಣಮಟ್ಟದ ಶಿಕ್ಷಣವನ್ನು ಉತ್ತೇಜಿಸುವುದು, ಸಂತೃಪ್ತ ವಿಧಾನಗಳ ಮೇಲೆ ವಿಶೇಷ ಗಮನ ಹರಿಸುವ ಮಹತ್ವಾಕಾಂಕ್ಷೆಯ ಜಿಲ್ಲೆಗಳ ಕಾರ್ಯಕ್ರಮದ ಮೂಲಕ ಸಮಗ್ರ ಅಭಿವೃದ್ಧಿ ಮತ್ತು ಕೇಂದ್ರ ಸಚಿವಾಲಯಗಳು, ರಾಜ್ಯಗಳು ಹಾಗೂ ಜಿಲ್ಲೆಗಳಿಗೆ ನಾವಿನ್ಯತೆ ವಿಭಾಗಗಳು ಸೇರಿವೆ.

**ಉತ್ತಮ ಆಡಳಿತ ಪದ್ಧತಿಗಳ ಅನುಕರಣೆ:** ಪ್ರಶಸ್ತಿ ವಿಜೇತ ನಾಮನಿರ್ದೇಶನಗಳ ಪ್ರಚಾರ ಮತ್ತು ಅನುಕರಣೆಗಾಗಿ ಸರ್ಕಾರ ಗಮನಾರ್ಹ ಪ್ರಯತ್ನಗಳನ್ನು ಮಾಡಿದೆ. 2014ರಿಂದ, ಉತ್ತಮ ಆಡಳಿತ ಪದ್ಧತಿಗಳ ಅನುಕರಣೆ ಕುರಿತು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳ ಸಹಯೋಗದೊಂದಿಗೆ 23 ಪ್ರಾದೇಶಿಕ ಸಮ್ಮೇಳನಗಳನ್ನು ನಡೆಸಲಾಗಿದ್ದು, ಪ್ರತಿ ಸಮ್ಮೇಳನದಲ್ಲಿ 30ಕ್ಕೂ ಹೆಚ್ಚು ಉತ್ತಮ ಅಭ್ಯಾಸಗಳನ್ನು ಪ್ರಸ್ತುತಪಡಿಸಲಾಗಿದೆ. 2022ರಿಂದ, ಮಾಸಿಕ ಆಧಾರದ ಮೇಲೆ 16 ರಾಷ್ಟ್ರೀಯ ಉತ್ತಮ ಆಡಳಿತ ವೆಬಿನಾರ್‌ಗಳನ್ನು ನಡೆಸಲಾಗುತ್ತದೆ, ಇದರಲ್ಲಿ 32 ಪಿಎಂ ಪ್ರಶಸ್ತಿ ವಿಜೇತರು ತಮ್ಮ ಯಶಸ್ವಿ ಯೋಜನೆಗಳನ್ನು ಪ್ರಸ್ತುತಪಡಿಸಿದರು. ಸಂಸದ್ ಟಿವಿಯಲ್ಲಿ ಅಭಿನವ್ ಪಹಲ್ ಸರಣಿಯಲ್ಲಿ 15 ಪಿಎಂ ಪ್ರಶಸ್ತಿ ವಿಜೇತರು ಯಶಸ್ವಿ ಕಾರ್ಯಕ್ರಮಗಳ ಪ್ರಯೋಜನಗಳ ಬಗ್ಗೆ ಫಲಾನುಭವಿಗಳೊಂದಿಗೆ ಸಂವಾದ ನಡೆಸಿದರು.

**ಇ–ಆಡಳಿತ ಮತ್ತು ರಾಷ್ಟ್ರೀಯ ಇ–ಆಡಳಿತ ಪ್ರಶಸ್ತಿಗಳ ಕುರಿತ ರಾಷ್ಟ್ರೀಯ ಸಮ್ಮೇಳನಗಳು:** ಭಾರತ ಸರ್ಕಾರವು ಪ್ರತಿ ವರ್ಷ ಒಂದು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳ ಸಹಯೋಗದೊಂದಿಗೆ ಇ–ಆಡಳಿತದ ಬಗ್ಗೆ ರಾಷ್ಟ್ರೀಯ ಸಮ್ಮೇಳನಗಳನ್ನು ಆಯೋಜಿಸುತ್ತದೆ. ಇಲ್ಲಿಯವರೆಗೆ 25 ರಾಷ್ಟ್ರೀಯ ಇ–ಆಡಳಿತ ಸಮ್ಮೇಳನಗಳನ್ನು ನಡೆಸಲಾಗಿದೆ. ಜಮ್ಮು ಮತ್ತು ಕಾಶ್ಮೀರದ ಕತ್ರಾದಲ್ಲಿ ನಡೆದ 25ನೇ ರಾಷ್ಟ್ರೀಯ ಇ–ಆಡಳಿತ ಸಮ್ಮೇಳನದಲ್ಲಿ ಭಾರತ ಸರ್ಕಾರ, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಸರ್ಕಾರಗಳು, ಕೈಗಾರಿಕೆ, ಶೈಕ್ಷಣಿಕ ಮತ್ತು ಖಾಸಗಿ ವಲಯದ ಅಧಿಕಾರಿಗಳು ಸೇರಿದಂತೆ 1600ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಸಮ್ಮೇಳನದಲ್ಲಿ ಪ್ರಶಸ್ತಿಗಳು ಮತ್ತು ದೇಶದ ಇತರ ಉತ್ತಮ ಅಭ್ಯಾಸಗಳನ್ನು ಪ್ರದರ್ಶಿಸುವ ವಾಲ್ ಆಫ್ ಫೇಮ್ ಸೇರಿದಂತೆ ಪ್ರದರ್ಶನವನ್ನು ಸಹ ಆಯೋಜಿಸಲಾಗಿತ್ತು. ಮುಕ್ತ ಡಿಜಿಟಲ್ ವೇದಿಕೆಗಳು ಭಾರತದ ನಾಗರಿಕರಿಗೆ ಕೈಗೆಟುಕುವ, ಪರಸ್ಪರ ಕಾರ್ಯಸಾಧ್ಯವಾದ ತಂತ್ರಜ್ಞಾನವನ್ನು ಒದಗಿಸಲು ಪ್ರಚಂಡ ಶಕ್ತಿಯನ್ನು ದ್ವಿಗುಣಗೊಳಿಸುತ್ತವೆ ಮತ್ತು ನಿರ್ಣಾಯಕವಾಗಿವೆ ಎಂದು ಸಮ್ಮೇಳನವು ಪುನರುಚ್ಚರಿಸಿತು. 25ನೇ ರಾಷ್ಟ್ರೀಯ ಇ–ಆಡಳಿತ ಸಮ್ಮೇಳನವು ಜಮ್ಮು ಮತ್ತು ಕಾಶ್ಮೀರ ಸರ್ಕಾರದ ಇ–ಆಡಳಿತ ಮಾದರಿಯ ಮೇಲೆ ಗಮನಾರ್ಹ ಪರಿಣಾಮಗಳನ್ನು ಬೀರಿತು, ಜಮ್ಮು ಮತ್ತು ಕಾಶ್ಮೀರದಲ್ಲಿ ಇ–ಸೇವೆಗಳನ್ನು ಮೂರು ವರ್ಷಗಳಲ್ಲಿ 150 ಕ್ಷೇತ್ರಗಳಿಂದ 450 ಕ್ಷೇತ್ರಗಳಿಗೆ ವಿಸ್ತರಿಸಲಾಯಿತು. ಇದು ಗಮನಾರ್ಹ ಸಾಧನೆಯಾಗಿದೆ. 2023ರ ಜನವರಿಯಲ್ಲಿ ಮುಂಬೈನಲ್ಲಿ ನಡೆದ ಇ–ಆಡಳಿತದ ಪ್ರಾದೇಶಿಕ ಸಮ್ಮೇಳನವು ಮಹಾರಾಷ್ಟ್ರ ಸರ್ಕಾರದಲ್ಲಿ ಮುಂದಿನ ಪೀಳಿಗೆಯ ಆಡಳಿತಾತ್ಮಕ ಸುಧಾರಣೆಗಳಿಗೆ ಮಾರ್ಗಸೂಚಿಯನ್ನು ರೂಪಿಸಲು ಸಹಾಯ ಮಾಡಿತು.

ಕೊನೆಯಲ್ಲಿ, ರಾಷ್ಟ್ರ ನಿರ್ಮಾಣ ಮತ್ತು ಅಂತರ್ಗತ ರಾಜ್ಯದ ರಚನೆಯ ಕಾರ್ಯಗಳನ್ನು ನಿರ್ವಹಿಸಲು ತನ್ನ ಸಮಯಾಧರಿತ ಆಡಳಿತ ವ್ಯವಸ್ಥೆಯನ್ನು ಸುಧಾರಿಸಲು ಭಾರತವು 2014–2023ರ ಅವಧಿಯಲ್ಲಿ ಹಲವಾರು ಹೊಸ ತಲೆಮಾರಿನ ಆಡಳಿತ ಸುಧಾರಣೆಗಳನ್ನು ಅಳವಡಿಸಿಕೊಂಡಿದೆ ಎಂದು ಹೇಳಬಹುದು. ಖಚಿತ ಸಂಪರ್ಕ ಮತ್ತು ವೇಗದೊಂದಿಗೆ 6ಜಿ ತಂತ್ರಜ್ಞಾನವನ್ನು ಬಳಸಿಕೊಂಡು ಸಾವಿರಾರು ನಾಗರಿಕ ಕೇಂದ್ರಿತ ಸೇವೆಗಳೊಂದಿಗೆ ಅಂತರ್ಗತ ಇಂಟರ್ನೆಟ್ ಪರಿಸರ ವ್ಯವಸ್ಥೆಯೊಂದಿಗೆ ಡಿಜಿಟಲ್ ಸಂಸ್ಥೆಗಳನ್ನು ನಿರ್ಮಿಸುವ ಮೂಲಕ ವಿಷನ್ ಇಂಡಿಯಾ@2047 ಸಾಕಾರ ಮಾಡಲು ಸಾಧ್ಯವಿದೆ.




Scanned with ACE Scanner

ವೆಚ್ಚ

# ನೇರ ತೆರಿಗೆ ಸುಧಾರಣೆ

* ಕಮಲೇಶ್ ಚಂದ್ರ ವರ್ಷಣಿ

**ತೆರಿಗೆ ನೀತಿ ಸುಧಾರಣೆ ನಿರಂತರ ಪ್ರಕ್ರಿಯೆ. ಕಾಲ ಕಾಲಕ್ಕೆ ವಿವಿಧ ತೆರಿಗೆ ಸುಧಾರಣೆಗಳು ಮತ್ತು ಆಡಳಿತಾತ್ಮಕ ಉಪಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಅಪೇಕ್ಷಿತ ಪರಿಣಾಮ ಫಲಿತಾಂಶ ದೊರೆಯುವಲ್ಲಿ ಯಾವಾಗಲೂ ಸಮಯ ತೆಗೆದುಕೊಳ್ಳುತ್ತದೆ. ನಿರ್ದಿಷ್ಟವಾಗಿ ತೆರಿಗೆ ದರ ಕಡಿತವು ಅಲ್ಪಾವಧಿಯಲ್ಲಿ ತೆರಿಗೆ ಸಂಗ್ರಹದಲ್ಲಿ ಇಳಿಕೆಗೆ ಕಾರಣವಾಗುತ್ತದೆ. ಆದ್ದರಿಂದ, ತೆರಿಗೆ ಸುಧಾರಣೆಗಳ ಯಶಸ್ಸಿನ ಪ್ರತಿ ವರ್ಷವನ್ನು ಪ್ರತ್ಯೇಕವಾಗಿ ವಿಶ್ಲೇಷಿಸುವ ಬದಲು ಸಮಯದ ಅವಧಿಯಲ್ಲಿ (ಕಾಲ ಕಾಲಕ್ಕೆ) ನೋಡಬೇಕು. ವ್ಯವಹಾರವನ್ನು ಸುಲಭಗೊಳಿಸುವುದು ಸಹ ತೆರಿಗೆ ನೀತಿಗಳಲ್ಲಿ ಗಮನ ಹರಿಸಲು ಅಗತ್ಯವಿರುವ ಒಂದು ಕ್ಷೇತ್ರವಾಗಿದೆ. ಸುಲಭವಾಗಿ ವ್ಯಾಪಾರ ಮಾಡುವ ಉಪಕ್ರಮದ ಭಾಗವಾಗಿ ತೆರಿಗೆ ಕಾನೂನುಗಳ ಸುಲಭ ಅನುಸರಣೆ ಖಚಿತಪಡಿಸಿಕೊಳ್ಳುವುದು ಸರ್ಕಾರದ ಸದಾ ಕಾಲದ ಪ್ರಯತ್ನವಾಗಿದೆ.**




ಪ್ರತಿ ಸರ್ಕಾರ ಕೆಲಸ ಮಾಡುವುದೇ ಆರ್ಥಿಕ ಬೆಳವಣಿಗೆಯ ಉದ್ದೇಶಕ್ಕಾಗಿ. ನೀತಿ ಉಪಕ್ರಮಗಳು ಮತ್ತು ಮೂಲಸೌಕರ್ಯ ಅಭಿವೃದ್ಧಿಯ ಮೂಲಕ ಆರ್ಥಿಕ ಬೆಳವಣಿಗೆಯನ್ನು ಸುಲಭಗೊಳಿಸುವುದು ಸರ್ಕಾರದ ಅಗತ್ಯ ಕರ್ತವ್ಯವಾಗಿದೆ. ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳು ಎಲ್ಲರನ್ನೂ ಒಳಗೊಂಡ ಬೆಳವಣಿಗೆಯನ್ನು ಖಚಿತಪಡಿಸಬೇಕು. ಇದಕ್ಕಾಗಿ ವಿವಿಧ ಸಾಮಾಜಿಕ ಸಂಸ್ಥೆಗಳು ಮತ್ತು ನಿರ್ದಿಷ್ಟ ಸಾರ್ವಜನಿಕ ಸೇವಾ ಕಾರ್ಯಕ್ರಮಗಳಿಗೆ ಸರ್ಕಾರ ಹಣಕಾಸು ಒದಗಿಸಬೇಕಾಗುತ್ತದೆ. ಈ ಜವಾಬ್ದಾರಿಗಳನ್ನು ನಿರ್ವಹಿಸುವ ಸರ್ಕಾರದ ಸಾಮರ್ಥ್ಯವು ಹೆಚ್ಚಾಗಿ ವಿವಿಧ ಮೂಲಗಳಿಂದ ಉತ್ಪತ್ತಿಯಾಗುವ ಆದಾಯದ ಪ್ರಮಾಣವನ್ನು ಅವಲಂಬಿಸಿರುತ್ತದೆ. ಈ ಉದ್ದೇಶಗಳಿಗಾಗಿ ಆದಾಯವನ್ನು ಹೆಚ್ಚಿಸುವ ಪ್ರಮುಖ ಮೂಲಗಳಲ್ಲಿ ತೆರಿಗೆಯು ಒಂದಾಗಿದೆ, ಏಕೆಂದರೆ ಇದು ಸಾಮಾಜಿಕ ಮತ್ತು ಆರ್ಥಿಕ ನಿರ್ವಹಣೆಯ ಸಾಧನವಾಗಿದೆ. ತೆರಿಗೆ ಸಂಗ್ರಹವು ಸರ್ಕಾರಕ್ಕೆ, ಜನರಿಗೆ ಶಿಕ್ಷಣ, ಆರೋಗ್ಯ, ವಸತಿ ಮತ್ತು ಇತರ ಮೂಲಭೂತ ಸೌಲಭ್ಯಗಳನ್ನು ಒದಗಿಸಲು, ಅವರ ಜೀವನ ಗುಣಮಟ್ಟವನ್ನು ಸುಧಾರಿಸಲು, ಬಡತನ, ನಿರುದ್ಯೋಗ ಮತ್ತು ನಿಧಾನಗತಿಯ ಅಭಿವೃದ್ಧಿಯ ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಮಾಡುತ್ತದೆ.

ಕಂದಾಯ ಹೆಚ್ಚಿಸುವಾಗ, ವ್ಯಾಪಾರ ಮತ್ತು ಉದ್ಯಮ ಅಭಿವೃದ್ಧಿಯ ಮೇಲೆ ಪರಿಣಾಮ ಬೀರದಂತೆ ಸರ್ಕಾರವು ಖಚಿತಪಡಿಸಿಕೊಳ್ಳಬೇಕು. ತೆರಿಗೆ ದರಗಳನ್ನು ಹೆಚ್ಚಿಸುವುದು ಅಥವಾ ಹೊಸ ತೆರಿಗೆಗಳನ್ನು ವಿಧಿಸುವುದೇ ಯಾವಾಗಲೂ ತೆರಿಗೆ ಆದಾಯ ಹೆಚ್ಚಿಸಲು ಉತ್ತಮ ಆಯ್ಕೆಯಾಗಿರುವುದಿಲ್ಲ, ಏಕೆಂದರೆ ಇದು ವ್ಯವಹಾರಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು. ತೆರಿಗೆ ದರಗಳನ್ನು ಹೆಚ್ಚಿಸದೆ ಅಥವಾ ಹೊಸ ತೆರಿಗೆಗಳನ್ನು ವಿಧಿಸದೆ ತೆರಿಗೆ ಆದಾಯವನ್ನು ಹೇಗೆ ಹೆಚ್ಚಿಸುವುದು ಎಂಬ ವಿಚಾರ ಯಾವಾಗಲೂ ಸವಾಲಾಗಿದೆ. ಪ್ರತಿಯೊಬ್ಬ ನಾಗರಿಕನು ತೆರಿಗೆಯ ನ್ಯಾಯಯುತ ಪಾಲು ಪಾವತಿಸುವುದನ್ನು ಖಚಿತಪಡಿಸಿಕೊಳ್ಳುವುದೇ ತೆರಿಗೆ ಆಡಳಿತದ ಜವಾಬ್ದಾರಿಯಾಗಿದೆ. ಹೊಸ ವ್ಯಾಪಾರ ಮಾದರಿಗಳು ಮತ್ತು ಹೊಸ ತಂತ್ರಜ್ಞಾನವು ಸಮರ್ಥ ತೆರಿಗೆ ಸಂಗ್ರಹ ಖಚಿತಪಡಿಸಿಕೊಳ್ಳುವಲ್ಲಿ ತೆರಿಗೆ ಆಡಳಿತಕ್ಕೆ ಹೊಸ ಸವಾಲುಗಳನ್ನು ಒಡ್ಡುತ್ತಲೇ ಇರುತ್ತದೆ.

### ತೆರಿಗೆ ಸುಧಾರಣೆಗಳು

ನೇರ ತೆರಿಗೆಯಲ್ಲಿ, ಸ್ಥಿರ ಮತ್ತು ಊಹಿಸಬಹುದಾದ ತೆರಿಗೆ ಪದ್ಧತಿಯ ಮೂಲಕ ತೆರಿಗೆ ಸಂಗ್ರಹಣೆಯು ಪ್ರತಿಕೂಲವಲ್ಲದ ರೀತಿಯಲ್ಲಿ ಹೆಚ್ಚಾಗುವುದನ್ನು ಖಚಿತಪಡಿಸಿಕೊಳ್ಳಲು ಭಾರತ ಸರ್ಕಾರವು, ಕಳೆದ ಕೆಲವು ವರ್ಷಗಳಲ್ಲಿ ಗಣನೀಯ ತೆರಿಗೆ ಸುಧಾರಣೆಗಳನ್ನು ಕೈಗೊಂಡಿದೆ. ಈ ಸುಧಾರಣೆಗೆ 4 ಆಧಾರಸ್ತಂಭಗಳಿವೆ:

* ವಿನಾಯಿತಿ/ಕಡಿತವನ್ನು ತೆಗೆದು-ಹಾಕುವುದು ಮತ್ತು ತೆರಿಗೆ ದರಗಳನ್ನು ಕಡಿಮೆ ಮಾಡುವುದು.
* ವಿವಿಧ ಕ್ರಮಗಳ ಮೂಲಕ ತೆರಿಗೆ ಮೂಲವನ್ನು ವಿಸ್ತರಿಸುವುದು ಮತ್ತು ಆಳಗೊಳಿಸುವುದು.
* ಆದಾಯ ತೆರಿಗೆ ಇಲಾಖೆಯಲ್ಲಿ ದಕ್ಷತೆ ಹೆಚ್ಚಿಸಲು ತಂತ್ರಜ್ಞಾನ ಬಳಸುವುದು.
* ತೆರಿಗೆ ನಿಶ್ಚಿತತೆ ಅಥವಾ ಸ್ಥಿರತೆ ಒದಗಿಸುವ ಮೂಲಕ ವ್ಯಾಜ್ಯಗಳನ್ನು ಕಡಿಮೆ ಮಾಡುವುದು.


**ವಿನಾಯಿತಿ/ಕಡಿತ ತೆಗೆದುಹಾಕುವುದು ಮತ್ತು ತೆರಿಗೆ ದರಗಳನ್ನು ಕಡಿಮೆ ಮಾಡುವುದು:** 2015ರ ಅಕ್ಟೋಬರ್‌ನಲ್ಲಿ

* ಜಂಟಿ ಕಾರ್ಯದರ್ಶಿ–(ಟಿಪಿಎಲ್–1), ಕಂದಾಯ ಇಲಾಖೆ, ಹಣಕಾಸು ಸಚಿವಾಲಯ, ಭಾರತ ಸರ್ಕಾರ. ಇಮೇಲ್: jstpl1@nic.in



Scanned with ACE Scanner

ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್), ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಘಟನೆ (ಒಇಸಿಡಿ), ವಿಶ್ವಸಂಸ್ಥೆ ಮತ್ತು ವಿಶ್ವಬ್ಯಾಂಕ್‌ನಿಂದ ಜಿ-20 ಅಭಿವೃದ್ಧಿ ಕಾರ್ಯಕಾರಿ ಗುಂಪಿಗಾಗಿ ಮಾಡಿದ ಅಧ್ಯಯನ ವರದಿಯ ಪ್ರಕಾರ, ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಹೂಡಿಕೆ ಆಕರ್ಷಿಸುವಲ್ಲಿ ತೆರಿಗೆ ಪ್ರೋತ್ಸಾಹಕ ಕ್ರಮಗಳು ಹೆಚ್ಚಾಗಿ ಅನಗತ್ಯ ಎದು ತೀರ್ಮಾನಿಸಿದೆ. ಅಂದರೆ, ಯಾವುದೇ ಪ್ರೋತ್ಸಾಹಕ ಯೋಜನೆಗಳನ್ನು ನೀಡದಿದ್ದಾಗಲೂ ಅದೇ ಹೂಡಿಕೆಗಳನ್ನು ಕೈಗೊಳ್ಳಲಾಗುತ್ತಿತ್ತು. ಈ ತೆರಿಗೆ ಉತ್ತೇಜನಗಳು ಅಭಿವೃದ್ಧಿಶೀಲ ರಾಷ್ಟ್ರಗಳ ಆದಾಯ-ಸಂಗ್ರಹಿಸುವ ಸಾಮರ್ಥ್ಯವನ್ನು ಹಾನಿಗೊಳಿಸುತ್ತವೆ, ಏಕೆಂದರೆ ಅವು ಅನಾರೋಗ್ಯಕರ ತೆರಿಗೆ ಸ್ಪರ್ಧೆಗೆ ಕಾರಣವಾಗುತ್ತವೆ.




ಅದೇ ಸಮಯದಲ್ಲಿ, ಭಾರತವು ಪ್ರಮುಖ ತೆರಿಗೆ ನೀತಿ ಸುಧಾರಣೆ ಘೋಷಿಸಿತು. ಆಗಿನ ಹಣಕಾಸು ಸಚಿವರು 2015-16ರ ತಮ್ಮ ಬಜೆಟ್ ಭಾಷಣದಲ್ಲಿ, "...ಭಾರತದಲ್ಲಿ ಕಾರ್ಪೊರೇಟ್ ತೆರಿಗೆಯ ಮೂಲ ದರ ಅಂದರೆ 30%, ಇದು ಇತರೆ ಪ್ರಮುಖ ಏಷಿಯನ್ ಆರ್ಥಿಕತೆಗಳಲ್ಲಿ ಪ್ರಚಲಿತದಲ್ಲಿರುವ ದರಗಳಿಗಿಂತ ಹೆಚ್ಚಾಗಿದೆ, ಈ ತೆರಿಗೆ ದರವು ನಮ್ಮ ದೇಶೀಯ ಉದ್ಯಮಗಳನ್ನು ಸ್ಪರ್ಧಾತ್ಮಕವಾಗಿಸಿಲ್ಲ. ಇದಲ್ಲದೆ, ಕಾರ್ಪೊರೇಟ್ ತೆರಿಗೆಯ ಪರಿಣಾಮಕಾರಿ ಸಂಗ್ರಹ ಸುಮಾರು 23% ಇದೆ. ನಾವು ಎರಡೂ ಗಣನೆಗಳಲ್ಲಿ ಅಥವಾ ರೀತಿಗಳಲ್ಲಿ ನಷ್ಟ ಎದುರಿಸುತ್ತಿದ್ದೇವೆ. ಅಂದರೆ ನಾವು ಹೆಚ್ಚಿನ ಕಾರ್ಪೊರೇಟ್ ತೆರಿಗೆ ವ್ಯವಸ್ಥೆ ಅಥವಾ ಆಡಳಿತ ಹೊಂದಿದ್ದೇವೆ ಎಂದು ಪರಿಗಣಿಸಿದರೂ, ಅತಿಯಾದ ತೆರಿಗೆ ವಿನಾಯಿತಿಗಳಿಂದಾಗಿ ನಾವು ಆ ತೆರಿಗೆ ಅಂದರೆ ಹೆಚ್ಚಿನ ದರದ ಪಡೆಯುತ್ತಿಲ್ಲ. ವಿನಾಯಿತಿ ಆಡಳಿತವು ಒತ್ತಡದ ಗುಂಪುಗಳು, ವ್ಯಾಜ್ಯ ಅಥವಾ ದಾವೆ ಮತ್ತು ಆದಾಯದ ನಷ್ಟಕ್ಕೆ ಕಾರಣವಾಗಿದೆ. ಇದು ತಪ್ಪಿಸಬಹುದಾದ ಅವಕಾಶದ ವಿವೇಚನೆಗೆ ಅವಕಾಶ ನೀಡುತ್ತದೆ. ಆದ್ದರಿಂದ, ಮುಂದಿನ 4 ವರ್ಷಗಳಲ್ಲಿ ಕಾರ್ಪೊರೇಟ್ ತೆರಿಗೆ ದರವನ್ನು 30%ನಿಂದ 25%ಗೆ ಇಳಿಸಲು ನಾನು ಉದ್ದೇಶಿಸಿದ್ದೇನೆ. ಇದು ಹೆಚ್ಚಿನ ಮಟ್ಟದ ಹೂಡಿಕೆ, ಹೆಚ್ಚಿನ ಆರ್ಥಿಕ ಬೆಳವಣಿಗೆ ಮತ್ತು ಹೆಚ್ಚಿನ ಉದ್ಯೋಗ ಸೃಷ್ಟಿಗಳಿಗೆ ಕಾರಣವಾಗುತ್ತದೆ. ಈ ಕಡಿತದ ಪ್ರಕ್ರಿಯೆಯು ಅಗತ್ಯವಾಗಿ ತರ್ಕಬದ್ಧಗೊಳಿಸುವಿಕೆ ಮತ್ತು ಕಾರ್ಪೊರೇಟ್ ತೆರಿಗೆದಾರರಿಗೆ ವಿವಿಧ ರೀತಿಯ ತೆರಿಗೆ ವಿನಾಯಿತಿಗಳು ಮತ್ತು ಪ್ರೋತ್ಸಾಹಗಳನ್ನು ತೆಗೆದುಹಾಕುವುದರಲ್ಲಿ ಇರಬೇಕು, ಇದು ಪ್ರಾಸಂಗಿಕವಾಗಿ ಹೆಚ್ಚಿನ ಸಂಖ್ಯೆಯ ತೆರಿಗೆ ವಿವಾದಗಳಿಗೆ ಕಾರಣವಾಗಿದೆ..."

ಅದರಂತೆ, ವಿನಾಯಿತಿ ಮತ್ತು ಕಡಿತಗಳನ್ನು ತೆಗೆದುಹಾಕುವ ಪ್ರಕ್ರಿಯೆ ಪ್ರಾರಂಭವಾಯಿತು. ಈಗಿರುವ ಹೂಡಿಕೆಗೆ ಇರುವ ವಿನಾಯಿತಿಗಳು ಹಳೆಯದಾಗಿರುವುದರಿಂದ, 4 ವರ್ಷಗಳಲ್ಲಿ ತೆರಿಗೆ ದರಗಳನ್ನು ಕಡಿಮೆ ಮಾಡುವುದಾಗಿ ಘೋಷಿಸಲಾಗಿದೆ. ಇದಲ್ಲದೆ, ಐತಿಹಾಸಿಕ ತೆರಿಗೆ ಸುಧಾರಣೆಯಲ್ಲಿ, ಕಾರ್ಪೊರೇಟ್ ತೆರಿಗೆ ದರಗಳನ್ನು ತೆರಿಗೆ ಕಾನೂನುಗಳು (ತಿದ್ದುಪಡಿ) ಸುಗ್ರೀವಾಜ್ಞೆ 2019ರ ಮೂಲಕ ಅಂದರೆ 2019 ಸೆಪ್ಟೆಂಬರ್ 20ರಂದು 25.17% ದರಕ್ಕೆ (ಸರ್ಚಾರ್ಜ್ ಮತ್ತು ಸೆಸ್ ಸೇರಿದಂತೆ) ಅಸ್ತಿತ್ವದಲ್ಲಿರುವ ದೇಶೀಯ ಕಂಪನಿಗಳಿಗೆ, ನಿರ್ದಿಷ್ಟಪಡಿಸಿದ ವಿನಾಯಿತಿಗಳು/ಕಡಿತಗಳನ್ನು ಅವರ ಆಯ್ಕೆಯಲ್ಲಿ ಕಡಿಮೆ ಮಾಡಲಾಗಿದೆ. 2023 ಮಾರ್ಚ್ 31ರಂದು ಅಥವಾ ಮೊದಲು ಉತ್ಪಾದನೆ ಪ್ರಾರಂಭಿಸುವ (ನಂತರ 2024 ಮಾರ್ಚ್ 31ರ ವರೆಗೆ ವಿಸ್ತರಿಸಲಾಗಿದೆ) ಹೊಸ ದೇಶೀಯ ಉತ್ಪಾದನಾ ಕಂಪನಿಗಳಿಗೆ (1 ಅಕ್ಟೋಬರ್ 2019 ರಂದು ಅಥವಾ ನಂತರ ಸಂಯೋಜಿಸಲಾಗಿದೆ) 17.16% (ಸರ್ಚಾರ್ಜ್ ಮತ್ತು ಸೆಸ್ ಸೇರಿದಂತೆ)ಕಡಿಮೆ ದರ ಒದಗಿಸಲಾಗಿದೆ. ಇದನ್ನು ನಂತರ ತೆರಿಗೆ ಕಾನೂನುಗಳ (ತಿದ್ದುಪಡಿ) ಕಾಯಿದೆ 2019 ಮೂಲಕ ಜಾರಿಗೊಳಿಸಲಾಯಿತು. ಸಹಕಾರಿ ಸಂಘಗಳಿಗೆ ಇದೇ ರೀತಿಯ ಕಡಿಮೆ ತೆರಿಗೆ ದರಗಳನ್ನು ಒದಗಿಸಲಾಗಿದೆ.

2020ರಲ್ಲಿ ವೈಯಕ್ತಿಕ ಆದಾಯ ತೆರಿಗೆಯಲ್ಲಿ ಇದೇ ರೀತಿಯ ಸುಧಾರಣೆಗಳನ್ನು ಕೈಗೊಳ್ಳಲಾಯಿತು, ತೆರಿಗೆದಾರರಿಗೆ ವಿನಾಯಿತಿ/ಕಡಿತವಿಲ್ಲದೆ, ಕಡಿಮೆ ತೆರಿಗೆ ದರಗಳೊಂದಿಗೆ ಹೊಸ ತೆರಿಗೆ ಪದ್ಧತಿಗೆ ಬದಲಾಯಿಸುವ ಆಯ್ಕೆ ಒದಗಿಸಲಾಯಿತು. ಆದರೆ, 2023ರ ಹಣಕಾಸು ಕಾಯಿದೆಯಲ್ಲಿ ಹೊಸ ತೆರಿಗೆ ಪದ್ಧತಿಯಲ್ಲಿ ತೆರಿಗೆ ದರಗಳನ್ನು ಇನ್ನಷ್ಟು ಆಕರ್ಷಕವಾಗಿಸಲು ದರ ಕಡಿಮೆ ಮಾಡಲಾಗಿದೆ.

ಆದಾಗ್ಯೂ, ಕಾರ್ಪೊರೇಟ್‌ಗಳಿಗೆ ಪ್ರಮುಖ ಸುಧಾರಣೆಯ ನಂತರ, ಆರ್ಥಿಕತೆಯು ಕೋವಿಡ್ ಕಾಲಘಟ್ಟದಲ್ಲಿ ಪ್ರಮುಖ ಸವಾಲು ಎದುರಿಸಿತು. ಈ ಸಮಯದಲ್ಲಿ, ಅನೇಕ ದೇಶಗಳು ಹೊಸ ತೆರಿಗೆಗಳನ್ನು ವಿಧಿಸುವುದನ್ನು ಪ್ರತಿಪಾದಿಸುತ್ತಿದ್ದವು. ಆದಾಗ್ಯೂ, ಸರ್ಕಾರವು ಸ್ಥಿರವಾದ ತೆರಿಗೆ ಪದ್ಧತಿ ಒದಗಿಸುವ ತನ್ನ ಸಂಕಲ್ಪ ಮುಂದುವರೆಸಿತು. ಕೋವಿಡ್ ಸಮಯದಲ್ಲಿ ಆರ್ಥಿಕತೆಯ ನಿರ್ವಹಣೆ ಮತ್ತು ಕೋವಿಡ್ ನಂತರದ



Scanned with ACE Scanner

ತೆರಿಗೆ ಸಂಗ್ರಹಗಳಲ್ಲಿ ಹೆಚ್ಚಳವು ಅನೇಕ ಅಂತಾರಾಷ್ಟ್ರೀಯ ಸಂಸ್ಥೆಗಳಿಂದ ಮೆಚ್ಚುಗೆ ಪಡೆದಿದೆ. ವಿನಾಯಿತಿ/ಕಡಿತಗಳನ್ನು ತೆಗೆದುಹಾಕುವ ಮೂಲಕ ತೆರಿಗೆ ದರಗಳನ್ನು ಕಡಿಮೆ ಮಾಡಿದ ದಿಟ್ಟ ಕ್ರಮವು ಸಹ ಉತ್ತಮ ಫಲಿತಾಂಶಗಳನ್ನು ತೋರಿಸಲು ಪ್ರಾರಂಭಿಸಿತು.

**ತೆರಿಗೆ ನೆಲೆ ವಿಸ್ತರಿಸುವುದು ಮತ್ತು ಆಳಗೊಳಿಸುವುದು**

ದಕ್ಷ ತೆರಿಗೆ ವ್ಯವಸ್ಥೆಯು ಎಲ್ಲಾ ತೆರಿಗೆದಾರರು ತಮ್ಮ ನ್ಯಾಯೋಚಿತ ಪಾಲಿನ ತೆರಿಗೆ ಪಾವತಿಸುವುದನ್ನು ಖಚಿತಪಡಿಸುತ್ತದೆ. ಕಳೆದ ಕೆಲವು ವರ್ಷಗಳಲ್ಲಿ ಈ ಉದ್ದೇಶ ಸಾಧಿಸಲು ಅನೇಕ ಸುಧಾರಣೆಗಳನ್ನು ತೆಗೆದುಕೊಳ್ಳಲಾಗಿದೆ. ಅವುಗಳೆಂದರೆ:

* ಮೂಲದಲ್ಲಿ ಹೊಸ ತೆರಿಗೆ ಕಡಿತ (ಟಿಡಿಎಸ್) ಮತ್ತು ಮೂಲದಲ್ಲಿ ತೆರಿಗೆ ಸಂಗ್ರಹಣೆ (ಟಿಸಿಎಸ್) ನಿಬಂಧನೆಗಳನ್ನು ಪರಿಚಯಿಸಲಾಗಿದೆ, ವೈಯಕ್ತಿಕ/ ಹಿಂದೂ ಅವಿಭಜಿತ ಕುಟುಂಬ (ಎಚ್‌ಯುಎಫ್) ದ ಬಾಡಿಗೆ ಪಾವತಿಯ ಮೇಲೆ ಟಿಡಿಎಸ್, ಇ-ಕಾಮರ್ಸ್ ಕಾರ್ಯಾಚರಣೆಯಲ್ಲಿ ಟಿಡಿಎಸ್, ಮಿತಿಗಿಂತ ಹೆಚ್ಚಿನ ನಗದು ಹಿಂಪಡೆಯುವಿಕೆಯ ಮೇಲೆ ಟಿಡಿಎಸ್, ದೊಡ್ಡ ಪಾವತಿಗಳ ಮೇಲೆ ಟಿಡಿಎಸ್, ವೈಯಕ್ತಿಕ/ ಎಚ್‌ಯುಎಫ್ ಮೂಲಕ, ಸರಕುಗಳ ಖರೀದಿಯ ಮೇಲೆ ಟಿಡಿಎಸ್, ವ್ಯಾಪಾರ/ವೃತ್ತಿಯಲ್ಲಿ ಲಾಭ/ಅನುಕೂಲತೆಯ ಮೇಲೆ ಟಿಡಿಎಸ್, ವರ್ಚುವಲ್ ಡಿಜಿಟಲ್ ಆಸ್ತಿಗಳ ಮೇಲೆ ಟಿಡಿಎಸ್, ಆನ್‌ಲೈನ್ ಆಟಗಳಿಗೆ ಟಿಡಿಎಸ್, ಕಾರು ಖರೀದಿಯ ಮೇಲೆ ಟಿಡಿಎಸ್, ಸರಕುಗಳ ಮಾರಾಟದ ಮೇಲೆ ಟಿಡಿಎಸ್, ಉದಾರೀಕೃತ ಹಣ ರವಾನೆ ಯೋಜನೆ (ಟಿಡಿಎಸ್) ಮೇಲೆ ಮತ್ತು ಸಾಗರೋತ್ತರ ಪ್ರವಾಸ ಕಾರ್ಯಕ್ರಮ ಪ್ಯಾಕೇಜ್ ಖರೀದಿ ಮೇಲೆ ಟಿಡಿಸ್ ಇತ್ಯಾದಿ.

* ಹೆಚ್ಚಿನ ನಿವ್ವಳ ಮೌಲ್ಯದ ತೆರಿಗೆದಾರರು ತಮ್ಮ ನ್ಯಾಯಯುತ ಪಾಲಿನ ತೆರಿಗೆ ಪಾವತಿಸುವುದನ್ನು ಖಚಿತಪಡಿಸಿಕೊಳ್ಳಲು ವಿವಿಧ ಕ್ರಮ ತೆಗೆದುಕೊಳ್ಳಲಾಗಿದೆ. ಉದಾಹರಣೆಗೆ ಮಾರುಕಟ್ಟೆ – ಸಂಯೋಜಿತ ಡಿಬೆಂಚರ್‌ಗಳು ಮತ್ತು ಸಾಲ ಮ್ಯೂಚುಯಲ್ ಫಂಡ್‌ಗಳ ಮಾರಾಟದ ಮೇಲಿನ ಬೆಲೆ ವ್ಯತ್ಯಾಸ ತೆಗೆದುಹಾಕುವುದು, ಸಾಲ ಎಂದು ವರ್ಗೀಕರಿಸಲಾದ ವ್ಯಾಪಾರ ಟ್ರಸ್ಟ್‌ಗಳಿಂದ ಬಂದ ಆದಾಯದ ಮೇಲಿನ ತೆರಿಗೆಯ ಮೇಲಿನ ಅಸ್ಪಷ್ಟತೆ ತೆಗೆದುಹಾಕುವುದು, ವಸತಿ ಆಸ್ತಿಯಲ್ಲಿ ಹೂಡಿಕೆಯ ಮೂಲಕ ದೀರ್ಘಾವಧಿಯ ಬಂಡವಾಳ ಗಳಿಕೆ(ಲಾಭ) ಯ ತೆರಿಗೆ ಉಳಿಸುವ ಮಿತಿ, ಹೆಚ್ಚಿನ ನಿವ್ವಳ ಮೌಲ್ಯದ ತೆರಿಗೆದಾರರಿಗೆ ಹೆಚ್ಚಿನ ಸರ್ಚಾರ್ಜ್ ಇತ್ಯಾದಿ.

* ಕಪ್ಪು ಹಣದ ಸಮಸ್ಯೆ ಎದುರಿಸಲು ಕಾಳಧನ (ಕಪ್ಪುಹಣ – ಬಹಿರಂಗಪಡಿಸದ ವಿದೇಶಿ ಆದಾಯ ಮತ್ತು ಆಸ್ತಿಗಳು) ಮತ್ತು ತೆರಿಗೆ ಕಾಯ್ದೆ, 2015ರ ಹೇರಿಕೆ, ನಿಬಂಧನೆಗಳನ್ನು ಜಾರಿಗೆ ತರಲಾಗಿದೆ, ಇದು ವಿದೇಶದಲ್ಲಿ ಬಚ್ಚಿಟ್ಟಿರುವ ಬಹಿರಂಗಪಡಿಸದ ವಿದೇಶಿ ಆದಾಯ/ಆಸ್ತಿಗಳು. ಬೇನಾಮಿ ವಹಿವಾಟು (ನಿಷೇಧ) (ತಿದ್ದುಪಡಿ) ಕಾಯಿದೆ, 2016 ಅನ್ನು ಬೇನಾಮಿಯಾಗಿ ಹೊಂದಿರುವ ಆಸ್ತಿಗಳನ್ನು ಮರುಪಡೆಯಲು, ಪರಿಣಾಮವಾಗಿ ನಿಬಂಧನೆಗಳೊಂದಿಗೆ ಬೇನಾಮಿ ವಹಿವಾಟುಗಳ ನಿಷೇಧ ಜಾರಿಗೊಳಿಸಲಾಗಿದೆ.

* ಅಘೋಷಿತ ಆದಾಯ/ ಆಸ್ತಿಗಳ ಮಾಹಿತಿ ಸಂಗ್ರಹಿಸಲು ಮೂರನೇ ವ್ಯಕ್ತಿಯ ಮಾಹಿತಿ ಸಂಗ್ರಹಣಾ ಕಾರ್ಯವಿಧಾನ ಬಲಪಡಿಸಲಾಗಿದೆ.

* ನಗದು ವಹಿವಾಟಿನ ಬದಲಿಗೆ ಡಿಜಿಟಲ್ ವಹಿವಾಟಿನ ಬಳಕೆ ಉತ್ತೇಜಿಸಲು ವಿವಿಧ ತಿದ್ದುಪಡಿಗಳನ್ನು ಮಾಡಲಾಗಿದೆ.

**ಆದಾಯ ತೆರಿಗೆ ಇಲಾಖೆಯ ದಕ್ಷತೆ ಹೆಚ್ಚಿಸಲು ತಂತ್ರಜ್ಞಾನ ಬಳಕೆ**

ಸುಲಭವಾಗಿ ವ್ಯಾಪಾರ ಮಾಡುವ ಉಪಕ್ರಮದ ಭಾಗವಾಗಿ, ತೆರಿಗೆ ಕಾನೂನುಗಳ ಸುಲಭ ಅನುಸರಣೆ ಖಚಿತಪಡಿಸಿಕೊಳ್ಳುವುದು ಸರ್ಕಾರದ ಸದಾ ಕಾಲದ ಪ್ರಯತ್ನವಾಗಿದೆ. ತೆರಿಗೆದಾರರು ತಮ್ಮ ನ್ಯಾಯಯುತ ಪಾಲಿನ ತೆರಿಗೆ ಪಾವತಿಸುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳಲು ವರದಿ ಮಾಡುವ ಮೂಲಕ ಅನುಸರಣೆಗೆ ಅವಕಾಶ ಒದಗಿಸಲಾಗಿದೆ. ತೆರಿಗೆದಾರರು ಸ್ವಯಂಪ್ರೇರಣೆಯಿಂದ ತೆರಿಗೆ ಕಾನೂನುಗಳನ್ನು ಅನುಸರಿಸದಿದ್ದಾಗ, ಹೊಸ ವರದಿ ಅಥವಾ ಹೊಸ ಟಿಡಿಎಸ್ (ಮೂಲದಲ್ಲಿ ತೆರಿಗೆ ಕಡಿತ) / ಟಿಸಿಎಸ್ (ಮೂಲದಲ್ಲಿ ತೆರಿಗೆ ಸಂಗ್ರಹ) ನಿಬಂಧನೆಗಳನ್ನು ಪರಿಚಯಿಸುವ ಅವಶ್ಯಕತೆಯಿದೆ. ಇದು ಸಾಮಾನ್ಯವಾಗಿ ಅನುಸರಣೆಯನ್ನು

| ಆರ್ಥಿಕ ವರ್ಷ | ಪ್ರಸಕ್ತ ಬೆಲೆಗೆ ಅನುಗುಣವಾಗಿ ಜಿಡಿಪಿ (ಲಕ್ಷ ಕೋಟಿ ರೂ.ಗಳಲ್ಲಿ) | ನೇರ ತೆರಿಗೆ ಸಂಗ್ರಹಣೆ (ಲಕ್ಷ ಕೋಟಿ ರೂ.ಗಳಲ್ಲಿ) | ಜಿಡಿಪಿ ಬೆಳವಣಿಗೆ | ನೇರ ತೆರಿಗೆ ಬೆಳವಣಿಗೆ |
|---|---|---|---|---|
| 2014–15 | 125.41 | 6.96 | 10.4% | 8.96% |
| 2015–16 | 135.67 | 7.42 | 8.25% | 6.63% |
| 2016–17 | 153.62 | 8.50 | 13.23% | 14.53% |
| 2017–18 | 170.98 | 10.03 | 11.30% | 18.00% |
| 2018–19 | 188.87 | 11.38 | 10.46% | 13.46% |
| 2019–20 | 200.75 | 10.51 | 6.29% | –7.65% |
| 2020–21 | 198.00 | 9.47 | –1.36% | –9.85% |
| 2021–22 | 236.64 | 14.12 | 19.51% | 49.12% |
| 2022–23 | 272.41 | 16.61 | 15.12% | 17.63% |

(ಮೂಲ: ಆದಾಯ ತೆರಿಗೆ ಇಲಾಖೆ ವೆಬ್ ಸೈಟ್‌ನ ಟೈಮ್ ಸರಣಿ ದತ್ತಾಂಶ)



Scanned with ACE Scanner

ಹೆಚ್ಚಿಸುತ್ತದೆ ಮತ್ತು ವ್ಯವಹಾರವನ್ನು ಸುಲಭವಾಗಿಸುವುದರೊಂದಿಗೆ ಸಂಘರ್ಷ-ಗಳನ್ನು ಉಂಟುಮಾಡುತ್ತದೆ. ಈ ಸಂಘರ್ಷವನ್ನು ಎಲ್ಲಾ ದೇಶಗಳಲ್ಲಿನ ನೀತಿ ನಿರೂಪಕರು ಹೆಚ್ಚಾಗಿ ಎದುರಿಸುತ್ತಿದ್ದಾರೆ. ಆದಾಗ್ಯೂ, ಈ ಸಂಘರ್ಷ ಜಯಿಸಲು ತಂತ್ರಜ್ಞಾನವು ಶಕ್ತವಾಗಿದೆ. ಆದಾಯ ತೆರಿಗೆ ಇಲಾಖೆಯು ಹಲವಾರು ಉಪಕ್ರಮಗಳನ್ನು ಕೈಗೊಂಡಿದ್ದು, ಅದು ತೆರಿಗೆದಾರರಿಗೆ ಸ್ವಯಂಪ್ರೇರಣೆಯಿಂದ ತೆರಿಗೆ ಕಾನೂನುಗಳನ್ನು ಅನುಸರಿಸಲು ಸಹಾಯ ಮಾಡಿದೆ. ಈ ಸುಧಾರಣೆಗಳು ಯಾವುವೆಂದರೆ:

1 ಈ ಮೊದಲು, 3ನೇ ಪಾರ್ಟಿಯ ಮಾಹಿತಿಯನ್ನು ಮೌಲ್ಯಮಾಪನಗಳನ್ನು ಪುನಃ ತೆರೆಯಲು ಬಳಸಲಾಗುತ್ತಿತ್ತು, ಇದು ಸಾಮಾನ್ಯವಾಗಿ ಸುದೀರ್ಘ ವ್ಯಾಜ್ಯ ಅಥವಾ ದಾವೆಗೆ ಕಾರಣವಾಗುತ್ತಿತ್ತು. ಈಗ 3ನೇ ಪಾರ್ಟಿಯ ಮಾಹಿತಿಯು ವಾರ್ಷಿಕ ಮಾಹಿತಿ ಹೇಳಿಕೆಯಲ್ಲಿ (ಎಐಎಸ್) ತುಂಬಿರುತ್ತದೆ. ಇದು ತೆರಿಗೆದಾರರಿಗೆ ತಮ್ಮ ತೆರಿಗೆ ರಿಟರ್ನ್ ಸಲ್ಲಿಸುವ ಸಮಯದಲ್ಲಿ ಗೋಚರಿಸುತ್ತದೆ. ಹೀಗಾಗಿ, ತೆರಿಗೆದಾರ ತನ್ನ ತೆರಿಗೆ ರಿಟರ್ನ್‌ನಲ್ಲಿ ಎಲ್ಲಾ ಆದಾಯ ಸೇರಿಸಲು ಮತ್ತು ಸ್ವಯಂಪ್ರೇರಣೆಯಿಂದ ಸಮರ್ಪಕ ಅಥವಾ ನಿಖರವಾದ ತೆರಿಗೆ ಪಾವತಿಸಲು ಒತ್ತಾಯಿಸುತ್ತದೆ.

2 ಕೆಲವು ಹೆಚ್ಚುವರಿ ತೆರಿಗೆಯೊಂದಿಗೆ ರಿಟರ್ನ್ಸ್ ನವೀಕರಿಸುವ ಸೌಲಭ್ಯದೊಂದಿಗೆ ಇ-ಪರಿಶೀಲನಾ ಯೋಜನೆ ಪರಿಚಯಿಸಲಾಗಿದೆ. ಕೆಲವು ಸಂದರ್ಭಗಳಲ್ಲಿ, ಅಪಾಯದ ನಿಯತಾಂಕಗಳನ್ನು ಆಧರಿಸಿ ಆಯ್ಕೆ ಮಾಡಲಾಗಿದೆ. ಆದಾಯ ತೆರಿಗೆ ರಿಟರ್ನ್‌ನಲ್ಲಿ ಒದಗಿಸಲಾದ ಮಾಹಿತಿ ಮತ್ತು 3ನೇ ಪಾರ್ಟಿಯ ಮಾಹಿತಿಯ ನಡುವಿನ ಹೊಂದಾಣಿಕೆ ಪರಿಶೀಲಿಸಲು ಈ ಯೋಜನೆಯು ಅವಕಾಶ ನೀಡುತ್ತದೆ. ಇದು ತೆರಿಗೆದಾರರಿಗೆ ತಮ್ಮ ತೆರಿಗೆ ಮಾಹಿತಿ(ಸ್ಥಾನ) ವಿವರಿಸಲು ಮತ್ತು ಅಗತ್ಯವಿದ್ದರೆ ಅವರ ಆದಾಯ ನವೀಕರಿಸಲು ಮತ್ತೊಂದು ಅವಕಾಶ ನೀಡುತ್ತದೆ. ಹೀಗಾಗಿ, ತೆರಿಗೆದಾರರು ತಮ್ಮ ಜವಾಬ್ದಾರಿಗಳನ್ನು ಸ್ವಯಂಪ್ರೇರಣೆಯಿಂದ ಅನುಸರಿಸಲು ಮತ್ತೊಂದು ಅವಕಾಶ ಪಡೆಯುತ್ತಾರೆ.

3 ತೆರಿಗೆ ಸಲ್ಲಿಕೆ ಪ್ರಕ್ರಿಯೆಯಲ್ಲಿ ದಕ್ಷತೆ ತರಲು ಮತ್ತು ತೆರಿಗೆದಾರರಿಗೆ ಆದಾಯ ತೆರಿಗೆ ಕಚೇರಿಗೆ ಭೇಟಿ ನೀಡದೆ ವಿವಿಧ ಪ್ರಶ್ನೆಗಳಿಗೆ ಉತ್ತರಿಸುವ ಅನುಕೂಲ ಒದಗಿಸಲು ಆದಾಯ ತೆರಿಗೆ ಇಲಾಖೆಯಲ್ಲಿ ಮೌಲ್ಯಮಾಪನ ಮತ್ತು ಮೇಲ್ಮನವಿಯ ಮುಖರಹಿತ (ಫೇಸ್ ಲೆಸ್) ವ್ಯವಸ್ಥೆ ಪ್ರಾರಂಭವಾಗಿದೆ.

4 ಹೆಚ್ಚುವರಿಯಾಗಿ, ಆದಾಯ ತೆರಿಗೆ ಇಲಾಖೆಯು ನೇರ ತೆರಿಗೆ ಇ-ಆಡಳಿತ ಉಪಕ್ರಮಗಳಲ್ಲಿ ದಾಪುಗಾಲು ಹಾಕಿದೆ. ಇದರಲ್ಲಿ ತೆರಿಗೆದಾರರಿಗೆ ಒಂದೆಡೆ ತಂತ್ರಜ್ಞಾನ-ಚಾಲಿತ ಸೇವೆಗಳನ್ನು ಒದಗಿಸಲಾಗುತ್ತಿದೆ. ಇಲಾಖೆಯೊಳಗೆ ರೀಫಂಡ್ (ಮರುಪಾವತಿ) ಅವಕಾಶ ನೀಡುವುದರೊಂದಿಗೆ ತೆರಿಗೆ ರಿಟರ್ನ್ಸ್ ಅನ್ನು ಪ್ರಕ್ರಿಯೆಗೊಳಿಸುತ್ತಿದೆ. ಸಿಪಿಸಿ-ಐಟಿಆರ್, ಸಿಪಿಸಿ-ಟಿಡಿಎಸ್, ಇ-ಫೈಲಿಂಗ್ ವ್ಯವಸ್ಥೆಗಳು, ಮರುಪಾವತಿ ಬ್ಯಾಂಕರ್‌ಗಳ ಯೋಜನೆ ಮತ್ತು ಆನ್‌ಲೈನ್ ತೆರಿಗೆ ಪಾವತಿಗಳು ತೆರಿಗೆ ರಿಟರ್ನ್ಸ್‌ಗೆ ತಡೆರಹಿತ ಆನ್‌ಲೈನ್ ವ್ಯವಸ್ಥೆ, ತೆರಿಗೆಗಳ ಆನ್‌ಲೈನ್ ಪಾವತಿ, ತೆರಿಗೆ ರಿಟರ್ನ್ಸ್‌ಗಳ ತ್ವರಿತ ಪ್ರಕ್ರಿಯೆ ಮತ್ತು ಮರುಪಾವತಿ (ರೀಫಂಡ್‌ಗಳ ತ್ವರಿತ ವಿತರಣೆ ಖಾತ್ರಿಪಡಿಸುವ ತಂತ್ರಜ್ಞಾನ ಬೆಳವಣಿಗೆಗಳಾಗಿವೆ. ಬ್ಯಾಂಕುಗಳು, ಸರ್ಕಾರಿ ಏಜೆನ್ಸಿಗಳು, 3ನೇ ಪಾರ್ಟಿಯ ಏಜೆನ್ಸಿಗಳು, ತೆರಿಗೆದಾರರು, ತೆರಿಗೆ ವೃತ್ತಿಪರರು ಮತ್ತು ತೆರಿಗೆ ನಿರ್ವಾಹಕರು ಸೇರಿದಂತೆ ಎಲ್ಲಾ ಪಾಲುದಾರರನ್ನು ಒಳಗೊಂಡಂತೆ ಇವೆಲ್ಲವನ್ನೂ ಸಾಧಿಸಲಾಗಿದೆ.

**ತೆರಿಗೆ ನಿಶ್ಚಿತತೆ (ಪರಿಪೂರ್ಣತೆ) ಒದಗಿಸುವ ಮೂಲಕ ವ್ಯಾಜ್ಯಗಳನ್ನು ಕಡಿಮೆ ಮಾಡುವುದು**

ತೆರಿಗೆಗೆ ಸಂಬಂಧಿಸಿದ ವ್ಯಾಜ್ಯಗಳು ಎಲ್ಲಾ ಪಾಲುದಾರರ ಸಾಕಷ್ಟು ಸಮಯ ಮತ್ತು ಸಂಪನ್ಮೂಲಗಳನ್ನು ಬಳಸುತ್ತವೆ. ಅಂದರೆ ತೆರಿಗೆದಾರರು, ತೆರಿಗೆ ಆಡಳಿತ, ನ್ಯಾಯಾಲಯಗಳು ಮತ್ತು ನ್ಯಾಯಮಂಡಳಿಗಳು. ವಿವಾದಗಳ ಆರಂಭಿಕ ಪರಿಹಾರವು ತೆರಿಗೆ ಸಂಗ್ರಹಕ್ಕೆ ದಕ್ಷತೆ ತರುತ್ತದೆ. ವ್ಯಾಜ್ಯಗಳನ್ನು ಕಡಿಮೆ ಮಾಡಲು ಇದು ಸರ್ಕಾರದ ದಿಟ್ಟ ಪ್ರಯತ್ನವಾಗಿದೆ. ಈ ನಿಟ್ಟಿನಲ್ಲಿ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಬೆಲೆ ವರ್ಗಾವಣೆಯಲ್ಲಿ ಮುಂಗಡ ಬೆಲೆ ಒಪ್ಪಂದ (ಎಪಿಎ), ವ್ಯಾಜ್ಯಗಳನ್ನು ಕಡಿಮೆ ಮಾಡುವಲ್ಲಿ ನಿಜವಾದ ಯಶೋಗಾಥೆಯಾಗಿದೆ. ಕಳೆದ ವರ್ಷ, ದಾಖಲೆಯ 95 ಎಪಿಎಗಳಿಗೆ ಸಹಿ ಮಾಡಲಾಗಿದೆ. ತೆರಿಗೆ ವಿವಾದ ಕಡಿಮೆ ಮಾಡಲು ವಿವಿಧ ವಿಷಯಗಳ ಬಗ್ಗೆ ಖಚಿತತೆ ಒದಗಿಸಲು ಸರ್ಕಾರವು ತಿದ್ದುಪಡಿಗಳನ್ನು ಪರಿಚಯಿಸಿದೆ. ಅಂತೆಯೇ, ವ್ಯಾಖ್ಯಾನದ ಬಗ್ಗೆ ಸ್ಪಷ್ಟತೆ ನೀಡಲು ಸುತ್ತೋಲೆಗಳು/ಪದೇಪದೇ ಕೇಳಲಾಗುವ ಪ್ರಶ್ನೆ (ಎಫ್‌ಎಕ್ಯು)ಗಳನ್ನು ನಿಯಮಿತವಾಗಿ ಹೊರಡಿಸಲಾಗಿದೆ.

ತೆರಿಗೆ ರಿಟರ್ನ್ ನವೀಕರಿಸುವ ಸೌಲಭ್ಯದೊಂದಿಗೆ ಇ-ಪರಿಶೀಲನಾ ಯೋಜನೆ ಬಗ್ಗೆ ಈ ಹಿಂದೆ ಚರ್ಚಿಸಲಾಗಿದೆ. ಇದು ಅನೇಕ ಸಂದರ್ಭಗಳಲ್ಲಿ ಮರು-ಮೌಲ್ಯಮಾಪನ ಸೂಚನೆಗಳನ್ನು ನೀಡುವುದಕ್ಕೆ ಕಾರಣಗಳನ್ನು ಕಡಿಮೆ ಮಾಡಿದೆ. ಕೇವಲ ಒಂದು ವರ್ಷದ ಅವಧಿಯಲ್ಲಿ 30 ಲಕ್ಷಕ್ಕೂ ಹೆಚ್ಚು ನವೀಕರಿಸಿದ ರಿಟರ್ನ್ಸ್‌ಗಳನ್ನು ಸಲ್ಲಿಸಲಾಗಿದೆ ಮತ್ತು ಬಾಕಿ ಇರುವ ತೆರಿಗೆಗಳನ್ನು ಪಾವತಿಸಲಾಗಿದೆ. ಈ ಎಲ್ಲ ಪ್ರಕರಣಗಳಲ್ಲಿ ಮರುಮೌಲ್ಯಮಾಪನ ನೋಟಿಸ್ ಜಾರಿ ಮಾಡಿದ್ದರೆ ಅದು ದೀರ್ಘಕಾಲೀನ ವ್ಯಾಜ್ಯಕ್ಕೆ ಕಾರಣವಾಗುತ್ತಿತ್ತು.

**ಈ ಎಲ್ಲಾ ಸುಧಾರಣೆಗಳ ಫಲಿತಾಂಶಗಳು**

ಸರ್ಕಾರವು ಕೈಗೊಂಡ ವಿವಿಧ ನೇರ ತೆರಿಗೆ ಸುಧಾರಣೆಗಳ ಪರಿಣಾಮವಾಗಿ, ನೇರ ತೆರಿಗೆಯಲ್ಲಿ ತೆರಿಗೆ ಸಂಗ್ರಹವು ಹಲವು ವರ್ಷಗಳಲ್ಲಿ ಗಮನಾರ್ಹ ಹೆಚ್ಚಳ ತೋರಿಸಿದೆ. ಇದರರ್ಥ ದೀರ್ಘಾವಧಿಯಲ್ಲಿ, ನೇರ ತೆರಿಗೆ ಬೆಳವಣಿಗೆಯು ಜಿಡಿಪಿಯ ಬೆಳವಣಿಗೆಗಿಂತ ಏರಿಕೆ ಒತ್ತಡ ಪ್ರಮಾಣದಲ್ಲಿ ಒಂದಕ್ಕಿಂತ ಹೆಚ್ಚಾಗಿದೆ. ಇದು ತೆರಿಗೆ ಸಂಗ್ರಹಣೆಯಲ್ಲಿನ ದಕ್ಷತೆ ಹಾಗೂ ನೇರ ತೆರಿಗೆ ಸುಧಾರಣೆಗಳ ಸಕಾರಾತ್ಮಕ ಪರಿಣಾಮವನ್ನು ಸೂಚಿಸುತ್ತದೆ.

(46ನೇ ಪುಟಕ್ಕೆ)



Scanned with ACE Scanner

# ಗ್ರಾಹಕ ಸಂರಕ್ಷಣಾ ಕಾಯಿದೆ – 2019

**ಗ್ರಾಹಕ ಸಂರಕ್ಷಣಾ ಕಾಯಿದೆ, 2019 ರ ನಿಬಂಧನೆಗಳ ಅಡಿ, ಜುಲೈ 2020 ರಿಂದ ಅನ್ವಯವಾಗುವಂತೆ ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರ (ಸಿಸಿಪಿಎ) ವನ್ನು ಸ್ಥಾಪಿಸಲಾಗಿದೆ.**

**ಇದು ಒಂದು ವರ್ಗದ ರೂಪದಲ್ಲಿ ಸಾರ್ವಜನಿಕ ಮತ್ತು ಗ್ರಾಹಕರ ಹಿತಾಸಕ್ತಿಗಳಿಗೆ ಹಾನಿಯುಂಟುಮಾಡುವ ಸುಳ್ಳು ಅಥವಾ ತಪ್ಪುದಾರಿಗೆಳೆಯುವ ಜಾಹಿರಾತುಗಳಿಗೆ ಸಂಬಂಧಿಸಿದ ವಿಷಯಗಳನ್ನೂ ನಿಯಂತ್ರಿಸುತ್ತದೆ.**

ಗ್ರಾಹಕರ ರಕ್ಷಣೆಗಾಗಿ ನಿಬಂಧನೆಗಳನ್ನು ಮತ್ತಷ್ಟು ಸಶಕ್ತಗೊಳಿಸಲು, ವಿಶೇಷವಾಗಿ ಜಾಗತೀಕರಣದ ಹೊಸ ಯುಗದಲ್ಲಿ, ಆನ್ಲೈನ್ ಪ್ಲಾಟ್ ಫಾರ್ಮ್‌ಗಳು, ಇ-ಕಾಮರ್ಸ್ ಮಾರುಕಟ್ಟೆಗಳು, ಮುಂತಾದವುಗಳು ರೂಢಿಯಲ್ಲಿರುವುದರಿಂದ, 1986 ರ ಗ್ರಾಹಕ ಸಂರಕ್ಷಣಾ ಕಾಯ್ದೆ ಸ್ಥಾನದಲ್ಲಿ ಗ್ರಾಹಕ ಸಂರಕ್ಷಣಾ ಕಾಯಿದೆ 2019 ಅನ್ನು ಜಾರಿಗೊಳಿಸಲಾಗಿದೆ. ಇದು ಆನ್‌ಲೈನ್ ವಹಿವಾಟು ಕೈಗೊಳ್ಳುವ ಗ್ರಾಹಕರಿಗೆ ಸುಧಾರಿತ ರಕ್ಷಣೆಯನ್ನು ಒದಗಿಸುತ್ತದೆ. ಗ್ರಾಹಕ ಸಂರಕ್ಷಣಾ ಕಾಯಿದೆ 2019 'ಗ್ರಾಹಕ' ಎಬ ಪದದ ವ್ಯಾಖ್ಯೆಯ ವ್ಯಾಪ್ತಿಯನ್ನು ವಿಸ್ತರಿಸಿದೆ. ಆನ್‌ಲೈನ್‌ನಲ್ಲಿ ಅಥವಾ ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ಸರಕುಗಳನ್ನು ಖರೀದಿಸುವ ಅಥವಾ ಸೇವೆಗಳನ್ನು ಪಡೆಯುವ ಗ್ರಾಹಕರನ್ನು ಇದು ಒಳಗೊಳ್ಳುತ್ತದೆ. ಈ ಸೌಲಭ್ಯ 1986ರ ಗ್ರಾಹಕ ಸಂರಕ್ಷಣಾ ಕಾಯಿದೆಯಲ್ಲಿ ಇರಲಿಲ್ಲ. ಗ್ರಾಹಕ ಸಂರಕ್ಷಣಾ ಕಾಯಿದೆ 2019 – ಯಾವುದೇ ಆಡಿಯೊ ಅಥವಾ ದೃಶ್ಯ ರೂಪದ ಪ್ರಚಾರ, ಪ್ರಾತಿನಿಧ್ಯ, ಅನುಮೋದನೆ ಅಥವಾ ಉಚ್ಚಾರಣೆಯ ಮೂಲಕ ಎಲೆಕ್ಟ್ರಾನಿಕ್ ಮಾಧ್ಯಮ, ಅಂತರ್ಜಾಲ ಅಥವಾ ವೆಬ್‌ಸೈಟ್ ಇತರೆ ಮಾಧ್ಯಮಗಳ ಮೂಲಕ ಮಾಡಿದ ಜಾಹಿರಾತುಗಳ ವ್ಯಾಖ್ಯಾನವನ್ನು ಕೂಡ ಒಳಗೊಂಡಿದೆ.

ತಪ್ಪುದಾರಿಗೆಳೆಯುವ ಜಾಹಿರಾತು-ಗಳನ್ನು ತಡೆಯುವ ಮತ್ತು ಅಂತಹ ಜಾಹಿರಾತುಗಳಿಂದ ಶೋಷಣೆಗೆ ಒಳಗಾಗಬಹುದಾದ ಅಥವಾ ಅಂತಹ ಜಾಹಿರಾತುಗಳ ಪರಿಣಾಮಕ್ಕೆ ಒಳಗಾಗುವ ಗ್ರಾಹಕರನ್ನು ರಕ್ಷಿಸುವ ಉದ್ದೇಶದಿಂದ ಸಿಸಿಪಿಎ ದಾರಿತಪ್ಪಿಸುವ ಜಾಹಿರಾತುಗಳ ತಡೆಗೆ 9 ಜೂನ್ 2022 ರಂದು ಮಾರ್ಗಸೂಚಿಗಳನ್ನು ಜಾರಿಗೊಳಿಸಿದೆ. ಈ ಮಾರ್ಗಸೂಚಿಗಳ ಪ್ರಕಾರ, ಜಾಹಿರಾತಿನ ಅನುಮೋದನೆಗೆ ಸೂಕ್ತ ಎಚ್ಚರಿಕೆ ಅವಶ್ಯಕವಾಗಿರುತ್ತದೆ. ಜಾಹಿರಾತಿನಲ್ಲಿ ಅಂತಹ ಯಾವುದೇ ಅನುಮೋದನೆಯು – ಪ್ರತಿನಿಧಿಸುವ ವ್ಯಕ್ತಿ, ಗುಂಪು ಅಥವಾ ಸಂಸ್ಥೆಯ ವಾಸ್ತವ, ಸಮಂಜಸ ಮತ್ತು ಪ್ರಸ್ತುತ ಅಭಿಪ್ರಾಯವನ್ನು ಪ್ರತಿಬಿಂಬಿಸಬೇಕು. ಅಲ್ಲದೆ ಅದರ ಬಗ್ಗೆ ಸಾಕಷ್ಟು ಮಾಹಿತಿಯನ್ನು ಆಧರಿಸಿರಬೇಕು ಅಥವಾ ಗುರುತಿಸಲಾದ ಸರಕುಗಳು, ಉತ್ಪನ್ನ ಅಥವಾ ಸೇವೆಯ ಸ್ವಯಂ ಅನುಭವ ಹೊಂದಿರಬೇಕು. ಈ ಅಂಶಗಳನ್ನು ಆಧರಿಸದೆ ವಂಚಕ ಪ್ರವೃತ್ತಿ ಹೊಂದಿರಬಾರದು. ಇದಲ್ಲದೆ, ಉತ್ಪನ್ನದ ವ್ಯಾಪಾರಿ, ತಯಾರಕರು ಅಥವಾ ಜಾಹಿರಾತುದಾರರ ಮಧ್ಯೆ ಯಾವುದೇ

my GOV मेरी सरकार

## ಗ್ರಾಹಕರ ಬಲವರ್ಧನೆ



**ಗ್ರಾಹಕ ರಕ್ಷಣಾ ಕಾಯ್ದೆ 2019**
**ಜಾರಿ (1/4)**

ಗ್ರಾಹಕರ ವ್ಯಾಜ್ಯಗಳ ಕುರಿತು ಕಾಲಕಾಲಕ್ಕೆ ಕಾರ್ಯನಿರ್ವಹಿಸಲು ಮತ್ತು ತ್ವರಿತಗತಿಯಲ್ಲಿ ಪರಿಹರಿಸಲು ಗ್ರಾಹಕ ರಕ್ಷಣಾ ಕಾಯ್ದೆ 1986 ನ್ನು ಗ್ರಾಹಕ ರಕ್ಷಣಾ ಕಾಯ್ದೆ 2019 ರಿಂದ ಬದಲಾಯಿಸಲಾಗಿದೆ

ಕೆಳಕಂಡ ವಿಷಯಗಳ ಕುರಿತು ಹೊಸ ಕಾಯ್ದೆ ವಿವಿಧ ಸೂಚಿಸಿದ ನಿಯಮಗಳು ಮತ್ತು ನಿಬಂಧನೆಗಳ ಮೂಲಕ ಗ್ರಾಹಕರ ಹಕ್ಕುಗಳನ್ನು ರಕ್ಷಿಸುತ್ತದೆ ಮತ್ತು ಬಲವರ್ಧನೆಗೊಳಿಸುತ್ತದೆ

- ಗ್ರಾಹಕ ರಕ್ಷಣಾ ಪರಿಷತ್ತುಗಳು
- ಗ್ರಾಹಕರ ವಿವಾದ ಪರಿಹಾರ ಆಯೋಗ
- ಮಧ್ಯಸ್ಥಿಕೆ
- ಉತ್ಪನ್ನಗಳ ಬಾಧ್ಯತೆ
- ಇ ಕಾಮರ್ಸ್ ಮತ್ತು ನೇರ ಮಾರಾಟದ ಕುರಿತು ನಿಯಮಗಳು
- ಸಂಶಯಪೂರಿತ ವಸ್ತುಗಳ ಅಥವಾ ನಕಲಿ ವಸ್ತುಗಳ ಮಾರಾಟಕ್ಕೆ ಅಥವಾ ಉತ್ಪಾದನೆಗೆ ಶಿಕ್ಷೆ

my GOV मेरी सरकार

## ಗ್ರಾಹಕರ ಬಲವರ್ಧನೆ



**ಗ್ರಾಹಕ ರಕ್ಷಣಾ ಕಾಯ್ದೆ 2019**
**ಜಾರಿ (2/4)**

ಗ್ರಾಹಕ ಹಕ್ಕುಗಳನ್ನು ಪ್ರೋತ್ಸಾಹಿಸಲು, ರಕ್ಷಿಸಲು ಮತ್ತು ಜಾರಿಗೆ ತರಲು ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರ ಸ್ಥಾಪನೆ (ಸಿಸಿಪಿಎ)

ಈ ಕೆಳಗಿನ ಅಂಶಗಳ ಮೇಲೆ ಕಾರ್ಯ ಮಾಡಲು ಸಿಸಿಪಿಎ ಗೆ ಅಧಿಕಾರ ನೀಡಲಾಗಿದೆ


- ಗ್ರಾಹಕರ ಹಕ್ಕುಗಳ ಉಲ್ಲಂಘನೆಯಾದಲ್ಲಿ ತನಿಖೆ ಕೈಗೊಳ್ಳುವುದು, ಸಂಬಂಧಿತ ಸಂಸ್ಥೆಗಳಿಗೆ ದೂರು ನೀಡುವುದು/ಕಾನೂನು ಕ್ರಮ ಕೈಗೊಳ್ಳುವುದು
- ಅಸುರಕ್ಷಿತ ಸರಕು ಅಥವಾ ಸೇವೆಗಳ ಆರ್ಡರ್ ಹಿಂಪಡೆಯುವುದು
- ನ್ಯಾಯಸಮ್ಮತವಲ್ಲದ ವ್ಯಾಪಾರ ಪದ್ಧತಿ/ತಪ್ಪುದಾರಿಗೆಳೆಯುವಂತಹ ಜಾಹಿರಾತುಗಳ ಉತ್ಪನ್ನಗಳ ಆರ್ಡರ್ ರದ್ದುಗೊಳಿಸುವುದು
- ತಪ್ಪುದಾರಿಗೆಳೆಯುವಂತಹ ಜಾಹಿರಾತುಗಳನ್ನು ಸಿದ್ಧಪಡಿಸುವವರು/ಅನುಮೋದಿಸುವವರು/ಪ್ರಕಟಿಸುವವರ ಮೇಲೆ ದಂಡ ವಿಧಿಸುವುದು



Scanned with ACE Scanner

my GOV

# ಗ್ರಾಹಕರ ಬಲವರ್ಧನೆ



**ಗ್ರಾಹಕ ರಕ್ಷಣಾ ಕಾಯ್ದೆ 2019 ಜಾರಿ (3/4)**

ದೋಷಪೂರಿತ ಉತ್ಪನ್ನಗಳನ್ನು ಅಥವಾ ಸೇವೆಗಳನ್ನು ಒದಗಿಸುವ ತಯಾರಕರು ಮತ್ತು ಸೇವಾ ಪೂರೈಕೆದಾರರನ್ನು ನಿರ್ಬಂಧಿಸಲು ಉತ್ಪನ್ನ ಹೊಣೆಗಾರಿಕೆಯ ನಿಬಂಧನೆ

ಪ್ರಕರಣಗಳ ಶೀಘ್ರ ಇತ್ಯರ್ಥಕ್ಕಾಗಿ ಮಧ್ಯಸ್ಥಿಕೆಯ ಪರ್ಯಾಯ ವಿವಾದ ಪರಿಹಾರ ಕಾರ್ಯವಿಧಾನ

ಸರಳೀಕರಿಸಿದ ಪ್ರಕರಣಗಳ ಪರಿಹಾರ ಕಾರ್ಯವಿಧಾನ

- ರಾಜ್ಯ ಮತ್ತು ಜಿಲ್ಲಾ ಆಯೋಗಗಳು ಈಗ ತಮ್ಮ ತಮ್ಮ ಆದೇಶಗಳ ಅವಲೋಕನ ಮಾಡಬಹುದು
- ತಮ್ಮ ಆದೇಶಗಳನ್ನು ಜಾರಿಗೆ ತರಲು ಗ್ರಾಹಕ ಆಯೋಗಗಳ ಬಲ ವೃದ್ಧಿ
- ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ದೂರು ಸಲ್ಲಿಕೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ವಾದ ವಿವಾದ ಆಲಿಸುವುದು ಜಾರಿಗೆ ತರುವ ಮೂಲಕ ಗ್ರಾಹಕ ಆಯೋಗಗಳನ್ನು ತಲುಪುವ ಪ್ರಕ್ರಿಯೆಯ ಸರಳೀಕರಣ
- ಪ್ರಕರಣ ದಾಖಲಿಸಿದ 21 ದಿನಗಳ ನಂತರ ಸ್ವೀಕಾರಾರ್ಹವೆಂದು ಪರಿಗಣಿಸಲಾಗುವುದು: 2 ನೇ ಹಂತದ ನಂತರ ಕಾನೂನಾತ್ಮಕ ಪ್ರಶ್ನೆಗಳಿದ್ದಲ್ಲಿ ಮಾತ್ರ ಮೇಲ್ಮನವಿ ಸಲ್ಲಿಸಬಹುದಾಗಿದೆ

my GOV

# ಗ್ರಾಹಕರ ಬಲವರ್ಧನೆ



**ಗ್ರಾಹಕ ರಕ್ಷಣಾ ಕಾಯ್ದೆ 2019 ಜಾರಿ (4/4)**

ಇ ಕಾಮರ್ಸ್ ವೇದಿಕೆಗಳಲ್ಲಿ ನ್ಯಾಯಯುತವಲ್ಲದ ವ್ಯಾಪಾರವನ್ನು ತಡೆಯಲು ನಿಯಮಗಳು ಮತ್ತು ನಿಬಂಧನೆಗಳು

- ಪ್ರತಿಯೊಂದು ಇ ಕಾಮರ್ಸ್ ವೇದಿಕೆಯು ಉತ್ಪನ್ನ ಯಾವ ದೇಶದಲ್ಲಿ ಸಿದ್ಧವಾಗಿದೆ ಎಂಬ ಮಾಹಿತಿ ಸೇರಿದಂತೆ, ಉತ್ಪನ್ನವನ್ನು ಹಿಂದಿರುಗಿಸುವ, ಹಣ ಹಿಂದಿರುಗಿಸುವ, ಕುಂದುಕೊರತೆ ಪರಿಹಾರ ಪದ್ಧತಿ ಮುಂತಾದ ಮಾಹಿತಿಯನ್ನು ನೀಡಬೇಕು.
- 48 ಗಂಟೆಗಳೊಳಗೆ ಯಾವುದೇ ಗ್ರಾಹಕರ ದೂರುಗಳ ಸ್ವೀಕೃತಿಯನ್ನು ಖಚಿತಪಡಿಸಬೇಕು
- ಖಚಿತಪಡಿಸಿದ ಒಂದು ತಿಂಗಳೊಳಗೆ ಪರಿಹಾರ ಒದಗಿಸಬೇಕು

ಸಂಶಯಪೂರಿತ ವಸ್ತುಗಳ ಅಥವಾ ನಕಲಿ ವಸ್ತುಗಳ ಮಾರಾಟಕ್ಕೆ ಅಥವಾ ಉತ್ಪಾದನೆಗೆ ಶಿಕ್ಷೆ. ಮೊದಲ ಅಪರಾಧವಾಗಿದ್ದಲ್ಲಿ 2 ವರ್ಷಗಳವರೆಗೆ ಪರವಾನಗಿ ಪತ್ರ ರದ್ಧತಿ ಮತ್ತು ಅದೇ ಅಪರಾಧ ಮರುಕಳಿಸಿದಲ್ಲಿ ಪರವಾನಗಿ ಪತ್ರದ ಖಾಯಂ ರದ್ಧತಿ

ಬಗೆಯ ಸಂಪರ್ಕ ಅಥವಾ ಸಂಬಂಧವು ಅಸ್ತಿತ್ವದಲ್ಲಿದ್ದರೆ, ಅದು ಅನುಮೋದನೆಯ ಮೌಲ್ಯ ಅಥವಾ ವಿಶ್ವಾಸಾರ್ಹತೆಯ ಮೇಲೆ ಪರಿಣಾಮ ಬೀರಬಹುದು ಮತ್ತು ಇಂತಹ ಸಂಪರ್ಕವನ್ನು/ಸಂಬಂಧವನ್ನು ಪ್ರೇಕ್ಷಕರು ನಿರೀಕ್ಷಿಸುವುದಿಲ್ಲ, ಹಾಗಾಗಿ ಅಂತಹ ಅನುಮೋದನೆಯನ್ನು ಮಾಡುವಾಗ ಸಂಪರ್ಕವನ್ನು/ಸಂಬಂಧವನ್ನು ಸಂಪೂರ್ಣ ಬಹಿರಂಗಪಡಿಸಬೇಕು ಎಂದು ಮಾರ್ಗಸೂಚಿಯಲ್ಲಿ ವಿವರಿಸಲಾಗಿದೆ.

ಕಾರ್ ಸೀಟ್ ಬೆಲ್ಟ್ ಅಲಾರ್ಮ್ ಸ್ಟಾಪರ್ ಕ್ಲಿಪ್‌ಗಳು ಸೇರಿದಂತೆ ಗ್ರಾಹಕರ ಜೀವನಕ್ಕೆ ಅಪಾಯಕಾರಿಯಾದಂತಹ ವಸ್ತುಗಳ ಮಾರಾಟ ಮತ್ತು ಮಾರಾಟ ಪಟ್ಟಿಯಲ್ಲಿ ಸೇರಿಸುವುದು, ವೈರ್‌ಲೆಸ್ ಜಾಮರ್‌ಗಳಂತಹ ಉತ್ಪನ್ನಗಳ ಉತ್ಪಾದನೆ, ಕಾನೂನು ಬಾಹಿರ ಮಾರಾಟ ಅಥವಾ ಸೇವೆಗಳನ್ನು ಒದಗಿಸುವುದು ಅಥವಾ ಮಾರಾಟ ಪಟ್ಟಿಯಲ್ಲಿ ಸೇರಿಸುವುದರಿಂದ ದೂರವಿರುವಂತೆ ಇ-ಕಾಮರ್ಸ್ ಕಂಪನಿಗಳ ವೇದಿಕೆಗಳಿಗೆ, ಎಲ್ಲ ಮಾರುಕಟ್ಟೆ ಸ್ಥಳಗಳಿಗೆ ಸಿಸಿಪಿಎ ಸಲಹೆಗಳನ್ನು ನೀಡಿದೆ. ಇ-ಕಾಮರ್ಸ್ ಕಾಯ್ದೆ 2020 ರ ಪ್ರಕಾರ ಮಾರಾಟಗಾರರು ಒದಗಿಸಿದ ಮಾಹಿತಿಯನ್ನು ಪ್ರದರ್ಶಿಸುವಂತೆ ಎಲ್ಲಾ ಮಾರುಕಟ್ಟೆಯ ಇ-ಕಾಮರ್ಸ್ ವೇದಿಕೆಗಳಿಗೆ ಅದು ಸಲಹೆಯನ್ನೂ ನೀಡಿದೆ. ಮಾನ್ಯತೆ ಪಡೆದ ಐಎಸ್ಐ ಮಾರ್ಕ್ ಅನ್ನು ಹೊಂದಿರದ ಮತ್ತು ಬಿಐಎಸ್ ಕಡ್ಡಾಯ ಮಾನದಂಡಗಳನ್ನು ಉಲ್ಲಂಘಿಸುವ ಸರಕುಗಳನ್ನು ಖರೀದಿಸದಂತೆ ಸಿಸಿಪಿಎ ಗ್ರಾಹಕರಿಗಾಗಿ ಎರಡು ಸುರಕ್ಷತಾ ಸೂಚನೆಗಳನ್ನು ಹೊರಡಿಸಿದೆ. ಈ ಪಟ್ಟಿಯಲ್ಲಿ ಹೆಲ್ಮೆಟ್‌ಗಳು, ಪ್ರೆಶರ್ ಕುಕ್ಕರ್‌ಗಳು ಮತ್ತು ಅಡುಗೆ ಅನಿಲ ಸಿಲಿಂಡರ್‌ಗಳು ಮತ್ತು ಎಲೆಕ್ಟ್ರಿಕ್ ಇಮ್ಮರ್ಶನ್ ವಾಟರ್ ಹೀಟರ್‌ಗಳು, ಹೊಲಿಗೆ ಯಂತ್ರಗಳು, ಮೈಕ್ರೋವೇವ್ ಓವನ್‌ಗಳು, ಎಲ್‌ಪಿಜಿ ಗ್ಯಾಸ್ ಸ್ಟೌವ್‌ಗಳು ಸೇರಿದಂತೆ ಇತರ ಗೃಹೋಪಯೋಗಿ ವಸ್ತುಗಳನ್ನು ಹೆಸರಿಸಲಾಗಿದೆ.

ಇ-ಕಾಮರ್ಸ್ ವಹಿವಾಟುಗಳನ್ನು ಗ್ರಾಹಕ ಸಂರಕ್ಷಣಾ ಕಾಯಿದೆ 2019ರ ವ್ಯಾಪ್ತಿಯಲ್ಲಿ ಸ್ಪಷ್ಟವಾಗಿ ನಿರೂಪಿಸಲಾಗಿದೆ. ಇದರಲ್ಲಿ ಡಿಜಿಟಲ್ ಅಥವಾ ಎಲೆಕ್ಟ್ರಾನಿಕ್ ಜಾಲತಾಣದ ಮೂಲಕ ಡಿಜಿಟಲ್ ಉತ್ಪನ್ನಗಳು ಸೇರಿದಂತೆ ಸರಕುಗಳು ಅಥವಾ ಸೇವೆಗಳ ಖರೀದಿ ಅಥವಾ ಮಾರಾಟ ಮಾಡುವ ತಾಣ ಎಂದು ಇ-ಕಾಮರ್ಸ್ ಅನ್ನು ವ್ಯಾಖ್ಯಾನಿಸಲಾಗಿದೆ.

ಇ-ಕಾಮರ್ಸ್ ನಲ್ಲಿ ನ್ಯಾಯಯುತ-ವಲ್ಲದ ವ್ಯಾಪಾರ ಅಭ್ಯಾಸಗಳಿಂದ ಗ್ರಾಹಕರನ್ನು ರಕ್ಷಿಸಲು, ಗ್ರಾಹಕ ವ್ಯವಹಾರಗಳ ಇಲಾಖೆಯು ಈಗಾಗಲೇ ಗ್ರಾಹಕ ಸಂರಕ್ಷಣಾ ಕಾಯಿದೆಯ ನಿಬಂಧನೆಗಳ ಅಡಿಯಲ್ಲಿ ಗ್ರಾಹಕ ರಕ್ಷಣೆ (ಇ-ಕಾಮರ್ಸ್) ನಿಯಮಗಳು, 2020 ಅನ್ನು ಸೂಚಿಸಿದೆ. ಈ ನಿಯಮಗಳು, ಇತರ ನಿಯಮಗಳ ಜೊತೆಗೆ, ಇ-ಕಾಮರ್ಸ್ ಸಂಸ್ಥೆಗಳ ಜವಾಬ್ದಾರಿಗಳನ್ನು ವಿವರಿಸುತ್ತವೆ ಮತ್ತು ಗ್ರಾಹಕರ ಕುಂದುಕೊರತೆ ಪರಿಹಾರಕ್ಕಾಗಿ ನಿಬಂಧನೆಗಳು ಒಳಗೊಂಡಂತೆ ಮಾರುಕಟ್ಟೆ ಜವಾಬ್ದಾರಿ ಮತ್ತು ಇ-ಕಾಮರ್ಸ್ ಸಂಸ್ಥೆಗಳ ದಾಸ್ತಾನು ವಿವರಣಾ ಪಟ್ಟಿಯ ಹೊಣೆಗಾರಿಕೆಯನ್ನು ಉಲ್ಲೇಖಿಸುತ್ತದೆ.

ಗ್ರಾಹಕರು ಹಿತಾಸಕ್ತಿಯನ್ನು ಒಳಗೊಳ್ಳದಿದ್ದರೂ ವಿನ್ಯಾಸ ಮತ್ತು ಆಯ್ಕೆಯ ಸಂರಚನೆಯನ್ನು ಬಳಸಿಕೊಂಡು ಗ್ರಾಹಕರು ಅಂಥ ವಸ್ತುಗಳನ್ನು ಖರೀದಿಸುವಂತೆ ಒತ್ತಾಯಿಸಲು ಅಥವಾ ಪ್ರಭಾವ ಬೀರಲು 'ಡಾರ್ಕ್ ಪ್ಯಾಟರ್ನ್‌ಗಳು' ಎಂದು ಕರೆಯಲ್ಪಡುವ ನ್ಯಾಯಯುತವಲ್ಲದ ವ್ಯಾಪಾರದ ಅಭ್ಯಾಸಗಳು ಚಾಲ್ತಿಯಲ್ಲಿವೆ. ಗ್ರಾಹಕ ವ್ಯವಹಾರಗಳ ಇಲಾಖೆಯು ಇ-ಕಾಮರ್ಸ್ ಕಂಪನಿಗಳಿಗೆ, ಔದ್ಯಮಿಕ ಸಂಘಗಳಿಗೆ ತಮ್ಮ ವೇದಿಕೆಗಳ ಆನ್‌ಲೈನ್ ಇಂಟರ್‌ಫೇಸ್‌ಗಳಲ್ಲಿ 'ಡಾರ್ಕ್ ಪ್ಯಾಟರ್ನ್' ಪಟ್ಟಿಯಲ್ಲಿ ಸೇರುವಂತಹ ಗ್ರಾಹಕರನ್ನು ಮೋಸಗೊಳಿಸಬಹುದಾದ ಅಥವಾ ಅವರ ಆಯ್ಕೆಗಳನ್ನು ಕುಶಲತೆಯಿಂದ ಬದಲಾಯಿಸಬಹುದಾದ ಯಾವುದೇ ವಿನ್ಯಾಸ ಅಥವಾ ಮಾದರಿಯನ್ನು ಪ್ರದರ್ಶಿಸದಂತೆ ಆಗ್ರಹಿಸಿದೆ.

ಮೂಲ : ಪಿಐಬಿ



Scanned with ACE Scanner

# ಭಾರತೀಯ ಕಾನೂನು ಆಯೋಗ

ಭಾರತೀಯ ಕಾನೂನು ಆಯೋಗವು ಶಾಸನೇತರ ಸಂಸ್ಥೆಯಾಗಿದೆ. ಕಾನೂನು ಕ್ಷೇತ್ರದಲ್ಲಿ ಸಂಶೋಧನೆಯನ್ನು ಕೈಗೊಳ್ಳಲು ಶಿಫಾರಿತ ನಿಯಮಗಳೊಂದಿಗೆ ಭಾರತ ಸರ್ಕಾರ, ಕಾನೂನು ಮತ್ತು ನ್ಯಾಯ ಸಚಿವಾಲಯ ಹಾಗೂ ಕಾನೂನು ವ್ಯವಹಾರಗಳ ಇಲಾಖೆಯ ಅಧಿಸೂಚನೆ ಮೇರೆಗೆ ರಚಿಸಲಾಗಿದೆ, ಅಲ್ಲದೆ ಆಯೋಗವು ತನ್ನ ಶಿಫಾರಿತ ನಿಯಮಗಳ ಪ್ರಕಾರ ಸರ್ಕಾರಕ್ಕೆ (ವರದಿಗಳ ರೂಪದಲ್ಲಿ) ಶಿಫಾರಸ್ಸುಗಳನ್ನು ಮಾಡುತ್ತದೆ. ಕಾನೂನು ವ್ಯವಹಾರಗಳ ಇಲಾಖೆ, ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳು ಮಾಡಿದ ಉಲ್ಲೇಖಗಳನ್ನು ಕಾನೂನು ಆಯೋಗವು ಆಯ್ಕೆ ಮಾಡಿಕೊಳ್ಳುತ್ತದೆ ಮತ್ತು ವರದಿಗಳನ್ನು ಸಲ್ಲಿಸುತ್ತದೆ. ಭಾರತದಲ್ಲಿನ ಕಾನೂನುಗಳ ಅತ್ಯುತ್ತಮ, ಚಿಂತನೆಗೆ ಪ್ರಚೋದನೆ ನೀಡುವಂತಹ ಪ್ರಮುಖ ವಿಮರ್ಶೆಗಳನ್ನು ಭಾರತೀಯ ಕಾನೂನು ಆಯೋಗವು ಒದಗಿಸುತ್ತದೆ.


21 ಫೆಬ್ರವರಿ 2020 ರಿಂದ ಜಾರಿಗೆ ಬರುವಂತೆ ಮೂರು ವರ್ಷಗಳ ಅವಧಿಗೆ ಭಾರತದ 22ನೇ ಕಾನೂನು ಆಯೋಗವನ್ನು ಸರ್ಕಾರ ರಚಿಸಿದೆ. ನಂತರ 22ನೇ ಕಾನೂನು ಆಯೋಗದ ಅವಧಿಯನ್ನು 31 ಆಗಸ್ಟ್, 2024 ರವರೆಗೆ ವಿಸ್ತರಿಸಿದೆ. 22ನೇ ಭಾರತೀಯ ಕಾನೂನು ಆಯೋಗದ ಸಂಯೋಜನೆ ಈ ಕೆಳಗಿನಂತಿದೆ:

ಎ. ಪೂರ್ಣ ಅವಧಿಯ ಅಧ್ಯಕ್ಷ; ಬಿ. ನಾಲ್ವರು ಪೂರ್ಣ ಅವಧಿಯ ಸದಸ್ಯರು (ಸದಸ್ಯ–ಕಾರ್ಯದರ್ಶಿ ಸೇರಿದಂತೆ); ಸಿ. ಕಾರ್ಯದರ್ಶಿ, ಕಾನೂನು ವ್ಯವಹಾರಗಳ ಇಲಾಖೆ, ಪದನಿಮಿತ್ತ ಸದಸ್ಯರಾಗಿ; ಡಿ. ಕಾರ್ಯದರ್ಶಿ, ಶಾಸಕಾಂಗ ಇಲಾಖೆ ಪದನಿಮಿತ್ತ ಸದಸ್ಯರಾಗಿ; ಮತ್ತು ಎ. ಐದಕ್ಕಿಂತ ಹೆಚ್ಚಾಗದಂತೆ ಅರೆಕಾಲಿಕ ಸದಸ್ಯರು.

ನ್ಯಾಯ ವಿಭಾಗ DEPARTMENT OF JUSTICE
Azadi Ka Amrit Mahotsav
G20

ಖಾಯಂ ಲೋಕ ಅದಾಲತ್

ಸಾರ್ವಜನಿಕ ಉಪಯುಕ್ತತಾ ಸೇವೆಗಳ ಪೂರೈಕೆ



1987 ರ ಎಲ್‌ಎಸ್‌ಎ ಕಾಯ್ದೆಯ ಕಲಂ 22–ಎ ಅಡಿ ವ್ಯಾಖ್ಯಾನಿಸಲಾದ ಸೇವೆಗಳು

- ವಾಯು ಮಾರ್ಗ, ಜಲ ಅಥವಾ ರಸ್ತೆ ಮಾರ್ಗಗಳ ಮೂಲಕ ಜನರನ್ನು ಅಥವಾ ವಸ್ತುಗಳನ್ನು ಸಾಗಿಸುವ ವಾಹನಗಳಿಗಾಗಿ ಸಾರಿಗೆ ಸೇವೆ
- ಪೋಸ್ಟಲ್, ಟೆಲಿಗ್ರಾಫ್ ಅಥವಾ ದೂರವಾಣಿ ಸೇವೆ
- ಯಾವುದೇ ಸಂಘ ಸಂಸ್ಥೆಯಿಂದ ಸಾರ್ವಜನಿಕರಿಗೆ ನೀರು, ವಿದ್ಯುತ್ ಅಥವಾ ಇಂಧನ ಸರಬರಾಜು
- ಸಾರ್ವಜನಿಕ ಸಂರಕ್ಷಣೆ ಅಥವಾ ನೈರ್ಮಲ್ಯದ ವ್ಯವಸ್ಥೆ
- ಆಸ್ಪತ್ರೆ ಅಥವಾ ಔಷಧಾಲಯಗಳಲ್ಲಿ ಸೇವೆ
- ವಿಮಾ ಸೇವೆ
- ಶಿಕ್ಷಣ ಅಥವಾ ಶೈಕ್ಷಣಿಕ ಸಂಸ್ಥೆಗಳು
- ವಸತಿ ಅಥವಾ ರಿಯಲ್ ಎಸ್ಟೇಟ್ ಸೇವೆಗಳು

ಕಾನೂನು ನೆರವು ಪಡೆಯಲು ಭೇಟಿ ನೀಡಿ www.nalsa.gov.in

**ಕಾನೂನು ಆಯೋಗವು ಹೇಗೆ ಕಾರ್ಯನಿರ್ವಹಿಸುತ್ತದೆ?**

ಆಯೋಗವು ಕೇಂದ್ರ ಸರ್ಕಾರದಿಂದ ಮತ್ತು/ಅಥವಾ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳಿಂದ ಪಡೆದ ಉಲ್ಲೇಖಗಳನ್ನು ಆಧರಿಸಿ ಯೋಜನೆಗಳ ಮೇಲೆ ಕಾರ್ಯನಿರ್ವಹಿಸುತ್ತದೆ. ಕೆಲವೊಮ್ಮೆ, ವಿಷಯದ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಂಡು, ಆಯೋಗವು ನಿರ್ದಿಷ್ಟ ವಿಷಯಗಳ ಮೇಲೆ ಸ್ವಯಂ ಪ್ರೇರಿತವಾಗಿ ಅಧ್ಯಯನಗಳನ್ನು ನಡೆಸುತ್ತದೆ.

**ವಿಧಾನಶಾಸ್ತ್ರ**

- ಪರಿಶೀಲನೆ/ಪರೀಕ್ಷೆಗಾಗಿ ಉಲ್ಲೇಖ/ ಶಿಫಾರಸ್ಸುಗಳನ್ನು ಸ್ವೀಕರಿಸಿದ ನಂತರ, ಆದ್ಯತೆಗಳನ್ನು ನಿರ್ಧರಿಸಲಾಗುತ್ತದೆ ಮತ್ತು ಪೂರ್ವಸಿದ್ಧತಾ ಕಾರ್ಯವನ್ನು ಆಯೋಗದ ಸದಸ್ಯ/ಸದಸ್ಯ–ಕಾರ್ಯದರ್ಶಿಗೆ ವಹಿಸಲಾಗುತ್ತದೆ. ವಿಷಯದ ಸ್ವರೂಪ ಮತ್ತು ವ್ಯಾಪ್ತಿಗೆ ಅನುಗುಣವಾಗಿ, ಸುಧಾರಣೆಯ ಪ್ರಸ್ತಾಪದ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ಸಂಶೋಧನೆ, ದತ್ತಾಂಶ ಸಂಗ್ರಹಣೆಯ ವಿಧಾನಗಳು ಮತ್ತು ಅಭಿಪ್ರಾಯಗಳನ್ನು ರೂಪಿಸಲಾಗುತ್ತದೆ.

- ಈ ಅವಧಿಯಲ್ಲಿ ಆಯೋಗದ ಸಭೆಗಳಲ್ಲಿ ನಡೆಯುವ ಚರ್ಚೆಯು ಸಮಸ್ಯೆಗಳನ್ನು ವ್ಯಕ್ತಪಡಿಸಲು ಮತ್ತು ಸಂಶೋಧನೆಯ ಮೇಲೆ ಗಮನ ಕೇಂದ್ರೀಕರಿಸಲು ಮಾತ್ರವಲ್ಲದೆ ಆಯೋಗದ ಸದಸ್ಯರಲ್ಲಿ ಒಮ್ಮತವನ್ನು ಮೂಡಿಸುವಲ್ಲಿಯೂ ಸಹಾಯ ಮಾಡುತ್ತದೆ. ಆಯೋಗದಲ್ಲಿನ ಈ ಪೂರ್ವಸಿದ್ಧತಾ ಕಾರ್ಯದಿಂದ ಸಮಸ್ಯೆಯನ್ನು ನಿರ್ದಿಷ್ಟವಾಗಿ ಗುರುತಿಸುವುದು ಮತ್ತು ಪರಿಗಣನೆಗೆ



Scanned with ACE Scanner

ಶಾಸನಸಭೆ ನಿರ್ಣಯ: 19 ಫೆಬ್ರುವರಿ 2020

## ನ್ಯಾಯ ವಿಲೇವಾರಿ ವ್ಯವಸ್ಥೆಯನ್ನು ಬಲಪಡಿಸುವುದು



22 ನೇ ಭಾರತೀಯ ಕಾನೂನು ಪ್ರಾಧಿಕಾರದ ರಚನೆ

ಭಾರತೀಯ ಕಾನೂನು ಪ್ರಾಧಿಕಾರ ಈ ಅಂಶಗಳನ್ನು ಒಳಗೊಂಡಿರುತ್ತದೆ:

**ಕಾಯಿದೆಗಳ ಗುರುತಿಸುವಿಕೆ:** ಪ್ರಸ್ತುತವಲ್ಲದ ಮತ್ತು ಕೂಡಲೇ ರದ್ದುಗೊಳಿಸಬಹುದಾದ ಕಾಯಿದೆಗಳನ್ನು ಗುರುತಿಸುವುದು

ನ್ಯಾಯ ವಿಲೇವಾರಿ ವ್ಯವಸ್ಥೆಯಲ್ಲಿ ಸುಧಾರಣೆ ತರಲು ಸಂಶೋಧನೆಗಳನ್ನು ಕೈಗೊಳ್ಳುವುದು

**ರಾಜ್ಯ ನೀತಿ ನಿರ್ದೇಶನ ತತ್ವಗಳ** ಬೆಳಕಿನಲ್ಲಿ ಅಸ್ತಿತ್ವದಲ್ಲಿರುವ ಕಾನೂನುಗಳ ಪರೀಕ್ಷೆ


**ನ್ಯಾಯಾಂಗ ಆಡಳಿತಕ್ಕೆ** ಸಂಬಂಧಿಸಿದ ವಿಷಯದ ಬಗ್ಗೆ ಸರ್ಕಾರಕ್ಕೆ ತನ್ನ ಅಭಿಪ್ರಾಯಗಳನ್ನು ತಿಳಿಸಲು: ಯಾವುದೇ ವಿದೇಶದ ಸಂಶೋಧನೆ: ಕೇಂದ್ರೀಯ ಕಾನೂನುಗಳ ಸರಳೀಕರಣ

DEPARTMENT OF JUSTICE · G20 · MILLETS 2023 · Azadi Ka Amrit Mahotsav

## ಇ ನ್ಯಾಯಾಲಯಗಳ ಎಂಎಂಪಿ ತಂತ್ರಜ್ಞಾನವನ್ನು ನಿಯಂತ್ರಿಸುವುದು ಮತ್ತು ನ್ಯಾಯಾಲಯಗಳ ದಕ್ಷತೆಯನ್ನು ಹೆಚ್ಚಿಸುವುದು

### ಇ ನ್ಯಾಯಾಲಯಗಳ ಮೊಬೈಲ್ ಸೇವೆಗಳ ಆ್ಯಪ್

- (hyphen) ಅಥವಾ ಖಾಲಿ ಸ್ಥಳವನ್ನು ಬಿಡದಂತೆ 16 ಅಂಕಿಯ ಅಲ್ಫಾನ್ಯೂಮರಿಕಲ್ (ಅಕ್ಷರ ಮತ್ತು ಸಂಖ್ಯೆ ಕೂಡಿಸಿ) ಕೇಸ್ ನಂಬರ್ ರೆಕಾರ್ಡ್ (CNR) ದಾಖಲಿಸಿ
- ಶೋಧಿಸು ಬಟನ್ ಮೇಲೆ ಕ್ಲಿಕ್ ಮಾಡುವ ಮೂಲಕ ಪ್ರಕರಣದ ಪ್ರಸ್ತುತ ಸ್ಥಿತಿ ಮತ್ತು ಸಂಪೂರ್ಣ ಹಿನ್ನೆಲೆ ತೆರೆದುಕೊಳ್ಳುತ್ತದೆ
- ನಿಮಗೆ ಪ್ರಕರಣದ CNR ಸಂಖ್ಯೆ ತಿಳಿದಿಲ್ಲ ಎಂದಾದರೆ ಕಕ್ಷಿದಾರರ ಹೆಸರು, ವಕೀಲರ ಹೆಸರು ಮುಂತಾದ ಬೇರೆ ಆಯ್ಕೆಗಳ ಮೂಲಕ ಅದನ್ನು ಹುಡುಕಬಹುದು



ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ – https://hcservices.ecourts.gov.in/

ಅರ್ಹವಾದ ವಿಷಯಗಳನ್ನು ಸೂಚಿಸುವ ಕೆಲಸವನ್ನು ದಾಖಲಿಸಲಾಗುತ್ತದೆ. ಕೆಲವೊಮ್ಮೆ, ದಾಖಲೆ ಬಗೆಗೆ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪಡೆಯುವ ದೃಷ್ಟಿಯಿಂದ ಸಾರ್ವಜನಿಕರು ಮತ್ತು ಸಂಬಂಧಪಟ್ಟ ಆಸಕ್ತ ಗುಂಪುಗಳು/ಪಾಲುದಾರರಿಗೆ ಅದನ್ನು ವಿತರಿಸಲಾಗುತ್ತದೆ. ಸಾಮಾನ್ಯವಾಗಿ, ಎಚ್ಚರಿಕೆಯಿಂದ ಸಿದ್ಧಪಡಿಸಿದ ಪ್ರಶ್ನಾವಳಿಯನ್ನು ಆಸಕ್ತ ಗುಂಪುಗಳು/ಪಾಲುದಾರರಿಗೆ ಕಳುಹಿಸಲಾಗುತ್ತದೆ.

- ಕಾನೂನು ಸುಧಾರಣೆಗಳಿಗೆ ಪ್ರಸ್ತಾವನೆಗಳನ್ನು ರಚಿಸುವ ಮೊದಲು ಜನರು/ಪಾಲುದಾರರ ವ್ಯಾಪಕ ಸಲಹೆ ಸೂಚನೆಗಳನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಕಾನೂನು ಆಯೋಗವು ಎಲ್ಲ ಪ್ರಯತ್ನಗಳನ್ನು ಮಾಡುತ್ತದೆ. ಈ ಪ್ರಕ್ರಿಯೆಯಲ್ಲಿ, ಆಯೋಗವು ವೃತ್ತಿಪರ ಸಂಸ್ಥೆಗಳು ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಈ ಪ್ರಕ್ರಿಯೆಯಲ್ಲಿ ಸೇರಿಸಿಕೊಳ್ಳುತ್ತದೆ. ಸುಧಾರಣೆಯ ಉದ್ದೇಶಿತ ಕಾರ್ಯತಂತ್ರಗಳ ಕುರಿತು ವಿಮರ್ಶಾತ್ಮಕ ಅಭಿಪ್ರಾಯಗಳನ್ನು ಸಂಗ್ರಹಿಸಲು ಸೆಮಿನಾರ್‌ಗಳು ಮತ್ತು ಕಾರ್ಯಾಗಾರಗಳನ್ನು ಆಯೋಜಿಸಲಾಗುತ್ತದೆ. ದೇಶದ ನಿರಂತರ ಅಭಿವೃದ್ಧಿಗೆ ಕಾನೂನು ಸುಧಾರಣೆಗಾಗಿ ಮತ್ತು ಕಾನೂನಿನ ನಿಯಮಗಳನ್ನು ಸುಗಮಗೊಳಿಸುವಲ್ಲಿ ಉಪಕ್ರಮಗಳನ್ನು ತೆಗೆದುಕೊಳ್ಳುವಾಗ, ಪಾಲುದಾರರೊಂದಿಗೆ ವ್ಯಾಪಕ ಸಮಾಲೋಚನೆಗಳನ್ನು ಮಾಡಿದೆ.

**ಅಂತಿಮ ವರದಿ**

- ದತ್ತಾಂಶ ಮತ್ತು ಸಲಹೆಗಳನ್ನು ಒಟ್ಟುಗೂಡಿಸಿದ ನಂತರ, ಆಯೋಗವು ಅವುಗಳ ಮೌಲ್ಯಮಾಪನ ಮಾಡುತ್ತದೆ ಮತ್ತು ಈ ಮಾಹಿತಿಯನ್ನು ಸೂಕ್ತ ರೀತಿಯಲ್ಲಿ ಸಂಯೋಜಿಸಲು ಆಯೋಗದ ಅಧ್ಯಕ್ಷರು, ಸದಸ್ಯರು ಮತ್ತು ಸದಸ್ಯ-ಕಾರ್ಯದರ್ಶಿಗಳ ಮಾರ್ಗದರ್ಶನದಲ್ಲಿ ಬರೆಯಲಾಗುವ ವರದಿಯಲ್ಲಿ ಬಳಸಿಕೊಳ್ಳಲಾಗುತ್ತದೆ. ನಂತರ ಸಭೆಯಲ್ಲಿ ಆಯೋಗದ ಸಂಪೂರ್ಣ ಸದಸ್ಯ ಬಲದೊಂದಿಗೆ ಪರಿಶೀಲನೆಗೆ ಒಳಪಡಿಸಲಾಗುತ್ತದೆ. ವರದಿ ಮತ್ತು ಸಾರಾಂಶವನ್ನು ಅಂತಿಮಗೊಳಿಸಿದ ನಂತರ, ಆಯೋಗವು ಕರಡು ತಿದ್ದುಪಡಿ ಅಥವಾ ಹೊಸ ಮಸೂದೆಯನ್ನು ಸಿದ್ಧಪಡಿಸಲು ನಿರ್ಧರಿಸಬಹುದು, ಅದನ್ನು ವರದಿಗೆ ಸೇರಿಸಬಹುದು. ತದನಂತರ, ಅಂತಿಮ ವರದಿಯನ್ನು ಪರಿಗಣನೆಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ.

- ಜನರು ಮತ್ತು ಪಾಲುದಾರರನ್ನು ಸಮಾಲೋಚಿಸುವ ಸಾಮರ್ಥ್ಯದ ಮೇಲೆ ಮತ್ತು ಸಾರ್ವಜನಿಕರು ಹಾಗೂ ಸಂಬಂಧಿಸಿದ ಆಸಕ್ತ ಗುಂಪುಗಳಿಂದ ದತ್ತಾಂಶ, ವಿಚಾರಗಳು, ಸಲಹೆಗಳು ಮತ್ತು ಸಂಭವನೀಯ ಮಾಹಿತಿಯನ್ನು ಸಂಗ್ರಹಿಸುವುದರ ಮೇಲೆ ಕಾನೂನು ಸುಧಾರಣೆಯಲ್ಲಿ ಆಯೋಗದ ಕೆಲಸದ ಯಶಸ್ಸು ಅವಲಂಬಿತವಾಗಿದೆ ಎಂಬುದು ಸ್ಪಷ್ಟವಾಗಿದೆ.

**ಅನುಸರಣೆ**

ಕಾನೂನು ವ್ಯವಹಾರಗಳ ಇಲಾಖೆ, ಕಾನೂನು ಮತ್ತು ನ್ಯಾಯ ಸಚಿವಾಲಯದಿಂದ ಕಾಲಕಾಲಕ್ಕೆ ಸಂಸತ್ತಿನ ಮುಂದೆ ಕಾನೂನು ಆಯೋಗದ ವರದಿಗಳನ್ನು ಪ್ರಸ್ತುತಪಡಿಸಲಾಗುತ್ತದೆ ಮತ್ತು ಅನುಷ್ಠಾನಕ್ಕಾಗಿ ಸಂಬಂಧಪಟ್ಟ ಆಡಳಿತ ಇಲಾಖೆಗಳು/ಸಚಿವಾಲಯಗಳಿಗೆ ಕಳುಹಿಸಲಾಗುತ್ತದೆ. ಸರ್ಕಾರದ ನಿರ್ಧಾರವನ್ನು ಅವಲಂಬಿಸಿ ಸಂಬಂಧಪಟ್ಟ ಇಲಾಖೆಗಳು/ಸಚಿವಾಲಯಗಳು ಅವುಗಳ ಮೇಲೆ ಕಾರ್ಯನಿರ್ವಹಿಸುತ್ತವೆ. ವರದಿಗಳನ್ನು ನ್ಯಾಯಾಲಯಗಳಲ್ಲಿ, ಸಂಸದೀಯ ಸ್ಥಾಯಿ ಸಮಿತಿಗಳು ಮತ್ತು ಶೈಕ್ಷಣಿಕ ಮತ್ತು ಸಾರ್ವಜನಿಕ ಭಾಷಣಗಳಲ್ಲಿ ಕೂಡಾ ಉಲ್ಲೇಖಿಸಲಾಗುತ್ತದೆ.

ಮೂಲ: ಪಿಐಬಿ ಮತ್ತು ಭಾರತೀಯ ಕಾನೂನು ಆಯೋಗ



Scanned with ACE Scanner

# ನಿಮಗಿದು ತಿಳಿದಿದೆಯೇ?

## ಡಿಜಿಟಲ್ ವೈಯಕ್ತಿಕ ದತ್ತಾಂಶ ಸುರಕ್ಷತಾ ಕಾಯ್ದೆ 2023

ನಮ್ಮ ವೈಯಕ್ತಿಕ ಮಾಹಿತಿಗಳನ್ನು ರಕ್ಷಿಸಲು ವ್ಯಕ್ತಿಗತ ಹಕ್ಕುಗಳು ಮತ್ತು ಅಂತಹ ವೈಯಕ್ತಿಕ ದತ್ತಾಂಶವನ್ನು ಕಾನೂನುಬದ್ಧ ಉದ್ದೇಶಗಳಿಗಾಗಿ ಪ್ರಕ್ರಿಯೆಗೊಳಿಸುವ ಅಗತ್ಯತೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳೆರಡನ್ನೂ ಗುರುತಿಸುವ ರೀತಿಯಲ್ಲಿ ಡಿಜಿಟಲ್ ವೈಯಕ್ತಿಕ ದತ್ತಾಂಶವನ್ನು ಪ್ರಕ್ರಿಯೆಗೊಳಿಸಲು ಇ ಕಾನೂನು ಅವಕಾಶ ಕಲ್ಪಿಸುತ್ತದೆ.

**1. ಈ ಮುಂದಿನ ಅಂಶಗಳನ್ನು ಒದಗಿಸುವ ಮೂಲಕ ಈ ಕಾಯ್ದೆ ಡಿಜಿಟಲ್ ವೈಯಕ್ತಿಕ ದತ್ತಾಂಶವನ್ನು (ಅಂದರೆ, ಒಬ್ಬ ವ್ಯಕ್ತಿಯನ್ನು ಗುರುತಿಸಲು ಸಹಕಾರಿಯಾಗುವ ದತ್ತಾಂಶ) ರಕ್ಷಿಸುತ್ತದೆ:**


ಎ. ದತ್ತಾಂಶ ಸಂಸ್ಕರಣೆಗಾಗಿ (ಅಂದರೆ, ಸಂಗ್ರಹಣೆ, ಶೇಖರಣೆ ಅಥವಾ ವೈಯಕ್ತಿಕ ದತ್ತಾಂಶದ ಯಾವುದೇ ಇತರ ಕಾರ್ಯಚಟುವಟಿಕೆ) ದತ್ತಾಂಶ ವಿಶ್ವಾಸಾರ್ಹತಾ (ಅಂದರೆ, ಡೇಟಾವನ್ನು ಪ್ರಕ್ರಿಯೆಗೊಳಿಸುವ ವ್ಯಕ್ತಿ, ಕಂಪನಿಗಳು ಮತ್ತು ಸರ್ಕಾರಿ ಘಟಕಗಳು) ಬಾಧ್ಯತೆ; ಬಿ. ದತ್ತಾಂಶ ನಿರ್ವಹಣೆ ಮುಖ್ಯಸ್ಥರ ಹಕ್ಕುಗಳು ಮತ್ತು ಕರ್ತವ್ಯಗಳು (ಅಂದರೆ, ದತ್ತಾಂಶಕ್ಕೆ ಸಂಬಂಧಿಸಿದ ವ್ಯಕ್ತಿ); ಮತ್ತು ಸಿ. ಹಕ್ಕುಗಳು, ಕರ್ತವ್ಯಗಳು ಮತ್ತು ಕಟ್ಟುಪಾಡುಗಳ ಉಲ್ಲಂಘನೆಗಾಗಿ ಧನರಾಶಿ ರೂಪದಲ್ಲಿ ದಂಡಗಳು.


**2. ಈ ಕಾಯಿದೆ ಮುಂದಿನ ತತ್ವಗಳನ್ನು ಆಧರಿಸಿದೆ:**

ಎ. ವೈಯಕ್ತಿಕ ದತ್ತಾಂಶದ ಕಾನೂನುಬದ್ಧ ಮತ್ತು ಪಾರದರ್ಶಕ, ಒಪ್ಪಿಗೆಯುಕ್ತ ಬಳಕೆಯ ತತ್ವ; ಬಿ. ಉದ್ದೇಶವನ್ನು ಮಿತಿ–ಗೊಳಿಸುವ ತತ್ವ (ದತ್ತಾಂಶ ಉಸ್ತುವಾರಿಯಿಂದ ಒಪ್ಪಿಗೆಯನ್ನು ಪಡೆಯುವ ಸಮಯದಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಕ್ಕಾಗಿ ಮಾತ್ರ ವ್ಯಕ್ತಿಗತ ದತ್ತಾಂಶವನ್ನು ಬಳಸುವುದು); ಸಿ. ದತ್ತಾಂಶ ಸಂಗ್ರಹಣೆಯಲ್ಲಿ ಕಡಿತ (ನಿರ್ದಿಷ್ಟ ಉದ್ದೇಶವನ್ನು ಪೂರೈಸಲು ಅಗತ್ಯವಿರುವಷ್ಟು ಮಾತ್ರ ವ್ಯಕ್ತಿಗತ ದತ್ತಾಂಶ ಸಂಗ್ರಹಿಸುವುದು); ಡಿ. ದತ್ತಾಂಶ ನಿಖರತೆಯ ತತ್ವ (ದತ್ತಾಂಶ ಸರಿಯಾಗಿದೆ ಮತ್ತು ನವೀಕರಿಸಲಾಗಿದೆ ಎಂಬುದನ್ನು ಖಚಿತಪಡಿಸುವುದು); ಇ. ಶೇಖರಣಾ ಮಿತಿಯ ತತ್ವ (ನಿರ್ದಿಷ್ಟ ಉದ್ದೇಶಕ್ಕಾಗಿ ಅಗತ್ಯವಿರುವವರೆಗೆ ಮಾತ್ರ ದತ್ತಾಂಶವನ್ನು ಸಂಗ್ರಹಿಸುವುದು); ಎಫ್. ಸೂಕ್ತ ಭದ್ರತಾ ಸುರಕ್ಷತೆಗಳ ತತ್ವ; ಮತ್ತು ಜಿ. ಹೊಣೆಗಾರಿಕೆಯ ತತ್ವ (ದತ್ತಾಂಶ ಉಲ್ಲಂಘನೆಗಳ ನಿರ್ಣಯ ಮತ್ತು ಕಾನೂನು ನಿಬಂಧನೆಗಳ ಉಲ್ಲಂಘನೆ ಮತ್ತು ಉಲ್ಲಂಘನೆಗಳಿಗೆ ದಂಡವನ್ನು ವಿಧಿಸುವ ಮೂಲಕ).

**3. ಈ ಕಾನೂನು ಕೆಲವು ಇತರ ನಾವಿನ್ಯತಾಪೂರ್ಣ ಲಕ್ಷಣಗಳನ್ನು ಹೊಂದಿದೆ:**

ಕಾನೂನು ಸಂಕ್ಷಿಪ್ತವಾಗಿದೆ ಮತ್ತು ಸರಳವಾಗಿದೆ, ಅಂದರೆ, ಸರಳ, ಬಳಸಲು ಸುಲಭವಾಗಿ ಲಭ್ಯವಾಗುವ, ತರ್ಕಬದ್ಧ ಮತ್ತು ಕ್ರಿಯಾಶೀಲ ಕಾನೂನು ಆಗಿದೆ ಏಕೆಂದರೆ ಇದು : ಎ. ಸರಳ ಭಾಷೆ







Scanned with ACE Scanner

ಹೊಂದಿದೆ; ಬಿ. ಅರ್ಥವನ್ನು ಸ್ಪಷ್ಟಪಡಿಸು-ವಂತಹ ವಿವರಣೆಗಳನ್ನು ಹೊಂದಿದೆ; ಸಿ. ಯಾವುದೇ ನಿಬಂಧನೆಗಳನ್ನು ಹೊಂದಿಲ್ಲ ("ಹಾಗಿದ್ದಲ್ಲಿ ಮಾತ್ರ..."); ಮತ್ತು ಡಿ. ಕನಿಷ್ಠ ಪಾಟಿ-ಉಲ್ಲೇಖ ಹೊಂದಿದೆ.

**4. 'ಅವಳು' ಎಂಬ ಪದವನ್ನು ಬಳಸುವುದರ ಮೂಲಕ, ಪ್ರಥಮ ಬಾರಿಗೆ ಸಂಸತ್ತಿನ ಕಾನೂನು ರಚನೆಯಲ್ಲಿ ಮಹಿಳೆಯ ಪಾತ್ರವನ್ನು ಸ್ಪಷ್ಟಪಡಿಸುತ್ತದೆ.**

**5. ಈ ಕಾಯ್ದೆ ವ್ಯಕ್ತಿಗತವಾಗಿ ಮುಂದಿನ ಹಕ್ಕುಗಳನ್ನು ಒದಗಿಸುತ್ತದೆ:**

ಎ. ಸಂಸ್ಕರಿಸಿದ ವೈಯಕ್ತಿಕ ದತ್ತಾಂಶದ ಬಗ್ಗೆ ಮಾಹಿತಿ ಪಡೆಯುವ ಹಕ್ಕು; ಬಿ. ದತ್ತಾಂಶವನ್ನು ತಿದ್ದುವ ಮತ್ತು ಅಳಿಸುವ ಹಕ್ಕು; ಸಿ. ಕುಂದುಕೊರತೆ ಪರಿಹಾರದ ಹಕ್ಕು; ಮತ್ತು ಡಿ. ಮರಣ ಅಥವಾ ಅಸಮರ್ಥತೆ ಸಂದರ್ಭದಲ್ಲಿ ಹಕ್ಕುಗಳನ್ನು ಚಲಾಯಿಸಲು ವ್ಯಕ್ತಿಯ ನಾಮನಿರ್ದೇಶನ ಮಾಡುವ ಹಕ್ಕು. ಅವನ/ಅವಳ ಹಕ್ಕುಗಳನ್ನು ಜಾರಿಗೊಳಿಸಲು, ಪೀಡಿತ ದತ್ತಾಂಶದ ಉಸ್ತುವಾರಿ ಮುಖ್ಯಸ್ಥರು ಆದ್ಯತೆಯ ಮೇರೆಗೆ ದತ್ತಾಂಶ ವಿಶ್ವಾಸಾರ್ಹ ನೇಮಿತ ವ್ಯಕ್ತಿಯನ್ನು ಸಂಪರ್ಕಿಸಬಹುದು. ಅವನು/ಅವಳು ತೃಪ್ತನಾಗದಿದ್ದಲ್ಲಿ, ಅವನು/ಅವಳು ದತ್ತಾಂಶ ಸಂರಕ್ಷಣಾ ಮಂಡಳಿಗೆ ಅಡ್ಡಿ ಆತಂಕಗಳಿಲ್ಲದ ರೀತಿಯಲ್ಲಿ ಮುಕ್ತವಾಗಿ ದತ್ತಾಂಶ ನಿಷ್ಠೆಯ ವಿರುದ್ಧ ದೂರು ನೀಡಬಹುದು.

**6. ಈ ಕಾನೂನು ದತ್ತಾಂಶದ ವಿಶ್ವಾಸಾರ್ಹತೆಯ ಕುರಿತು ಈ ಮುಂದಿನ ಬಾಧ್ಯತೆಗಳನ್ನು ಒದಗಿಸುತ್ತದೆ:**

ಎ. ವೈಯಕ್ತಿಕ ದತ್ತಾಂಶ ಉಲ್ಲಂಘನೆಯನ್ನು ತಡೆಯಲು ಭದ್ರತಾ ಸುರಕ್ಷತೆಗಳನ್ನು ಹೊಂದಲು; ಬಿ. ಪೀಡಿತ ದತ್ತಾಂಶದ ಉಸ್ತುವಾರಿ ಮುಖ್ಯಸ್ಥರು ಮತ್ತು ದತ್ತಾಂಶ ಸಂರಕ್ಷಣಾ ಸಮಿತಿಗೆ ವೈಯಕ್ತಿಕ ದತ್ತಾಂಶ ಉಲ್ಲಂಘನೆ ಬಗ್ಗೆ ತಿಳಿಸಲು; ಸಿ. ಇನ್ನು ಮುಂದೆ ನಿರ್ದಿಷ್ಟ ಉದ್ದೇಶಕ್ಕಾಗಿ ಅಗತ್ಯವಿಲ್ಲದಿದ್ದಾಗ ವೈಯಕ್ತಿಕ ದತ್ತಾಂಶವನ್ನು ಅಳಿಸಲು; ಡಿ. ಸಮ್ಮತಿಯನ್ನು ಹಿಂಪಡೆದಾಗ ವೈಯಕ್ತಿಕ ದತ್ತಾಂಶವನ್ನು ಅಳಿಸಲು; ಇ. ಕುಂದುಕೊರತೆ ಪರಿಹಾರ ವ್ಯವಸ್ಥೆಯನ್ನು ಹೊಂದಲು ಮತ್ತು ದತ್ತಾಂಶ ಉಸ್ತುವಾರಿ ಮುಖ್ಯಸ್ಥರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಲು ಅಧಿಕಾರಿಯನ್ನು ಹೊಂದಲು; ಮತ್ತು ಎಫ್. ದತ್ತಾಂಶ ಪರಿಶೋಧಕರನ್ನು ನೇಮಿಸುವುದು ಮತ್ತು ಹೆಚ್ಚಿನ ಮಟ್ಟದ ದತ್ತಾಂಶ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ನಿಯತಕಾಲಿಕವಾಗಿ ದತ್ತಾಂಶ ಸಂರಕ್ಷಣಾ ಪ್ರಭಾವದ ಮೌಲ್ಯಮಾಪನವನ್ನು ನಡೆಸುವುದು ಮುಂತಾದ ಮಹತ್ವದ ದತ್ತಾಂಶ ಉಸ್ತುವಾರಿಗೆ ಸಂಬಂಧಿಸಿದಂತೆ ಕೆಲವು ಹೆಚ್ಚುವರಿ ಜವಾಬ್ದಾರಿಗಳನ್ನು ಪೂರೈಸಲು.

**7. ಈ ಕಾಯಿದೆಯು ಮಕ್ಕಳ ವೈಯಕ್ತಿಕ ದತ್ತಾಂಶವನ್ನು ಕೂಡಾ ರಕ್ಷಿಸುತ್ತದೆ.**

ಎ. ಪೋಷಕರ ಒಪ್ಪಿಗೆಯೊಂದಿಗೆ ಮಾತ್ರ ದತ್ತಾಂಶ ಉಸ್ತುವಾರಿಗೆ ಮಕ್ಕಳ ವೈಯಕ್ತಿಕ ದತ್ತಾಂಶವನ್ನು ಪ್ರಕ್ರಿಯೆಗೊಳಿಸಲು ಈ ಕಾಯಿದೆ ಅನುಮತಿಸುತ್ತದೆ. ಬಿ. ಟ್ರ್ಯಾಕಿಂಗ್, ನಡವಳಿಕೆಯ ಮೇಲ್ವಿಚಾರಣೆ ಅಥವಾ ಉದ್ದೇಶಿತ ಜಾಹಿರಾತುಗಳನ್ನು ಒಳಗೊಂಡಂತೆ ಮಕ್ಕಳ ಯೋಗಕ್ಷೇಮಕ್ಕೆ ಹಾನಿಕಾರಕ ಪ್ರಕ್ರಿಯೆಗೆ ಈ ಕಾಯಿದೆ ಅನುಮತಿ ನೀಡುವುದಿಲ್ಲ.

– ಮೂಲ : ಪಿಐಬಿ

# ನೇರ ತೆರಿಗೆ ಸುಧಾರಣೆ

(40ನೇ ಪುಟದಿಂದ)

ಕಾಲಕಾಲಕ್ಕೆ ವಿವಿಧ ತೆರಿಗೆ ಸುಧಾರಣೆಗಳು ಮತ್ತು ಆಡಳಿತಾತ್ಮಕ ಉಪಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಅಪೇಕ್ಷಿತ ಫಲಿತಾಂಶ ದೊರೆಯುವಲ್ಲಿ ಸಮಯ ತೆಗೆದುಕೊಳ್ಳುತ್ತದೆ. ನಿರ್ದಿಷ್ಟವಾಗಿ ತೆರಿಗೆ ದರ ಕಡಿತವು ಅಲ್ಪಾವಧಿಯಲ್ಲಿ ತೆರಿಗೆ ಸಂಗ್ರಹದಲ್ಲಿ ಇಳಿಕೆಗೆ ಕಾರಣವಾಗುತ್ತದೆ. ಆದ್ದರಿಂದ, ತೆರಿಗೆ ಸುಧಾರಣೆಗಳ ಯಶಸ್ಸನ್ನು ಪ್ರತಿ ವರ್ಷವೂ ಪ್ರತ್ಯೇಕವಾಗಿ ವಿಶ್ಲೇಷಿಸುವ ಬದಲು ಕಾಲಮಿತಿಯಲ್ಲಿ ನೋಡಬೇಕು.

ನಾವು 2013–2014ರಿಂದ 2022–23ರ ಅವಧಿ ನೋಡಿದರೆ, 9 ವರ್ಷಗಳಲ್ಲಿ ಜಿಡಿಪಿ 113.55 ಲಕ್ಷ ಕೋಟಿ ರೂ.ಗಳಿಂದ 272.41 ಲಕ್ಷ ಕೋಟಿ ರೂ.ಗೆ, ಅಂದರೆ, 140% ಬೆಳವಣಿಗೆಯಾಗಿದೆ. ಅದೇ ಅವಧಿಯಲ್ಲಿ ನೇರ ತೆರಿಗೆ ಸಂಗ್ರಹವು 6.39 ಲಕ್ಷ ಕೋಟಿ ರೂ.ಗಳಿಂದ 16.61 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ. ಅಂದರೆ, ಬೆಳವಣಿಗೆ ದರ 160% ಹೆಚ್ಚಳ ಕಂಡು, ದೀರ್ಘಾವಧಿಯಲ್ಲಿ ನೇರ ತೆರಿಗೆಯ ಬೆಳವಣಿಗೆ ಏರಿಕೆ ಒತ್ತಡ ಪ್ರಮಾಣದಲ್ಲಿ ಒಂದಕ್ಕಿಂತ ಹೆಚ್ಚು ಅಂದರೆ 1.15 ಆಗಿದೆ. 1 ಕ್ಕಿಂತ ಹೆಚ್ಚಿನ ತೆರಿಗೆ ಸೂಚಕವು ತೆರಿಗೆ ಆಡಳಿತದ ದಕ್ಷತೆ ಮತ್ತು ವಿವಿಧ ತೆರಿಗೆ ಸುಧಾರಣೆಗಳ ಯಶಸ್ಸನ್ನು ಸೂಚಿಸುತ್ತದೆ.

**ಭವಿಷ್ಯದ ಸವಾಲುಗಳು**

ನೇರ ತೆರಿಗೆ ನೀತಿ ಸುಧಾರಣೆಯ ಪಯಣವು ಇಲ್ಲಿಯವರೆಗೆ ಲಾಭದಾಯಕವಾಗಿದೆ. ಆದರೆ ಮುಂದೆ ಸವಾಲುಗಳಿವೆ. ತೆರಿಗೆ ನೀತಿ ಸುಧಾರಣೆ ನಿರಂತರ ಪ್ರಕ್ರಿಯೆ. ನೇರ ತೆರಿಗೆ ಸಂಗ್ರಹ ಉತ್ತೇಜಕವಾಗಿರುವುದನ್ನು ಖಚಿತಪಡಿಸಿಕೊಳ್ಳಲು ಮೇಲಿನ ಮಾರ್ಗಗಳಲ್ಲಿ ಹೆಚ್ಚಿನ ಸುಧಾರಣೆಗಳನ್ನು ಪರಿಗಣಿಸಲಾಗಿದೆ. ತೆರಿಗೆ ವ್ಯಾಜ್ಯಗಳನ್ನು ಕಡಿಮೆ ಮಾಡಲು ಮತ್ತು ಆರಂಭಿಕ ಹಂತದಲ್ಲಿ ತೆರಿಗೆ ಖಚಿತತೆಯನ್ನು ನಿಶ್ಚಿತಪಡಿಸಿಕೊಳ್ಳಲು ಇನ್ನೂ ಹೆಚ್ಚಿನ ಸುಧಾರಣಾ ಕ್ರಮಗಳ ಅಗತ್ಯವಿದೆ. ವ್ಯವಹಾರವನ್ನು ಸುಲಭಗೊಳಿಸುವುದು ಸಹ ತೆರಿಗೆ ನೀತಿಗಳಲ್ಲಿ ಗಮನ ಹರಿಸಲು ಅಗತ್ಯವಿರುವ ಒಂದು ಕ್ಷೇತ್ರವಾಗಿದೆ.

ಕೊನೆಯದಾಗಿ, ನೇರ ತೆರಿಗೆ ಪಾವತಿಸಬೇಕಾದ ಎಲ್ಲ ತೆರಿಗೆದಾರರು ತಮ್ಮ ತೆರಿಗೆಯನ್ನು ನ್ಯಾಯಯುತವಾಗಿ ಮತ್ತು ಸ್ವಯಂಪ್ರೇರಣೆಯಿಂದ ಪಾವತಿಸುವುದನ್ನು ಖಚಿತಪಡಿಸಿಕೊಳ್ಳಲು ಯಾವಾಗಲೂ ಪ್ರಯತ್ನಿಸಬೇಕು.



Scanned with ACE Scanner

# ಭಾರತ ಸಂವಿಧಾನದ ಶ್ರೇಷ್ಠತೆ ಮತ್ತು ವೈಶಿಷ್ಟ್ಯತೆ

* ಡಾ. ಆರ್.ಶಂಕರಪ್ಪ

ಭಾರತ ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿರುವ ದೇಶ. ಜಗತ್ತಿನ ಹಲವು ದೇಶಗಳಿಂದ ಆರಿಸಿಕೊಂಡ ಮೌಲ್ಯಯುತವಾದ ನೀತಿಗಳನ್ನು ಅಳವಡಿಸಿಕೊಂಡಿರುವ ನಮ್ಮ ಭಾರತ ಸಂವಿಧಾನವು ಭಾರತೀಯ ಪ್ರಜೆಗಳಿಗೆ ಪರಮ ಪವಿತ್ರ ಗ್ರಂಥ. ಸಂವಿಧಾನ ಎಂದರೆ ರಾಷ್ಟ್ರದ ಮೂಲಭೂತ ಕಾನೂನು, ಸಂವಿಧಾನ ಎಂದರೆ ರಾಷ್ಟ್ರದ ಸರ್ಕಾರದ ಯಂತ್ರವನ್ನು ನಿರ್ಮಿಸುವ ವಿಧಿ ಮತ್ತು ನಿಯಮಗಳ ದಾಖಲೆ ಸಂವಿಧಾನ ಸರ್ಕಾರದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಹಾಗೂ ಕ್ಷೇತ್ರಗಳಾದ ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳ ನಡುವೆ ಇರುವ ಸಂಬಂಧಗಳನ್ನು ವಿವರಿಸಿ ನಿರ್ಧರಿಸುತ್ತದೆ.

ಭಾರತದ ಗಣರಾಜ್ಯ ಪ್ರಬುದ್ಧವಾಗಿರಲು ನಮ್ಮ ಸಂವಿಧಾನವೇ ಕಾರಣ. ದೇಶದ ಜನತೆಯನ್ನು ಆಡಳಿತ ಹೇಗೆ ನಡೆಸಿಕೊಳ್ಳಬೇಕು, ಪ್ರಜೆಗಳು ಹೇಗೆ ನಡೆದುಕೊಳ್ಳಬೇಕು ಎಂಬ ಸಮಗ್ರ ಚಿತ್ರಣವನ್ನು ಸಂವಿಧಾನ ನೀಡುತ್ತದೆ. ಇವೆಲ್ಲವೂ ಕಾನೂನುಗಳ ಮೂಲಕ ರಕ್ಷಿಸಲ್ಪಟ್ಟಿದ್ದು ಇದರಲ್ಲಿ ಉಲ್ಲಂಘನೆ ಕಂಡುಬಂದರೆ ನ್ಯಾಯಾಂಗದಲ್ಲಿ ಪರಿಹಾರ ನ್ಯಾಯಕೋರಬಹುದು. ನ್ಯಾಯಾಲಯಗಳು ಕೂಡ ಆಡಳಿತಾತ್ಮಕ ಬಿಕ್ಕಟ್ಟಿನ ಸ್ಥಿತಿಯಲ್ಲಿ ಸಂವಿಧಾನದ ಕಡೆ ನೋಡುತ್ತವೆ. ಏಕತೆ, ಸಮಗ್ರತೆ, ಘನವಾದ ಆಶಯ, ದಾರ್ಶನಿಕ ಮುನ್ನೋಟಗಳಿರುವ ನಮ್ಮ ಸಂವಿಧಾನ, ಅನೇಕ ಸ್ವಾರಸ್ಯಕರ ಮತ್ತು ವಿಶಿಷ್ಟ ಲಕ್ಷಣಗಳನ್ನು ಹೊಂದಿದೆ ಅವುಗಳಲ್ಲಿ ಪ್ರಮುಖವಾದವುಗಳನ್ನು ವಿವರಿಸಲು ಪ್ರಯತ್ನಿಸಲಾಗಿದೆ.


### ಸಂವಿಧಾನ ರಚನಾಸಭೆ

9/12/1946 ರಂದು ಬೆಳಗ್ಗೆ 11 ಗಂಟೆಗೆ ಸಂವಿಧಾನ ಪ್ರಥಮ ರಚನಾಸಭೆ ನಡೆಯಿತು. ಎರಡನೇ ಸಭೆಯಲ್ಲಿ ಸಂವಿಧಾನ ರಚನಾಸಭೆಯ ಅಧ್ಯಕ್ಷರಾಗಿ ಡಾ. ಬಾಬು ರಾಜೇಂದ್ರ ಪ್ರಸಾದ್‌ರವರನ್ನು ಆಯ್ಕೆ ಮಾಡಲಾಯಿತು.

ಸಂವಿಧಾನ ರಚನಾ ಸಭೆಯ ಮೊದಲ ಸಭೆಯಲ್ಲಿ ಒಟ್ಟು 389 ಸದಸ್ಯರಿದ್ದರು. ಜಗತ್ತಿನ ಎಲ್ಲಾ ದೇಶಗಳ ಸಂವಿಧಾನಗಳ ಅಧ್ಯಯನ ಮತ್ತು ಚರ್ಚೆ ವಿಸ್ತೃತವಾಗಿ ನಡೆದವು. ನಂತರ ಪಾಕಿಸ್ತಾನ ಸಂವಿಧಾನ ರಚನೆಗೆ ಪ್ರತ್ಯೇಕ ಸಭೆ ನಡೆದಾಗ ಭಾರತ ಸಂವಿಧಾನ ಸಭೆಯ ಸದಸ್ಯರ ಸಂಖ್ಯೆ – 299ಕ್ಕೆ ಇಳಿಯಿತು.

### ಕರಡು ಸಮಿತಿ

ಭಾರತಕ್ಕೆ 15/08/1947 ರಲ್ಲಿ ಸ್ವಾತಂತ್ರ್ಯ ದೊರೆತ ನಂತರ ಡಾ. ಬಿ.ಆರ್.ಅಂಬೇಡ್ಕರ್ ರವರ ನೇತೃತ್ವದಲ್ಲಿ ಸಂವಿಧಾನ ಕರಡು ಸಮಿತಿಯನ್ನು ರಚಿಸಲಾಯಿತು. ಕರಡು ಸಮಿತಿಯ ನೇತೃತ್ವದಲ್ಲಿ ಸಂವಿಧಾನ ಅನೇಕ ತಿದ್ದುಪಡಿಗಳಿಗೆ ಪರಿಶೀಲನೆಗಳಿಗೆ ಒಳಪಟ್ಟು 26/11/1949ರಂದು ಅಂಗೀಕಾರವಾಗಿ 26/01/1950 ರಂದು ಜಾರಿಗೆ ಬಂತು. ಸಂವಿಧಾನ ಕುರಿತು 2 ವರ್ಷ 11 ತಿಂಗಳು 17 ದಿನಗಳು ಚರ್ಚೆಗಳು ನಡೆದು (ಒಟ್ಟು 11 ಅಧಿವೇಶನಗಳು) ಜನವರಿ 1948ರಲ್ಲಿ ರಲ್ಲಿ ಕರಡು ಸಿದ್ಧಗೊಂಡು ಸಾರ್ವಜನಿಕರ ಅಭಿಪ್ರಾಯಕ್ಕೆ 8 ತಿಂಗಳು ಅವಕಾಶ ನೀಡಲಾಯಿತು. 14/11/1949ರಿಂದ 26/11/1949ರವರೆಗೆ ಕೊನೆಯ ಅಧಿವೇಶನ ನಡೆಯಿತು. 26/11/1949 ರಂದು




ಅನುಮೋದನೆ ದೊರಕಿತು. (ಅಂಗೀಕಾರ) ಕೊನೆಯ ಸಭೆ 24/01/1950 ರಂದು ನಡೆದು ಅಂದು ಎಲ್ಲಾ ಸದಸ್ಯರು ಸಹಿ ಹಾಕಿದರು. 26/01/1950 ರಿಂದ ಸಂವಿಧಾನ ಜಾರಿಗೆ ಬಂದು ಅದೇ ದಿನವನ್ನು ಗಣರಾಜ್ಯೋತ್ಸವ ದಿನವನ್ನಾಗಿ ಆಚರಿಸುತ್ತಿದ್ದೇವೆ.

### ಸಂವಿಧಾನ ದಿನದ ಆಚರಣೆ

1949 ರ ನವೆಂಬರ್ 26 ರಂದು ಭಾರತೀಯ ಸಂವಿಧಾನವನ್ನು ಸಂವಿಧಾನ ಸಭೆಯಲ್ಲಿ ಅಂಗೀಕರಿಸಲಾಯಿತು. ಸಂವಿಧಾನದ ರಚನೆ ಮತ್ತು ಕರಡು ತಿದ್ದುವುದರಲ್ಲಿ ಮಹತ್ವದ ಪಾತ್ರ ವಹಿಸಿದ್ದ ಮುತ್ಸದ್ದಿ ಡಾ. ಬಿ.ಆರ್.ಅಂಬೇಡ್ಕರ್ ಅವರು ಈ ಸಂವಿಧಾನದ ಪ್ರತಿಯನ್ನು ಸಭೆಯಲ್ಲಿ ಮಂಡಿಸಿದರು. 2015ರ ಅಕ್ಟೋಬರ್‌ನಲ್ಲಿ

* ಸಹ ಪ್ರಾಧ್ಯಾಪಕರು ಹಾಗೂ ಲೇಖಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಕೋಲಾರ.



Scanned with ACE Scanner

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ರವರು ಡಾ. ಬಿ.ಆರ್.ಅಂಬೇಡ್ಕರ್ ರವರ (125ನೇ ಜನ್ಮದಿನದ ಅಂಗವಾಗಿ) ಗೌರವಾರ್ಥ ನವೆಂಬರ್ 26ನ್ನು ಸಂವಿಧಾನದ ದಿನವನ್ನಾಗಿ ಆಚರಿಸಬೇಕು ಎಂದು ಹೇಳಿದರು ಅದೇ ವರ್ಷ ನವೆಂಬರ್ 19ರಂದು ಈ ಕುರಿತು ಗೆಜೆಟ್ ಸೂಚನೆ ಹೊರಡಿಸಲಾಯಿತು.

**ಭಾರತ ಸಂವಿಧಾನದ ವೈಶಿಷ್ಟ್ಯಗಳು**

**ಘನತೆಯುತ ಪ್ರಸ್ತಾವನೆ:-** ಸಂವಿಧಾನವು ವಿಸ್ತಾರವಾದ ಆಶಯ-ದೊಂದಿಗೆ ಒಂದು ಪ್ರಸ್ತಾವನೆಯನ್ನು ಕಲ್ಪಿಸಿಕೊಟ್ಟಿದೆ.

ಭಾರತದ ಪ್ರಜೆಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ವಿಧಿಯುಕ್ತವಾಗಿ ಸ್ಥಾಪಿಸಿ ಭಾರತದ ಎಲ್ಲಾ ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ವಿಚಾರ, ಅಭಿವ್ಯಕ್ತಿ, ನಂಬಿಕೆ, ಭಕ್ತಿ ಮತ್ತು ಆರಾಧನೆಗಳಲ್ಲಿ ಸ್ವಾತಂತ್ರವನ್ನು, ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು ದೊರಕಿಸಿ ವ್ಯಕ್ತಿಗೌರವ ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲೂ ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ ದೃಢ ಸಂಕಲ್ಪ ಮಾಡಿ ನಮ್ಮ ಸಂವಿಧಾನ ಸಭೆಯಲ್ಲಿ 1949ರ ನವೆಂಬರ್ ಮಾಸದ 26ನೇ ದಿನದಂದು ನಾವಾಗಿ ನಾವೇ ಈ ಸಂವಿಧಾನವನ್ನು ಸ್ವೀಕರಿಸಿ ಶಾಸನವಾಗಿ ವಿಧಿಸಿಕೊಂಡಿದ್ದೇವೆ.

ಪ್ರಸ್ತಾವನೆಯ ಮೂಲ ಪ್ರತಿಯಲ್ಲಿ ಸಾರ್ವಭೌಮ, ಪ್ರಜಾಸತ್ತಾತ್ಮಕ ಗಣರಾಜ್ಯ ಎಂದಿತ್ತು. ಹೆಚ್ಚಿನ 2 ಪದಗಳಾದ ಸಮಾಜವಾದಿ ಮತ್ತು ಜಾತ್ಯಾತೀತಗಳನ್ನು 1976ರಲ್ಲಿ ಸಂವಿಧಾನದ 42ನೇ ತಿದ್ದುಪಡಿಯಲ್ಲಿ ಸೇರಿಸಲಾಯಿತು (ಈ ಅವಧಿಯಲ್ಲಿ ದೇಶದಲ್ಲಿ ತುರ್ತು ಪರಿಸ್ಥಿತಿ ಜಾರಿಯಲ್ಲಿತ್ತು. ಅಂಥ ಸಮಯದಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರಲು ಸಾಧ್ಯವೇ ಎಂದು ಪರಿಶೀಲಿಸಲು ಸರ್ದಾರ್ ಸ್ವರ್ಣಸಿಂಗ್ ನೇತೃತ್ವದ ಸಮಿತಿಯನ್ನು ನೇಮಿಸಲಾಯಿತು ಈ ಸಮಿತಿಯು ತಿದ್ದುಪಡಿ ತರಬಹುದೆಂದು ಶಿಫಾರಸ್ಸು ಮಾಡಿತು. ಆಗ ತಂದ 42ನೇ ತಿದ್ದುಪಡಿಯನ್ನು "ಪುಟ್ಟ ಸಂವಿಧಾನ" ಎಂದು ಕರೆಯಲಾಗುತ್ತಿದೆ.

**ಸಮಗ್ರತೆಯ ಕಲ್ಯಾಣರಾಜ್ಯ**

ಸಂವಿಧಾನದ ಪ್ರಸ್ತಾವನೆಯಲ್ಲಿ ಭಾರತವನ್ನು ಸಾರ್ವಭೌಮ ಸಮಾಜವಾದಿ ಜಾತ್ಯಾತೀತ ಪ್ರಜಾಪ್ರಭುತ್ವದ ಗಣರಾಜ್ಯ ಎಂದು ಖಾತರಿಪಡಿಸುತ್ತದೆ. ದೇಶದ ಜನರಿಗೆ ನ್ಯಾಯ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಖಚಿತಪಡಿಸಲು ಮತ್ತು ಭ್ರಾತೃತ್ವ, ವ್ಯಕ್ತಿಯ ಘನತೆ, ರಾಷ್ಟ್ರದ ಏಕತೆ, ಸಮಗ್ರತೆಯನ್ನು ಉತ್ತೇಜಿಸಲು ಬದ್ಧವಾಗಿರುವುದರಿಂದ ಕಲ್ಯಾಣರಾಜ್ಯ ಎಂದು ಘೋಷಿಸುತ್ತದೆ.

ಇತರೆ ಸಂವಿಧಾನಗಳಿಂದ ಆರಿಸಿಕೊಂಡಿರುವ ಮೌಲ್ಯಾಧರಿತ ಅಂಶಗಳು ಮುಂದಿನಂತಿವೆ:

ಭಾರತೀಯ ಸಂವಿಧಾನದಲ್ಲಿ ಪ್ರಪಂಚದ ಅನೇಕ ರಾಷ್ಟ್ರಗಳ ಸಂವಿಧಾನಗಳ ಅತ್ಯುತ್ತಮ, ಮೌಲ್ಯಾಧರಿತ ಅಂಶಗಳನ್ನು ಆರಿಸಿಕೊಂಡು ಅಳವಡಿಸಿಕೊಂಡಿರುವುದನ್ನು ನೋಡಬಹುದು.

ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಪರಿಕಲ್ಪನೆಯನ್ನು ಫ್ರೆಂಚ್ ಸಂವಿಧಾನದಿಂದ ಪಂಚವಾರ್ಷಿಕ ಯೋಜನೆಗಳನ್ನು ರಶಿಯಾ ಸಂವಿಧಾನದಿಂದ ಪ್ರಸ್ತಾವನೆ, ಮೂಲಭೂತ ಹಕ್ಕುಗಳನ್ನು ಅಮೇರಿಕ ಸಂವಿಧಾನದಿಂದ ಸರ್ವೋಚ್ಚ ನ್ಯಾಯಾಲಯ ನಿಯಮಾವಳಿಗಳನ್ನು ಜಪಾನ್ ಸಂವಿಧಾನದಿಂದ, ರಾಜ್ಯ ನಿರ್ದೇಶಕ ತತ್ವಗಳು (ಸಾಮಾಜಿಕ ಆರ್ಥಿಕ ಪರಿಕಲ್ಪನೆ) ಐರ್ಲೆಂಡ್ ಸಂವಿಧಾನದಿಂದ, ಸಂಸದೀಯ ಪದ್ಧತಿಯನ್ನು ಇಂಗ್ಲೆಂಡ್ ಸಂವಿಧಾನದಿಂದ, ತುರ್ತು ಪರಿಸ್ಥಿತಿಗಳನ್ನು ಜರ್ಮನಿಯ ವೀಮರ್ ಸಂವಿಧಾನದಿಂದ, ಸರ್ಕಾರಗಳ ಅಧಿಕಾರಗಳ ವಿಭಜನೆ ಪಟ್ಟಿ ಕೆನಡಾ ಸಂವಿಧಾನದಿಂದ ತೆಗೆದುಕೊಂಡು ಅಳವಡಿಸಿಕೊಂಡಿದ್ದೇವೆ.

**ಸಂವಿಧಾನದ ವೈಶಿಷ್ಟ್ಯತೆ:-** ಡಾ. ಬಿ.ಆರ್.ಅಂಬೇಡ್ಕರ್ ರವರ ಪ್ರಕಾರ ನಮ್ಮ ಸಂವಿಧಾನದ ವೈಶಿಷ್ಟ್ಯತೆ ಎಂದರೆ ನಮ್ಮ ಸಂವಿಧಾನ ಕಾರ್ಯಸಾಧು ಮತ್ತು ಸಂದರ್ಭಕ್ಕೆ ಅನುಗುಣವಾಗಿ ಹೊಂದಾಣಿಕೆ ಗುಣವುಳ್ಳದ್ದು, ಶಾಂತಿ ನೆಮ್ಮದಿ ಸಮಯದಲ್ಲೂ ಯುದ್ಧ ಸಮಯದಲ್ಲೂ ದೇಶವನ್ನು ಏಕತ್ರವಾಗಿ ಹಿಡಿದಿರಿಸಬಲ್ಲ ಸಾಮರ್ಥ್ಯ ಅದಕ್ಕಿದೆ.

**ಭಾರತ ಸಂವಿಧಾನದ ಲಕ್ಷಣಗಳು**

ಭಾರತ ಸಂವಿಧಾನದ ಲಕ್ಷಣಗಳನ್ನು ಗಮನಿಸಿದರೆ ನಮ್ಮ ಸಂವಿಧಾನ ವಿಶ್ವದ ಇತರೆ ರಾಷ್ಟ್ರಗಳಿಗಿಂತ ವಿಶಿಷ್ಟವಾದದ್ದು ಎಂಬ ಅಂಶಗಳು ಗೋಚರಿಸುತ್ತಿವೆ. ಆದ್ದರಿಂದ ನಮ್ಮ ಸಂವಿಧಾನವನ್ನು ಗ್ರಾನವಿಲ್ಲೆ ಆಸ್ಟಿನ್ "ಭಾರತ ಸಂವಿಧಾನ ಒಂದು ಸಾಮಾಜಿಕ ದಾಖಲೆ" ಎಂದು ಹೇಳಿದ್ದಾರೆ ಭಾರತ ಸಂವಿಧಾನದ ಪ್ರಮುಖ ಲಕ್ಷಣಗಳೆಂದರೆ.

**1) ಲಿಖಿತ ಮತ್ತು ವಿಸ್ತಾರವಾದ ಸಂವಿಧಾನ**

ಭಾರತ ಸಂವಿಧಾನವು ಪ್ರಪಂಚದಲ್ಲಿಯೇ ಅತ್ಯಂತ ವಿಸ್ತಾರವಾದ ಲಿಖಿತ ಸಂವಿಧಾನವಾಗಿದೆ. ಭಾರತ ಸಂವಿಧಾನ (ಮೂಲ) 395 ವಿಧಿಗಳನ್ನು 8 ಪರಿಶಿಷ್ಟಗಳನ್ನು 22 ಭಾಗಗಳನ್ನು ಹೊಂದಿತ್ತು ಈಗ ಹಲವಾರು ತಿದ್ದುಪಡಿಗಳಾಗಿವೆ. ವಿಧಿಗಳಲ್ಲಿ ಮತ್ತು ಪರಿಶಿಷ್ಟಗಳಲ್ಲಿ ಬದಲಾವಣೆ ಆಗಿ 448 ವಿಧಿಗಳು 12 ಪರಿಶಿಷ್ಟಗಳು ಮತ್ತು 22 ಅಧ್ಯಾಯಗಳನ್ನು ಹೊಂದಿದೆ.

**2) ಭಾಗಶಃ ನಮ್ಯ (ಸರಳ) ಭಾಗಶಃ ಅನಮ್ಯ (ಕಠಿಣ) ಸಂವಿಧಾನ**

ಯಾವ ಸಂವಿಧಾನವನ್ನು ವಿಶೇಷ ತಿದ್ದುಪಡಿ ವಿಧಾನವನ್ನು ಅನುಸರಿಸದೆ ಸುಲಭವಾಗಿ ತಿದ್ದುಪಡಿ ಮಾಡಲಾಗುತ್ತದೆಯೋ ಅದನ್ನು ನಮ್ಯ (ಸರಳ) ಸಂವಿಧಾನ ಎಂದು ಯಾವ ಸಂವಿಧಾನವನ್ನು ತಿದ್ದುಪಡಿ ಮಾಡಲು ವಿಶೇಷ ವಿಧಾನವನ್ನು ಅನುಸರಿಸಿ ತಿದ್ದುಪಡಿ ಮಾಡಲಾಗುತ್ತದೆಯೋ ಅದನ್ನು ಅನಮ್ಯ (ಕಠಿಣ) ಸಂವಿಧಾನ ಎಂದು ಕರೆಯಲಾಗುತ್ತದೆ. ಆದರೆ ಭಾರತ ಸಂವಿಧಾನ ಎರಡೂ ಅಂಶಗಳನ್ನು ಹೊಂದಿರುವ ವಿಶಿಷ್ಟ ಸಂವಿಧಾನವಾಗಿದೆ (ಸರಳ ಸಂವಿಧಾನ ಇಂಗ್ಲೆಂಡ್, ಕಠಿಣ ಸಂವಿಧಾನ ಅಮೇರಿಕ)

**3) ಏಕ ಪೌರತ್ವ**

ಭಾರತ ದೇಶ ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿರುವ ದೇಶ. ಆದ್ದರಿಂದ ದೇಶದ ಜನರಲ್ಲಿ ಸಂಕುಚಿತ ಪ್ರಾಂತೀಯ ಮನೋಭಾವನೆಯನ್ನು ನಿಯಂತ್ರಿಸಿ, ವಿಶಾಲವಾದ ರಾಷ್ಟ್ರೀಯ ಮನೋಭಾವನೆಯನ್ನು ಬೆಳೆಸುವ ಉದ್ದೇಶದಿಂದ ಏಕ ಪೌರತ್ವವನ್ನು ಅಳವಡಿಸಿಕೊಳ್ಳಲಾಗಿದೆ.



Scanned with ACE Scanner

#### 4) ಮೂಲಭೂತ ಹಕ್ಕುಗಳು

ಪ್ರಜೆಗಳ ಪ್ರಗತಿಗೆ ಮೂಲಭೂತ ಹಕ್ಕುಗಳು ಬಹಳ ಮುಖ್ಯ ಎಂದು ಅರಿತ ಸಂವಿಧಾನ ರಚನಾಕಾರರು ಸಂವಿಧಾನದ 3ನೇ ಭಾಗದಲ್ಲಿ 14ನೇ ವಿಧಿಯಿಂದ 32ನೇ ವಿಧಿಗಳವರೆಗೆ 6 ವಿಧದ ಮೂಲಭೂತ ಹಕ್ಕುಗಳನ್ನು ಒದಗಿಸಿದರು. ಮೂಲಭೂತ ಹಕ್ಕುಗಳನ್ನು ಕಲ್ಪಿಸಿಕೊಡುವುದರ ಜೊತೆಗೆ ಅವುಗಳ ಉಲ್ಲಂಘನೆಯಾಗದಂತೆ ರಕ್ಷಣೆ ನೀಡಬೇಕೆಂದು ಅರಿತ ಸಂವಿಧಾನಕಾರರು 32ನೇ ವಿಧಿಯನ್ನು ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ಅಳವಡಿಸಿದರು 32ನೇ ವಿಧಿಯನ್ನು ಸಂವಿಧಾನಾತ್ಮಕ ಪರಿಹಾರದ ಹಕ್ಕು ಎಂದು ಕರೆಯಲಾಗುತ್ತದೆ. ಇದು ಸಂವಿಧಾನದ "ಆತ್ಮ ಮತ್ತು ಹೃದಯ" ಇದ್ದಂತೆ ಸಂವಿಧಾನದಲ್ಲಿ ಕೊಟ್ಟಿರುವ ಮೂಲಭೂತ ಹಕ್ಕುಗಳಿಗೆ ಧಕ್ಕೆ ಉಂಟಾದರೆ 32ನೇ ವಿಧಿ ಮೂಲಕ ಸರ್ವೋಚ್ಚ ನ್ಯಾಯಾಲಯ 226 ವಿಧಿಯ ಮೂಲಕ ಉಚ್ಚ ನ್ಯಾಯಾಲಯ ರಿಟ್‌ಗಳನ್ನು (1) ಹೇಬಿಯಸ್ ಕಾರ್ಪಸ್ 2) ಮ್ಯಾಂಡಮಸ್ 3) ಸರ್ಷಿಯಾರರಿ 4) ಪ್ರೊಹಿಬಿಷನ್ 5) ಕೋವಾರೆಂಟೋ ಹೊರಡಿಸುವ ಮೂಲಕ ಮೂಲಭೂತ ಹಕ್ಕುಗಳಿಗೆ ರಕ್ಷಣೆ ನೀಡುತ್ತದೆ. ಆದ್ದರಿಂದ ಸರ್ವೋಚ್ಚ ನ್ಯಾಯಾಲಯವನ್ನು ಮೂಲಭೂತ ಹಕ್ಕುಗಳ ರಕ್ಷಕ ಅಥವಾ ಗ್ಯಾರಂಟರ್ ಎಂದು ಕರೆಯಲಾಗಿದೆ.

#### 5) ರಾಜ್ಯ ನಿರ್ದೇಶಕ ತತ್ವಗಳು

ಭಾರತ ಸಂವಿಧಾನದ 4ನೇ ಭಾಗದಲ್ಲಿ 36 ರಿಂದ 51ನೇ ವಿಧಿಗಳಲ್ಲಿ ರಾಜ್ಯ ನಿರ್ದೇಶಕ ತತ್ವಗಳನ್ನು ಅಳವಡಿಸಲಾಗಿದೆ. ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳು ಪ್ರಜೆಗಳಿಗೆ ಸಾಮಾಜಿಕ ಮತ್ತು ಆರ್ಥಿಕ ನ್ಯಾಯಗಳನ್ನು ದೊರಕಿಸಿಕೊಡಲು ನಿರ್ವಹಿಸಬೇಕಾದ ಕರ್ತವ್ಯ ಮತ್ತು ನೀತಿಗಳ ಬಗ್ಗೆ ಸೂಚನೆ ನೀಡುತ್ತವೆ.

ರಾಷ್ಟ್ರದಲ್ಲಿ ಸಮಾಜವಾದಿ ತತ್ವಗಳನ್ನು (38(1)ನೇ ವಿಧಿ ಪ್ರಕಾರ ಸರ್ಕಾರ / ರಾಜ್ಯವು ಪ್ರಜೆಗಳ ಕಲ್ಯಾಣವನ್ನು ಸಾಧಿಸಲು ಪ್ರಯತ್ನಿಸಬೇಕು, 38(2)ನೇ ವಿಧಿ ಪ್ರಕಾರ ಅಸಮಾನತೆಯನ್ನು ಕಡಿಮೆ ಮಾಡಿ ಜನತೆಯಲ್ಲಿ ಸಮಾನತೆ ತರಬೇಕು, 39ನೇ ವಿಧಿ ಪ್ರಕಾರ ಸಮಾನ ಕೆಲಸಕ್ಕೆ ಸಮಾನ ವೇತನ, 40ನೇ ವಿಧಿ ಪ್ರಕಾರ ಗ್ರಾಮ ಪಂಚಾಯಿತಿಗಳನ್ನು ಸ್ಥಾಪಿಸಬೇಕು, 41 ನೇ ಪ್ರಕಾರ ರಾಜ್ಯದಲ್ಲಿ ನಿರುದ್ಯೋಗಿಗಳಿಗೆ, ವೃದ್ಧರಿಗೆ ಅಂಗವಿಕಲರಿಗೆ ಧನ ಸಹಾಯ ನೀಡಬೇಕು, 45ನೇ ವಿಧಿ ಪ್ರಕಾರ 14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕು, 47ನೇ ವಿಧಿ ಪ್ರಕಾರ ಪ್ರಜೆಗಳಿಗೆ ಪೌಷ್ಟಿಕ ಆಹಾರ ಪದಾರ್ಥಗಳನ್ನು ಒದಗಿಸಿ ಜೀವನ ಮಟ್ಟ ಹೆಚ್ಚಿಸಬೇಕು) ಈ ತತ್ವಗಳನ್ನು ಅನುಷ್ಠಾನಗೊಳಿಸುವುದರ ಜೊತೆಗೆ ಆರ್ಥಿಕ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಈ ತತ್ವಗಳು ಸಹಾಯವಾಗುವುದರಿಂದ ಸಂವಿಧಾನದಲ್ಲಿ ಶ್ರೇಷ್ಠ ಸ್ಥಾನವನ್ನು ಪಡೆದಿವೆ. ಆದ್ದರಿಂದ ಈ ತತ್ವಗಳನ್ನು ಒಳಗೊಂಡಿರುವ 4ನೇ ಭಾಗವನ್ನು ರಚನಾತ್ಮಕ ಭಾಗ ಎಂದು ವರ್ಣಿಸಲಾಗಿದೆ.

#### 6) ವಯಸ್ಕ ಮತ್ತು ಸಾರ್ವತ್ರಿಕ ಮತದಾನ ಪದ್ಧತಿ

ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ವಯಸ್ಕ ಸಾರ್ವತ್ರಿಕ ಮತದಾನ ಪದ್ಧತಿಯನ್ನು ತರಲು ಹೋರಾಟಗಳು ನಡೆದಿವೆ. ಭಾರತದ ಸಂವಿಧಾನ ರಚನಾಕಾರರು ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯನ್ನು ಬೆಂಬಲಿಸಿ ಪ್ರಜಾಪ್ರಭುತ್ವದ ಯಶಸ್ವಿ ಕಾರ್ಯಾಚರಣೆಗೆ ಅದನ್ನು ಅಳವಡಿಸಿದರು. ಸಂವಿಧಾನದ 15ನೇ ಭಾಗದಲ್ಲಿ 324 ರಿಂದ 329ನೇ ವಿಧಿಗಳಲ್ಲಿ ಸ್ವತಂತ್ರ ಚುನಾವಣಾ ಆಯೋಗಕ್ಕೆ ಅವಕಾಶ ನೀಡಿದ್ದು 326ನೇ ವಿಧಿಯಲ್ಲಿ ವಯಸ್ಕ ಮತದಾನ ಪದ್ಧತಿಗೆ ಅವಕಾಶ ನೀಡಿ 21 ವರ್ಷ ಮೇಲ್ಪಟ್ಟಿರುವವರು ಮತ ಚಲಾಯಿಸಲು ಅವಕಾಶ ನೀಡಲಾಗಿತ್ತು ನಂತರ 61ನೇ ತಿದ್ದುಪಡಿಯ ಮೂಲಕ ಮತದಾನದ ವಯಸ್ಸನ್ನು 18 ವರ್ಷಕ್ಕೆ ಇಳಿಸಲಾಗಿದೆ. ಇದು ಮಾರ್ಚ್ 1989 ರಿಂದ ಜಾರಿಗೆ ಬಂದಿದೆ.

#### 7) ಸಂಯುಕ್ತ ಸರ್ಕಾರ ಪದ್ಧತಿ

ಭಾರತ ಸಂವಿಧಾನದ 1ನೇ ವಿಧಿ ಪ್ರಕಾರ ಭಾರತ ರಾಜ್ಯಗಳ ಒಕ್ಕೂಟವಾಗಿದೆ 7ನೇ ಅನುಸೂಚಿಯಲ್ಲಿ ಕೇಂದ್ರ-ರಾಜ್ಯಗಳ ನಡುವೆ ಅಧಿಕಾರಗಳನ್ನು ಹಂಚಿಕೆ ಮಾಡಲಾಗಿದೆ. (ಕೇಂದ್ರ ಪಟ್ಟಿ, ರಾಜ್ಯ ಪಟ್ಟಿ, ಸಮವರ್ತಿಪಟ್ಟಿ) ಕೇಂದ್ರ ಮತ್ತು ರಾಜ್ಯಗಳ ನಡುವೆ ವಿವಾದಗಳು ಉಂಟಾದರೆ ಬಗೆಹರಿಸುವ ಅಧಿಕಾರವನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ನೀಡಲಾಗಿದೆ.

#### 8) ಸಂಸದೀಯ ಪದ್ಧತಿ ಸರ್ಕಾರ

ಭಾರತ ಸಂವಿಧಾನವು ಸಂಸದೀಯ ಪದ್ಧತಿ ಸರ್ಕಾರವನ್ನು ರೂಪಿಸಿಕೊಂಡಿದೆ. ಸಂಸದೀಯ ಪದ್ಧತಿ ಸರ್ಕಾರವಿರುವ ರಾಷ್ಟ್ರಗಳಲ್ಲಿ ಹಿರಿಯ ಆಡಳಿತಾಧಿಕಾರಿಯು (ರಾಷ್ಟ್ರಪತಿ) ನಾಮಮಾತ್ರ ಅಧಿಕಾರಗಳನ್ನು ಹೊಂದಿದ್ದು ಎಲ್ಲಾ ಅಧಿಕಾರಗಳ ಪ್ರಧಾನಮಂತ್ರಿ ಮತ್ತು ಮಂತ್ರಿ ಮಂಡಲಕ್ಕೆ ಸೇರಿರುತ್ತವೆ, ಮಂತ್ರಿಮಂಡಲವು ಸಂಸತ್‌ಗೆ ಹೊಣೆಯಾಗಿರುತ್ತದೆ. ಸಂಸದೀಯ ಪದ್ಧತಿಯಲ್ಲಿ ಸಂಸತ್ ದ್ವಿಸದನ ಶಾಸಕಾಂಗ ಹೊಂದಿದ್ದು ಮೇಲ್ಮನೆಯಾದ ರಾಜ್ಯಸಭೆ (ಸದಸ್ಯರ ಸಂಖ್ಯೆ:250) ಕೆಳಮನೆಯಾದ ಲೋಕಸಭೆ (ಸದಸ್ಯರ ಸಂಖ್ಯೆ:543+2=545) ಪ್ರಜೆಗಳಿಂದ ಆಯ್ಕೆಯಾದ ಸಂಸತ್ ಪರಮಾಧಿಕಾರವನ್ನು ಹೊಂದಿರುತ್ತದೆ. ರಾಜ್ಯಸಭೆ ಶಾಶ್ವತ ಸದನವಾಗಿದ್ದು ಸದಸ್ಯರ ಅಧಿಕಾರಾವಧಿ 6 ವರ್ಷಗಳು, ಲೋಕಸಭೆ ಮತ್ತು ಲೋಕಸಭೆಯ ಸದಸ್ಯರ ಅವಧಿ 5 ವರ್ಷಗಳು.

#### 9) ತಿದ್ದುಪಡಿ ವಿಧಾನ

ಭಾರತ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದು ಸಂದರ್ಭಕ್ಕನುಗುಣವಾಗಿ ಕಾನೂನುಗಳನ್ನು ಬದಲಿಸುವ (ರಾಷ್ಟ್ರ ಮತ್ತು ಜನರ ಪ್ರಗತಿಗಾಗಿ) ವ್ಯವಸ್ಥೆಯನ್ನು ಸಂವಿಧಾನದಲ್ಲಿ ಅಳವಡಿಸಿ ತಿದ್ದುಪಡಿ ವಿಧಾನಗಳನ್ನು 368ನೇ ವಿಧಿಯಲ್ಲಿ ವಿವರಿಸಲಾಗಿದೆ. ಈ ಹಿನ್ನಲೆಯಲ್ಲಿ ಅನೇಕ ತಿದ್ದುಪಡಿಗಳನ್ನು ಮಾಡಲಾಗಿದೆ.

#### 10) ಜಮ್ಮು ಕಾಶ್ಮೀರಕ್ಕೆ ಇದ್ದ ವಿಶೇಷ ಸ್ಥಾನಮಾನ ಈಗ ಇಲ್ಲ

ಮೊದಲು ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ (370, 35ಎ ವಿಧಿಗಳ ಅಡಿಯಲ್ಲಿ) ನೀಡಿದ್ದರಿಂದ ಆ ರಾಜ್ಯಕ್ಕೆ ಪ್ರತ್ಯೇಕ ಸಂವಿಧಾನ 26/01/1957 ರಲ್ಲಿ ಜಾರಿಗೆ ಬಂದಿತ್ತು. ಈ 05/08/2019 ರಲ್ಲಿ ಈ ವಿಶೇಷ ಸ್ಥಾನಮಾನ ನೀಡಿದ್ದ ಸ್ವಾಯತ್ತತೆಯನ್ನು ರದ್ದುಪಡಿಸಲಾಗಿದೆ.

#### 11) ಸ್ವತಂತ್ರ ಮತ್ತು ಏಕೀಕೃತ ನ್ಯಾಯಾಂಗ


ಪ್ರಜೆಗಳ ಹಕ್ಕುಗಳನ್ನು ರಕ್ಷಿಸಲು ನ್ಯಾಯಾಲಯಗಳು ನಿರ್ಭಯದಿಂದ ಕೆಲಸ ಮಾಡಲು ಸ್ವತಂತ್ರ ನ್ಯಾಯಾಂಗ

(51ನೇ ಪುಟಕ್ಕೆ)



Scanned with ACE Scanner

# 'ಮನದ ಮಾತು'



**ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ದಿನಾಂಕ 27.08.2023 ರಂದು ಮಾಡಿದ ಮನ್ ಕಿ ಬಾತ್' – 104 ನೇ ಸಂಚಿಕೆಯ ಕನ್ನಡ ಅವತರಣಿಕೆಯ ಆಯ್ದ ಭಾಗ.**

ನನ್ನ ಪ್ರಿಯ ಕುಟುಂಬದ ಸದಸ್ಯರೆ, ನಮಸ್ಕಾರ. ಮನದ ಮಾತಿನ ಆಗಸ್ಟ್ ಸಂಚಿಕೆಗೆ ಮತ್ತೊಮ್ಮೆ ತಮ್ಮೆಲ್ಲರಿಗೂ ಆತ್ಮೀಯ ಸ್ವಾಗತ. ಶ್ರಾವಣ ಮಾಸದಲ್ಲಿ ಹಿಂದೆಂದೂ ಎರಡು ಬಾರಿ 'ಮನದ ಮಾತು' ಕಾರ್ಯಕ್ರಮ ನಡೆದಿದ್ದು ನನಗೆ ನೆನಪಿಲ್ಲ, ಆದರೆ, ಈ ಬಾರಿ ಅದು ಸಾಧ್ಯವಾಗಿದೆ. ಶ್ರಾವಣ ಎಂದರೆ ಮಹಾಶಿವನ ಮಾಸ, ಸಂಭ್ರಮಾಚರಣೆ ಮತ್ತು ಸಂತೋಷದ ತಿಂಗಳಿದು. ಚಂದ್ರಯಾನದ ಯಶಸ್ಸು ಈ ಸಂಭ್ರಮದ ವಾತಾವರಣಕ್ಕೆ ಮತ್ತಷ್ಟು ಕಳೆ ತಂದಿದೆ. ಇಂದು ನಿಮ್ಮೊಂದಿಗೆ ಮಾತನಾಡುವಾಗ ಹಳೆಯ ನನ್ನ ಕವಿತೆಯ ಕೆಲವು ಸಾಲುಗಳು ನೆನಪಿಗೆ ಬರುತ್ತಿವೆ.

ಬಾನಲ್ಲಿ ತಲೆ ಎತ್ತಿ  
ದಟ್ಟ ಮೋಡಗಳನ್ನು ಭೇದಿಸಿ  
ಪ್ರಕಾಶದ ಸಂಕಲ್ಪ ಕೈಗೊಳ್ಳು  
ಸೂರ್ಯ ಈಗಷ್ಟೇ  
ಉದಯಿಸಿದ್ದಾನೆ.

ಸಂಕಲ್ಪದಿಂದ ನಡೆದು  
ಎಲ್ಲಾ ಅಡಚಣೆಗಳನ್ನು ಜಯಿಸಿ  
ಕತ್ತಲೆಯನ್ನು ಹೋಗಲಾಡಿಸಿ  
ಸೂರ್ಯ ಈಗಷ್ಟೇ ಉದಯಿಸಿದ್ದಾನೆ

ಬಾನಲ್ಲಿ ತಲೆ ಎತ್ತಿ  
ದಟ್ಟ ಮೋಡಗಳನ್ನು ಭೇದಿಸಿ  
ಸೂರ್ಯ ಈಗಷ್ಟೇ  
ಉದಯಿಸಿದ್ದಾನೆ.

ನನ್ನ ಕುಟುಂಬದ ಸದಸ್ಯರೆ, ಆಗಸ್ಟ್ 23ರಂದು, ಭಾರತ ಮತ್ತು ಭಾರತದ ಚಂದ್ರಯಾನವು ಚಂದ್ರನ ಮೇಲೆ ಕೂಡ ಸಂಕಲ್ಪದ ಸೂರ್ಯ ಉದಯಿಸುತ್ತಾನೆ ಎಂದು ಸಾಬೀತುಪಡಿಸಿದೆ. ಮಿಷನ್ ಚಂದ್ರಯಾನವು ಯಾವುದೇ ಪರಿಸ್ಥಿತಿಯಲ್ಲಿ ಗೆಲ್ಲಲು ಬಯಸುವ ಮತ್ತು ಯಾವುದೇ ಪರಿಸ್ಥಿತಿಯಲ್ಲಿ ಗೆಲುವನ್ನು ಸಾಧಿಸುವುದು ಹೇಗೆ ಎಂದು ಅರಿತಿರುವ ನವ ಭಾರತದ ಚೈತನ್ಯದ ಸಂಕೇತವಾಗಿದೆ.

ಸ್ನೇಹಿತರೇ, ಈ ಮಿಷನ್‌ನ ಒಂದು ಭಾಗ ಎಷ್ಟು ವಿಶೇಷವಾಗಿತ್ತು ಎಂದರೆ ಆ ಅಂಶದ ಕುರಿತು ನಾನು ಖಂಡಿತ ಇಂದು ನಿಮ್ಮೆಲ್ಲರೊಂದಿಗೆ ಚರ್ಚಿಸಲು ಬಯಸುತ್ತೇನೆ. ಮಹಿಳಾ ನೇತೃತ್ವದ ಅಭಿವೃದ್ಧಿಯನ್ನು ರಾಷ್ಟ್ರ ಚರಿತ್ರೆಯ ರೂಪದಲ್ಲಿ ಬಲಪಡಿಸಬೇಕು ಎಂದು ನಾನು ಕೆಂಪು ಕೋಟೆಯಿಂದ ಈ ಬಾರಿ ಹೇಳಿದ್ದು ನಿಮಗೆ ನೆನಪಿರಬಹುದು. ಸ್ತ್ರೀಶಕ್ತಿಯ ಸಾಮರ್ಥ್ಯ ಎಲ್ಲಿ ಒಗ್ಗೂಡುತ್ತದೆಯೋ ಅಲ್ಲಿ ಅಸಾಧ್ಯವಾದುದನ್ನೂ ಸಾಧ್ಯವಾಗಿಸಬಹುದಾಗಿದೆ. ಭಾರತದ ಮಿಷನ್ ಚಂದ್ರಯಾನವು ಸ್ತ್ರೀ ಶಕ್ತಿಯ ಜ್ವಲಂತ ಉದಾಹರಣೆಯಾಗಿದೆ. ಅನೇಕ ಮಹಿಳಾ ವಿಜ್ಞಾನಿಗಳು ಮತ್ತು ಎಂಜಿನಿಯರ್‌ಗಳು ಈ ಸಂಪೂರ್ಣ ಕಾರ್ಯಾಚರಣೆಯಲ್ಲಿ ನೇರವಾಗಿ ತೊಡಗಿಸಿಕೊಂಡಿದ್ದಾರೆ. ಇವರು ಯೋಜನಾ ನಿರ್ದೇಶಕರಾಗಿ, ವಿವಿಧ ವಿಭಾಗಗಳ ಪ್ರಾಜೆಕ್ಟ್ ಮ್ಯಾನೇಜರ್ ಆಗಿ ಹಲವು ಪ್ರಮುಖ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ಭಾರತದ ಹೆಣ್ಣುಮಕ್ಕಳು ಈಗ ಅನಂತ ಎಂದು ಪರಿಗಣಿಸಲಾದ ಬಾಹ್ಯಾಕಾಶಕ್ಕೂ ಸವಾಲೊಡ್ಡುತ್ತಿದ್ದಾರೆ. ಯಾವುದೇ ದೇಶದ ಹೆಣ್ಣು ಮಕ್ಕಳು ಇಷ್ಟೊಂದು ಮಹತ್ವಾಕಾಂಕ್ಷಿಗಳಾದಾಗ ಆ ದೇಶದ ಅಭಿವೃದ್ಧಿಯನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ.

ಸ್ನೇಹಿತರೇ, ಇಂದು ನಮ್ಮ ಕನಸುಗಳು ಮತ್ತು ಪ್ರಯತ್ನಗಳೂ ಉತ್ಕೃಷ್ಟವಾಗಿರುವುದರಿಂದಲೇ ನಾವು ಇಷ್ಟು ಎತ್ತರಕ್ಕೇರಲು ಸಾಧ್ಯವಾಗಿದೆ. ಏಕೆಂದರೆ ಚಂದ್ರಯಾನ–3ರ ಯಶಸ್ಸಿನಲ್ಲಿ ನಮ್ಮ ವಿಜ್ಞಾನಿಗಳ ಜೊತೆಗೆ ಇತರ ವಲಯಗಳೂ ಪ್ರಮುಖ ಪಾತ್ರ ವಹಿಸಿವೆ. ಎಲ್ಲಾ ಬಿಡಿ ಭಾಗಗಳು ಮತ್ತು ತಾಂತ್ರಿಕ ಅವಶ್ಯಕತೆಗಳನ್ನು ಪೂರೈಸುವಲ್ಲಿ ಎಲ್ಲ ದೇಶವಾಸಿಗಳು ಕೊಡುಗೆ ನೀಡಿದ್ದಾರೆ. ಎಲ್ಲರ ಪ್ರಯತ್ನಗಳೂ ಒಗ್ಗೂಡಿದಾಗ ಯಶಸ್ಸು ಕೂಡ ಲಭಿಸಿತು. ಇದೇ ಚಂದ್ರಯಾನ–3 ರ ಅತಿ ದೊಡ್ಡ ಯಶಸ್ಸು. ಭವಿಷ್ಯದಲ್ಲಿ ಕೂಡ ನಮ್ಮ ಬಾಹ್ಯಾಕಾಶ ಕ್ಷೇತ್ರವು ಎಲ್ಲರ ಪ್ರಯತ್ನದಿಂದ ಈ ರೀತಿಯ ಅಸಂಖ್ಯಾತ ಯಶಸ್ಸನ್ನು ಸಾಧಿಸಲಿ ಎಂದು ನಾನು ಆಶಿಸುತ್ತೇನೆ.

ನನ್ನ ಕುಟುಂಬದ ಸದಸ್ಯರೆ, ಸೆಪ್ಟೆಂಬರ್ ತಿಂಗಳು ಭಾರತದ ಸಾಮರ್ಥ್ಯಕ್ಕೆ ಸಾಕ್ಷಿಯಾಗಲಿದೆ. ಮುಂದಿನ ತಿಂಗಳು ನಡೆಯಲಿರುವ ಜಿ–20 ನಾಯಕರ ಶೃಂಗಸಭೆಗೆ ಭಾರತ ಸಂಪೂರ್ಣ ಸಜ್ಜಾಗಿದೆ. ಈ ಸಮಾರಂಭದಲ್ಲಿ ಭಾಗವಹಿಸಲು 40 ದೇಶಗಳ ಮುಖ್ಯಸ್ಥರು ಮತ್ತು ಅನೇಕ ಜಾಗತಿಕ ಸಂಸ್ಥೆಗಳು ರಾಜಧಾನಿ ದೆಹಲಿಗೆ ಆಗಮಿಸಲಿವೆ. ಜಿ–20 ಶೃಂಗಸಭೆಯ ಇತಿಹಾಸದಲ್ಲಿ ಇಲ್ಲಿವರೆಗಿನ ಅತ್ಯಂತ ದೊಡ್ಡ ಭಾಗವಹಿಸುವಿಕೆ ಇದಾಗಿದೆ. ತನ್ನ ಅಧ್ಯಕ್ಷತೆಯ ಅವಧಿಯಲ್ಲಿ, ಭಾರತವು ಜಿ–20 ಅನ್ನು ಹೆಚ್ಚೆಚ್ಚು ಒಳಗೊಳ್ಳುವಿಕೆಯ ವೇದಿಕೆಯನ್ನಾಗಿ ಮಾಡಿದೆ. ಭಾರತದ ಆಹ್ವಾನದ ಮೇರೆಗೆ ಆಫ್ರಿಕನ್ ಒಕ್ಕೂಟ ಕೂಡ ಜಿ–20 ರೊಂದಿಗೆ ಸೇರಿಕೊಂಡಿತು ಮತ್ತು ಆಫ್ರಿಕಾದ ಜನರ ಧ್ವನಿಯು ವಿಶ್ವದ ಈ ಪ್ರಮುಖ ವೇದಿಕೆಯವರೆಗೆ ತಲುಪಿತು. ಸ್ನೇಹಿತರೇ,



Scanned with ACE Scanner

ಕಳೆದ ವರ್ಷ ಬಾಲಿಯಲ್ಲಿ ಭಾರತಕ್ಕೆ ಜಿ–20 ರ ಅಧ್ಯಕ್ಷ ಸ್ಥಾನ ದೊರಕಿದಂದಿನಿಂದ, ನಮ್ಮಲ್ಲಿ ಹೆಮ್ಮೆಯನ್ನು ತುಂಬುವಂತಹ ಅನೇಕ ಘಟನೆಗಳು ನಡೆದಿವೆ. ದೆಹಲಿಯ ದೊಡ್ಡ ಕಾರ್ಯಕ್ರಮಗಳ ಸಂಪ್ರದಾಯವನ್ನು ತೊಡೆದು, ದೇಶದ ವಿವಿಧ ನಗರಗಳಿಗೆ ನಾವು ಅದನ್ನು ಕೊಂಡೊಯ್ದಿದ್ದೇವೆ. ದೇಶದ 60 ನಗರಗಳಲ್ಲಿ ಇದಕ್ಕೆ ಸಂಬಂಧಿಸಿದ ಸುಮಾರು 200 ಸಭೆಗಳನ್ನು ಆಯೋಜಿಸಲಾಗಿದೆ. ಜಿ–20 ಪ್ರತಿನಿಧಿಗಳು ಹೋದಲ್ಲೆಲ್ಲಾ ಜನರು ಅವರನ್ನು ಗೌರವದಿಂದ ಸ್ವಾಗತಿಸಿದರು. ನಮ್ಮ ದೇಶದ ವೈವಿಧ್ಯತೆ ಮತ್ತು ನಮ್ಮ ರೋಮಾಂಚಕ ಪ್ರಜಾಪ್ರಭುತ್ವವನ್ನು ನೋಡಿ ಈ ಪ್ರತಿನಿಧಿಗಳು ಬಹಳ ಪ್ರಭಾವಿತರಾದರು. ಭಾರತದಲ್ಲಿ ಅದೆಷ್ಟು ಅವಕಾಶಗಳಿವೆ ಎಂದು ಕೂಡಾ ಅವರಿಗೆ ಅರಿವಾಗಿದೆ.

ಸ್ನೇಹಿತರೇ, ಜಿ–20 ರ ನಮ್ಮ ಅಧ್ಯಕ್ಷತೆಯು ಜನರ ಅಧ್ಯಕ್ಷತೆಯಾಗಿದೆ. ಇದರಲ್ಲಿ ಸಾರ್ವಜನಿಕ ಭಾಗವಹಿಸುವಿಕೆಯ ಮನೋಭಾವವು ಅಗ್ರಸ್ಥಾನದಲ್ಲಿದೆ. ಜಿ–20 ರ ಹನ್ನೊಂದು ಎಂಗೇಜ್ಮೆಂಟ್ ಗುಂಪುಗಳಿದ್ದವು, ಅವುಗಳಲ್ಲಿ ಶೈಕ್ಷಣಿಕ, ನಾಗರಿಕ ಸಂಸ್ಥೆಗಳು, ಯುವಕರು, ಮಹಿಳೆಯರು, ನಮ್ಮ ಸಂಸದರು, ವಾಣಿಜ್ಯೋದ್ಯಮಿಗಳು ಮತ್ತು ನಗರ ಆಡಳಿತಕ್ಕೆ ಸಂಬಂಧಿಸಿದ ಜನರು ಪ್ರಮುಖ ಪಾತ್ರ ವಹಿಸಿದ್ದಾರೆ. ಒಂದಲ್ಲ ಒಂದು ರೀತಿಯಲ್ಲಿ, 1.5 ಕೋಟಿಗೂ ಹೆಚ್ಚು ಜನರು ದೇಶಾದ್ಯಂತ ಆಯೋಜಿಸುವ ಜಿ–20 ರ ಕಾರ್ಯಕ್ರಮಗಳಿಗೆ ಕೈಜೋಡಿಸಿದ್ದಾರೆ. ಸಾರ್ವಜನಿಕ ಸಹಭಾಗಿತ್ವದ ನಮ್ಮ ಈ ಪ್ರಯತ್ನದಲ್ಲಿ ಒಂದಲ್ಲ, ಎರಡು ವಿಶ್ವ ದಾಖಲೆಗಳೂ ಸೃಷ್ಟಿಯಾಗಿವೆ.

**ಸರ್ವೇಭ್ಯಃ ವಿಶ್ವ–ಸಂಸ್ಕೃತ–ದಿವಸಸ್ಯ ಹಾರ್ದಯಃ ಶುಭಕಾಮನಾಃ**

ನಿಮಗೆಲ್ಲರಿಗೂ ವಿಶ್ವ ಸಂಸ್ಕೃತ ದಿನದ ಅನೇಕಾನೇಕ ಶುಭಾಶಯಗಳು. ಸಂಸ್ಕೃತ ಭಾಷೆ ವಿಶ್ವದ ಪ್ರಾಚೀನ ಭಾಷೆಗಳಲ್ಲಿ ಒಂದೆನ್ನುವ ವಿಷಯ ನಮಗೆಲ್ಲರಿಗೂ ತಿಳಿದೇ ಇದೆ. ಇದನ್ನು ಅನೇಕ ಆಧುನಿಕ ಭಾಷೆಗಳ ತಾಯಿ ಎಂದು ಕೂಡಾ ಕರೆಯುತ್ತಾರೆ. ಸಂಸ್ಕೃತ ತನ್ನ ಪ್ರಾಚೀನತೆಯೊಂದಿಗೆ ತನ್ನ ವೈಜ್ಞಾನಿಕತೆ ಮತ್ತು ವ್ಯಾಕರಣಕ್ಕಾಗಿ ಕೂಡಾ ಹೆಸರುವಾಸಿಯಾಗಿದೆ. ಕೆಲವೊಮ್ಮೆ ಹೀಗೂ ಆಗುವುದುಂಟು, ಜನರಿಗೆ ತಮ್ಮ ನಗರದಲ್ಲೇ ಇರುವ ಐತಿಹಾಸಿಕ ಸ್ಥಳಗಳ ಬಗ್ಗೆ ತಿಳಿದೇ ಇರುವುದಿಲ್ಲ. ಇದೇ ರೀತಿಯ ಅನುಭವ ಧನ್‌ಪಾಲ್ ಅವರಿಗೂ ಆಗಿದೆ. ಧನ್‌ಪಾಲ್ ಅವರು ಬೆಂಗಳೂರಿನ ಟ್ರಾನ್ಸ್‌ಪೋರ್ಟ್ ಕಛೇರಿಯೊಂದರಲ್ಲಿ ಚಾಲಕನ ವೃತ್ತಿ ಮಾಡುತ್ತಾರೆ. ಸುಮಾರು 17 ವರ್ಷಗಳ ಹಿಂದೆ ಅವರಿಗೆ ಸೈಟ್ ಸೀಯಿಂಗ್ ವಿಂಗ್‌ನಲ್ಲಿ ಜವಾಬ್ದಾರಿ ಹುದ್ದೆ ದೊರೆಯಿತು. ಈಗ ಜನರು ಅದನ್ನು ಬೆಂಗಳೂರು ದರ್ಶಿನಿ ಎಂದು ಕರೆಯುತ್ತಾರೆ. ಧನ್‌ಪಾಲ್ ಅವರು ಪ್ರವಾಸಿಗರನ್ನು ನಗರದ ಬೇರೆ ಬೇರೆ ಸ್ಥಳಗಳಿಗೆ ಕರೆದೊಯ್ಯುತ್ತಿದ್ದರು. ಇಂತಹದ್ದೇ ಒಂದು ಪ್ರವಾಸದ ಸಂದರ್ಭದಲ್ಲಿ ಓರ್ವ ಪ್ರವಾಸಿಗ ಧನ್ ಪಾಲ್ ಅವರನ್ನು ಬೆಂಗಳೂರಿನ ಟ್ಯಾಂಕ್ ಅನ್ನು ಸ್ಯಾಂಕಿ ಟ್ಯಾಂಕ್ ಎಂದು ಏಕೆ ಕರೆಯುತ್ತಾರೆಂದು ಪ್ರಶ್ನಿಸಿದರು. ಈ ಪ್ರಶ್ನೆಗೆ ಉತ್ತರ ತಿಳಿದಿಲ್ಲದ ಕಾರಣ ಧನ್‌ಪಾಲ್ ಅವರಿಗೆ ಬಹಳ ಖೇದವೆನಿಸಿತು. ಹೀಗಾಗಿ ಅವರು ಸ್ವತಃ ಅರಿವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಗಮನ ಹರಿಸಿದರು. ತಮ್ಮ ಪರಂಪರೆಯನ್ನು ಅರಿಯುವ ಈ ಉತ್ಸಾಹದಲ್ಲಿ ಅವರಿಗೆ ಅನೇಕ ಶಿಲೆಗಳು ಮತ್ತು ಶಿಲಾಶಾಸನಗಳು ದೊರೆತವು. ಈ ಕೆಲಸದಲ್ಲಿ ಅವರ ಮನಸ್ಸು ಅದೆಷ್ಟು ಮಗ್ನವಾಯಿತೆಂದರೆ, ಅವರು ಎಪಿಗ್ರಾಫಿ ಅಂದರೆ ಶಿಲಾಲೇಖನಗಳಿಗೆ ಸಂಬಂಧಿಸಿದ ವಿಷಯದಲ್ಲಿ ಡಿಪ್ಲೊಮಾ ಪದವಿಯನ್ನು ಕೂಡಾ ಪಡೆದರು. ಇತ್ತೀಚೆಗೆ ಅವರು ನಿವೃತ್ತರಾಗಿದ್ದಾರೆ, ಆದರೂ ಬೆಂಗಳೂರಿನ ಇತಿಹಾಸವನ್ನು ಅನ್ವೇಷಿಸುವ ಅವರ ಹವ್ಯಾಸ ಇಂದಿಗೂ ಅದೇ ರೀತಿ ಉಳಿದಿದೆ. ನನ್ನ ಕುಟುಂಬದ ಬಂಧುಗಳೇ, ಈಗ ಹಬ್ಬಗಳ ಕಾಲ ಕೂಡಾ ಆಗಮಿಸಿದೆ. ನಿಮಗೆಲ್ಲರಿಗೂ ಮುಂಚಿತವಾಗಿಯೇ ರಕ್ಷಾಬಂಧನ ಹಬ್ಬದ ಶುಭಾಶಯಗಳು. ನಿಮ್ಮೊಂದಿಗೆ ಮುಂದಿನ ಬಾರಿ ಕೆಲವು ಹೊಸ ವಿಷಯಗಳೊಂದಿಗೆ ಮತ್ತೆ ಮನದ ಮಾತು ಆಡುತ್ತೇನೆ. ಅಲ್ಲಿಯವರೆಗೆ ನನಗೆ ಅನುಮತಿ ನೀಡಿ. ಅನೇಕಾನೇಕ ಧನ್ಯವಾದ. ನಮಸ್ಕಾರ.

**– ಕೃಪೆ : ಆಕಾಶವಾಣಿ, ಬೆಂಗಳೂರು**

# ಭಾರತ ಸಂವಿಧಾನದ ಶ್ರೇಷ್ಠತೆ ಮತ್ತು ವೈಶಿಷ್ಟ್ಯತೆ

**(49ನೇ ಪುಟದಿಂದ)**

ವ್ಯವಸ್ಥೆ ಅವಶ್ಯಕತೆ ಇದೆ ಎಂದು ಮನಗಂಡ ಸಂವಿಧಾನ ರಚನಾಕಾರರು ಸಂವಿಧಾನದಲ್ಲಿ ಸ್ವತಂತ್ರ (ಶಾಸಕಾಂಗ ಮತ್ತು ಕಾರ್ಯಾಂಗದಿಂದ) ಮತ್ತು ಏಕೀಕೃತ ನ್ಯಾಯಾಂಗ ವ್ಯವಸ್ಥೆಗೆ ಅವಕಾಶ ಕಲ್ಪಿಸಿದ್ದಾರೆ. ಇದರಿಂದ ನ್ಯಾಯಾಂಗವು ನಿಷ್ಪಕ್ಷಪಾತವಾಗಿ ಕೆಲಸ ಮಾಡಲು ಸಾಧ್ಯವಾಗಿದೆ.

**12)ತುರ್ತು ಪರಿಸ್ಥಿತಿಗಳು:–**

ರಾಷ್ಟ್ರದಲ್ಲಿ ಉದ್ಭವಿಸಬಹುದಾದ ಯಾವುದೇ ಬಗೆಯ ತುರ್ತು ಪರಿಸ್ಥಿತಿಗಳನ್ನು ಎದುರಿಸಲು ಸಂವಿಧಾನದ 18ನೇ ಭಾಗದಲ್ಲಿ 3 ಬಗೆಯ ತುರ್ತು ಪರಿಸ್ಥಿತಿಗಳನ್ನು ಘೋಷಿಸಲು ಅವಕಾಶ ಇದೆ. 352ನೇ ವಿಧಿ ಪ್ರಕಾರ ರಾಷ್ಟ್ರೀಯ ತುರ್ತು ಪರಿಸ್ಥಿತಿ, 356ನೇ ವಿಧಿ ಪ್ರಕಾರ ರಾಜ್ಯ ತುರ್ತು ಪರಿಸ್ಥಿತಿ 360ನೇ ವಿಧಿ ಪ್ರಕಾರ ಆರ್ಥಿಕ ತುರ್ತು ಪರಿಸ್ಥಿತಿ. ತುರ್ತು ಪರಿಸ್ಥಿತಿಗಳಲ್ಲಿ ರಾಷ್ಟ್ರಪತಿ ಸರ್ಕಾರದ ಶಾಸಕಾಂಗ ಮತ್ತು ಆಡಳಿತಾಂಗಗಳ ಅಧಿಕಾರಗಳನ್ನು ಪಡೆದುಕೊಳ್ಳುತ್ತಾರೆ.

ಇಷ್ಟೆಲ್ಲಾ ಸಾಮಾಜಿಕ ನ್ಯಾಯವನ್ನು ಒದಗಿಸಿರುವ ಮತ್ತು ಎಲ್ಲಾ ಮಾಹಿತಿಗಳನ್ನು ಒಳಗೊಂಡಿರುವ ಭಾರತ ಸಂವಿಧಾನ ವಿಶ್ವದಲ್ಲೇ ಅತ್ಯಂತ ವಿಶಿಷ್ಟ ಸಂವಿಧಾನವಾಗಿದೆ. ಪ್ರಜೆಗಳ ಪ್ರಗತಿಗಾಗಿ ಮೂಲಭೂತ ಹಕ್ಕುಗಳನ್ನು ನೀಡಿರುವ ಸಂವಿಧಾನ ಸಾಮಾಜಿಕ ನ್ಯಾಯಕ್ಕಾಗಿ ರಾಜ್ಯ ನಿರ್ದೇಶಕ ತತ್ವಗಳಿಗೂ ಅವಕಾಶ ನೀಡಿದೆ. ಮತ್ತು ದೇಶದ ಪ್ರಗತಿ, ಏಕತೆ ಮತ್ತು ಸಮಗ್ರತೆಗಾಗಿ ಮೂಲಭೂತ ಕರ್ತವ್ಯಗಳನ್ನು ನೀಡಿದೆ. ಪ್ರತಿಯೊಬ್ಬರೂ ಸಂವಿಧಾನ ಮತ್ತು ಸಂವಿಧಾನ ರಚನಾಕಾರರ ಆದರ್ಶಗಳು, ಮೌಲ್ಯಗಳು ಮತ್ತು ತತ್ವಗಳನ್ನು ಅಳವಡಿಸಿಕೊಂಡು ಕಾನೂನು ಮತ್ತು ನೀತಿ ನಿಯಮಗಳನ್ನು ಗೌರವಿಸಿ ಪಾಲಿಸಬೇಕು.



Scanned with ACE Scanner

# ನ್ಯಾಯ ಬಂಧು

## ಉಚಿತ ಕಾನೂನು ನೆರವು ಮತ್ತು ಸಲಹೆ

ಕಾನೂನು ಸೇವೆಗಳ ಪ್ರಾಧಿಕಾರ ಕಾಯಿದೆ 1987 ರ ಕಲಂ 12 ರ ಅಡಿಯಲ್ಲಿ, ಪರಿಶಿಷ್ಟ ಜಾತಿ ಬುಡಕಟ್ಟು ಜನಾಂಗದವರು ಸೇರಿದಂತೆ ಸೌಲಭ್ಯ ವಂಚಿತರು, ಇತರ ಹಿಂದುಳಿದ ವರ್ಗದವರು, ಕಳ್ಳಸಾಗಣೆ ಅಥವಾ ಭಿಕ್ಷಾಟನೆ, ಸಂತ್ರಸ್ತರುಗಳು ಮತ್ತು ಇತರ ಅರ್ಹ ವರ್ಗದವರು ನ್ಯಾಯಾಂಗ ಇಲಾಖೆಯ ನ್ಯಾಯ ಬಂಧು ಕಾರ್ಯಕ್ರಮದ ಮೂಲಕ ಉಚಿತ ಕಾನೂನು ನೆರವು ಮತ್ತು ಸಲಹೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.

ನ್ಯಾಯ ಬಂಧು ಜನಹಿತಕ್ಕಾಗಿ ಇರುವ ಕಾನೂನು ಸೇವೆಯಾಗಿದ್ದು, ನೊಂದಾಯಿತ ಫಲಾನುಭವಿಗಳೊಂದಿಗೆ ನೊಂದಾಯಿತ ವಕೀಲರ ಸಂಪರ್ಕ ಕಲ್ಪಿಸಲು ಅಭಿವೃದ್ಧಿಪಡಿಸಲಾಗಿದೆ. ಈ ಯೋಜನೆಯು ಕಾನೂನು ಸಲಹೆಯನ್ನು ಪಡೆಯಲು ಸಾಧ್ಯವಾಗದ ಮತ್ತು/ಅಥವಾ ಕಾನೂನು ನೆರವು ಪಡೆಯಲಾಗದಂಥ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಸ್ವಯಂಪ್ರೇರಿತ ಕಾನೂನು ಸಲಹೆಯನ್ನು ನೀಡುತ್ತದೆ. ನಿಜವಾಗಿ ಕಾನೂನು ನೆರವಿನ ಅಗತ್ಯವಿರುವವರ ಪರವಾಗಿ, ವಕೀಲರು ಉಚಿತವಾಗಿ ಅಥವಾ ಕನಿಷ್ಠ ವೆಚ್ಚದಲ್ಲಿ ಪ್ರತಿನಿಧಿಸುವ ಮೂಲಕ, ಅವರ ಕಾನೂನಾತ್ಮಕ ಸಮಸ್ಯೆಗಳನ್ನು ಅರ್ಥಪೂರ್ಣವಾಗಿ ಪರಿಹರಿಸಲು ಅವಕಾಶವನ್ನು ಒದಗಿಸುತ್ತಾರೆ. ಈ ಕಾರ್ಯಕ್ರಮದ ಅಡಿಯಲ್ಲಿ, ತಮ್ಮ ಸಮಯ ಮತ್ತು ಸೇವೆಗಳನ್ನು ಸ್ವಯಂಸೇವೆಯ ರೂಪದಲ್ಲಿ ಒದಗಿಸಲು ಆಸಕ್ತಿ ಹೊಂದಿದ ವೃತ್ತಿನಿರತ ವಕೀಲರನ್ನು ಮೊಬೈಲ್ ತಂತ್ರಜ್ಞಾನದ ಮೂಲಕ ಅರ್ಹ ಸೌಲಭ್ಯ ವಂಚಿತ ಫಲಾನುಭವಿಗಳೊಂದಿಗೆ ಸಂಪರ್ಕ ಕಲ್ಪಿಸಲಾಗುತ್ತದೆ. ಆ್ಯಂಡ್ರೊಯಿಡ್/ ಐಓಸ್‌ಗೆ ಸರಿಹೊಂದುವಂತೆ ನ್ಯಾಯ ಬಂಧು ಮೊಬೈಲ್ ಅಪ್ಲಿಕೇಶನ್ ಅನ್ನು ಅಭಿವೃದ್ಧಿಪಡಿಸಲಾಗಿದೆ ಮತ್ತು ಯುಎಂಎಎನ್‌ಜಿ-ಉಮಂಗ್ ವೇದಿಕೆಯಲ್ಲಿ ಕೂಡ ಇದನ್ನು ಅಳವಡಿಸಲಾಗಿದೆ.

ಪ್ರೊ ಬೊನೊ ಎಂಬ ಪದವು 'ಪ್ರೊ ಬೊನೊ ಪಬ್ಲಿಕೊ' ಎಂಬುದರ ಭಾಗವಾಗಿದೆ. ಇದು ಒಂದು ಲ್ಯಾಟಿನ್ ಭಾಷೆಯ ಪದವಾಗಿದ್ದು, 'ಸಾರ್ವಜನಿಕ ಒಳಿತಿಗಾಗಿ' ಎಂದರ್ಥ ಹೊಂದಿರುತ್ತದೆ. ವಾಸ್ತವದಲ್ಲಿ ಅದರಲ್ಲೂ ವಿಶೇಷವಾಗಿ ಕಾನೂನು ವೃತ್ತಿಯಲ್ಲಿ, ಕಾನೂನು ಸಲಹೆಯನ್ನು ಪಡೆಯಲು ಸಾಧ್ಯವಾಗದ ಮತ್ತು/ಅಥವಾ ಕಾನೂನು ನೆರವು ಪಡೆಯಲು ಸಾಧ್ಯವಾಗದ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಸ್ವಯಂಪ್ರೇರಿತವಾಗಿ ಕಾನೂನು ಸಲಹೆಯನ್ನು ನೀಡುವ ಕ್ರಮವನ್ನು ವಿವರಿಸಲು ಈ ಪದವನ್ನು ಬಳಸಲಾಗುತ್ತದೆ. ಕಾನೂನು ಸಹಾಯದ ನಿಜವಾದ ಅಗತ್ಯವಿರುವವರಿಗೆ, ವಕೀಲರು ಉಚಿತವಾಗಿ ಅಥವಾ ಕನಿಷ್ಠ ವೆಚ್ಚದಲ್ಲಿ ಪ್ರತಿನಿಧಿಸುವ ಮೂಲಕ ಅವರ ಕಾನೂನು ಸಮಸ್ಯೆಗಳನ್ನು ಅರ್ಥಪೂರ್ಣವಾಗಿ ಪರಿಹರಿಸಲು ಅವಕಾಶವನ್ನು ಒದಗಿಸುತ್ತಾರೆ.

ವಾಸ್ತವವಾಗಿ ಪ್ರೊ ಬೊನೊ ಕಾನೂನು ಸೇವೆಗಳು ಉಚಿತವಾಗಿರುತ್ತವೆ. ಡಿಪಾರ್ಟ್ಮೆಂಟ್ ಆಫ್ ಜಸ್ಟೀಸ್ ಕಾರ್ಯಕ್ರಮಡಿ ನೊಂದಾಯಿಸಲಾದ ಪ್ರೊ ಬೊನೊ ವಕೀಲರು ನೊಂದಾಯಿತ ಅರ್ಜಿದಾರರಿಗೆ ನೀಡಿದ ಕಾನೂನು ಸಲಹೆ ಅಥವಾ ಪ್ರಾತಿನಿಧ್ಯಕ್ಕಾಗಿ ಯಾವುದೇ ಶುಲ್ಕವನ್ನು ವಿಧಿಸುವುದಿಲ್ಲ. ಆದಾಗ್ಯೂ, ಅರ್ಜಿದಾರ ಮತ್ತು ವಕೀಲರ ನಡುವಿನ ಪರಸ್ಪರ ತಿಳಿವಳಿಕೆಯ ಆಧಾರದ ಮೇಲೆ, ಅರ್ಜಿದಾರರು ನಕಲು ಪ್ರತಿ ಸಿದ್ಧಪಡಿಸುವುದು, ಪೋಸ್ಟ್ ಮಾಡುವುದು ಮತ್ತು ಬೆರಳಚ್ಚು ಶುಲ್ಕಗಳಂತಹ ಸಾಂದರ್ಭಿಕ ವೆಚ್ಚಗಳನ್ನು ಭರಿಸಬೇಕಾಗಬಹುದು.

ಯಾವುದೇ ಅರ್ಜಿದಾರರು ನೋಂದಾಯಿಸಿದ ಪ್ರಕರಣವನ್ನು ಎರಡು ನಿಯತಾಂಕಗಳನ್ನು ಆಧರಿಸಿ ವಕೀಲರನ್ನು ನಿಯೋಜಿಸಲಾಗುತ್ತದೆ:

ಎ. ವೃತ್ತಿನಿರತ ಪ್ರದೇಶ/ಪ್ರಕರಣದ ವರ್ಗ - ಸಿವಿಲ್ ಅಥವಾ ಕ್ರಿಮಿನಲ್

ಬಿ. ವೃತ್ತಿನಿರತ ನ್ಯಾಯಾಲಯದ /ಪ್ರಕರಣವು ಬಾಕಿ ಉಳಿದಿರುವ ನ್ಯಾಯಾಲಯ - ನ್ಯಾಯಾಲಯದ ಹೆಸರು

ಪ್ರೋಗ್ರಾಂನಲ್ಲಿ ಸಂಗ್ರಹಿಸಲಾದ ವಕೀಲರ ದತ್ತಾಂಶವನ್ನು ಶೋಧಿಸುವ ಮೂಲಕ ಈ ಹೊಂದಾಣಿಕೆಯನ್ನು ಸ್ವಯಂಚಾಲಿತವಾಗಿ ಮಾಡಲಾಗುತ್ತದೆ.

**ಪಾತ್ರ ಮತ್ತು ಜವಾಬ್ದಾರಿಗಳು**

**ಪ್ರಧಾನ ನೋಂದಣಾಧಿಕಾರಿ, ಉಚ್ಚ ನ್ಯಾಯಾಲಯ** : ಇವರು ನ್ಯಾಯ ಬಂಧು ಸಮಿತಿಗೆ ಅನುಷ್ಠಾನಕ್ಕೆ ಬೆಂಬಲವನ್ನು ಒದಗಿಸುತ್ತಾರೆ. ನೋಂದಣಿ, ಅನುಮೋದನೆಯನ್ನು ನಿರ್ವಹಿಸುತ್ತಾರೆ ಮತ್ತು ವಕೀಲರ ಕಾರ್ಯಕ್ಷಮತೆಯನ್ನು ಪರಿಶೀಲಿಸುತ್ತಾರೆ. ಉಚ್ಚ ನ್ಯಾಯಾಲಯ ಮಟ್ಟದಲ್ಲಿ ಈ ಸಮಿತಿಯ ಚಟುವಟಿಕೆಗಳನ್ನು ನಿರ್ವಹಿಸಲು ಮತ್ತು ಆಡಳಿತ ಕೈಗೊಳ್ಳಲು ಉಸ್ತುವಾರಿಯನ್ನು ನೇಮಿಸುತ್ತಾರೆ. ನಿಯಮಿತವಾಗಿ ನ್ಯಾಯ ಬಂಧು ಸಮಿತಿಯ ಚಟುವಟಿಕೆಗಳ ಕುರಿತು ತರಬೇತಿ ಮತ್ತು ಜಾಗೃತಿ ಶಿಬಿರಗಳನ್ನು ಆಯೋಜಿಸುತ್ತಾರೆ.

**ನ್ಯಾಯಾಂಗ ಇಲಾಖೆ** : ಈ ಉಪಕ್ರಮದ ಯಶಸ್ವಿ ಅನುಷ್ಠಾನಕ್ಕಾಗಿ ಸಮನ್ವಯತೆ ಬೆಂಬಲವನ್ನು ಒದಗಿಸುತ್ತದೆ ಮತ್ತು ಅನುಕೂಲ ಕಲ್ಪಿಸುತ್ತದೆ. ಉಚ್ಚ ನ್ಯಾಯಾಲಯದ ಸಮನ್ವಯದೊಂದಿಗೆ ತ್ರೈಮಾಸಿಕ ಪರಿಶೀಲನಾ ಸಭೆಯನ್ನು ನಡೆಸುತ್ತದೆ ಮತ್ತು ಎಲ್ಲಾ ಪಾಲುದಾರರಿಗೆ ಸಲ್ಲಿಸಲು ಕ್ರೋಢೀಕೃತ ಆರು-ಮಾಸಗಳ ವರದಿಯನ್ನು ಅಭಿವೃದ್ಧಿಪಡಿಸುತ್ತದೆ.

**ಸಿಎಸ್‌ಸಿ - ಇಜಿಓವಿ** : ನ್ಯಾಯ ಬಂಧು ಸಮಿತಿಯ ವೆಬ್-ಆಧರಿತ ಅಪ್ಲಿಕೇಶನ್‌ನ ವಿನ್ಯಾಸ, ಅಭಿವೃದ್ಧಿ, ಕಾರ್ಯಾಚರಣೆ ಮತ್ತು ನಿರ್ವಹಣೆಯಲ್ಲಿ ನ್ಯಾಯಾಂಗ ಇಲಾಖೆಯೊಂದಿಗೆ ಸಮನ್ವಯದೊಂದಿಗೆ ಮೇಲ್ವಿಚಾರಣೆ ಮತ್ತು ವರದಿ ಮಾಡುವ ಉದ್ದೇಶಗಳಿಗಾಗಿ ಬೆಂಬಲವನ್ನು ಒದಗಿಸುತ್ತದೆ. ಈ ಅಪ್ಲಿಕೇಶನ್‌ನ ಬಳಕೆದಾರರ ಕೈಪಿಡಿಯನ್ನು ಅಭಿವೃದ್ಧಿಪಡಿಸುವುದು ಅಲ್ಲದೆ ಬರವಣಿಗೆಯ ಕಾರ್ಯವಿಧಾನಗಳು, ಕಾರ್ಯಕಲಾಪಗಳು ಮತ್ತು ಘಟನಾವಳಿಗಳನ್ನು, ದತ್ತಾಂಶವನ್ನು ನಿರ್ವಹಿಸುವುದು, ತರಬೇತಿಯನ್ನು ಒದಗಿಸುವಲ್ಲಿ ಬೆಂಬಲ ನೀಡುತ್ತದೆ.

www.probno-doj.in ನಲ್ಲಿ ಇ ಯೋಜನೆ ಕುರಿತು ವಿಸ್ತೃತ ಮಾಹಿತಿ ಲಭ್ಯವಿದೆ



Scanned with ACE Scanner

Yojana(Kannada) September 2023 Date of Publication 2nd September 2023 Date of Posting 10th/15th September 2023 ISSN 0971-8737
"Registered" Reg.No.RNP/KA/BGS/2269/2022-2024 Total No.of Pages : 52+4 Cover Pages Regd.No. RNI 43034/1985
"Licensed to Post without Pre-payment" License No. PMG BG/WPP/388/2022-2024 YOJANA Kannada Monthly Posted at Bengaluru PSO BG-560026

**PUBLICATIONS DIVISION**
Ministry of Information and Broadcasting
Government of India

# Wait is over!

*Rush to grab your copy*




## Now available

at

**www.publicationsdivision.nic.in**

&

## Book Gallery

**Publications Division**
Ministry of Information & Broadcasting
Government of India
Soochna Bhawan, Lodhi Road, New Delhi-110003

For business related queries on this book,
contact: 011-24365609 or businesswng@gmail.com.

Printed & Published by **Anupama Bhatnagar**, Director General, Publications Division, Ministry of Information & Broadca
Published at Publications Division 1st Floor, 'F' Wing, Kendriya Sadana, Koramangala, Bengaluru-560 034. Ph : 080 2553
Designed & Printed at Omkar Offset Printers, No. 3/3, 1st Main Road, New Tharagupet, Bengaluru - 560 002. Ph : 080 8186
Chief Editior: Manogyan Rani Pal, Editor : Yashwant Shehnai

Scanned with ACE Scanner